10 November 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 70 | Issue: 9 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

ಭಾವನಾಂತರಂಗ

ಆದರವಿಲ್ಲದ ಮನೆಯ ಔತಣಕ್ಕೆ ಹೋಗಬಾರದು ನಿಜ, ಆದರೆ ಸಂಬಂಧಗಳ ಸರಪಳಿ ಅದಕ್ಕೆ ಎಂದಿಗೂ ಅನುಮತಿ ನೀಡದು!

ಸ್ನೇಹಾ ಆನಂದ್

ಶುಭಾಶಯಗಳು

ವರ್ತಮಾನ ಪತ್ರಿಕೆಯ ಸಮಸ್ತ ಓದುಗರಿಗೆ, ಜಾಹೀರಾತುದಾರರಿಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.

ಬಿಡುವು

ದೀಪಾವಳಿ ಹಬ್ಬದ ನಿಮಿತ್ತ ಬುಧವಾರ ಕಚೇರಿಗೆ ರಜೆ ಇರುವುದರಿಂದ ಗುರುವಾರದ ಸಂಚಿಕೆ ಪ್ರಕಟವಾಗುವುದಿಲ್ಲ.

-ಸಂಪಾದಕರು

ಬೇಜವಾಬ್ದಾರಿ ಕೇಂದ್ರ ಸಚಿವ

ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಶಿವಲಿಂಗೇಗೌಡ ವಾಗ್ದಾಳಿ



ಹಾಸನ: ಎಚ್.ಡಿ.ಕುಮಾರಸ್ವಾಮಿ ಒಬ್ಬ ಬೇಜವಾಬ್ದಾರಿ ಕೇಂದ್ರ ಸಚಿವ ಎಂದು ಸಚಿವ ಶಿವಲಿಂಗೇಗೌಡ ತೀವ್ರ ವಾಗ್ದಾಳಿ ನಡೆಸಿದರು.


ಹಾಸನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಿವಲಿಂಗೇಗೌಡ ಅವರು, ಇದು ಎಐ ಯುಗ. ಯಾರು ಬೇಕಾದರೂ ಸುಳ್ಳು ವಾಪ್ ಚಾಟ್ ಸೃಷ್ಟಿ ಮಾಡಿ ಹಂಚಿಕೊಳ್ಳಬಹುದು ಎಂದರು. ತಮ್ಮ ವಿರುದ್ಧ ಲಂಚದ ಆರೋಪ ಮಾಡಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಗೆ ತಿರುಗೇಟು ನೀಡಿದರು.

ಕುಮಾರಸ್ವಾಮಿ ಬಿಡುಗಡೆ ಮಾಡಿರುವ ಚಾಟ್‌ನಲ್ಲಿ ಶಶಿಕಿರಣ್ ಎಂಬ ವ್ಯಕ್ತಿಯ ಹೆಸರಿದೆ ಹೊರತು, ಆತ ಯಾರ ಜೊತೆ ಚಾಟ್ ಮಾಡಿದ್ದಾನೆ ಎಂಬ ವಿವರ ಇಲ್ಲ. ರಾತ್ರಿ ಯಾರೋ ತಂದುಕೊಟ್ಟ ದಾಖಲೆ ಎಂದು ಹೇಳುವ ಕುಮಾರಸ್ವಾಮಿ, ಅದನ್ನು ತಂದುಕೊಟ್ಟ ವ್ಯಕ್ತಿಯ ಹೆಸರನ್ನು ಬಹಿರಂಗಪಡಿಸಲಿ ಎಂದು ಸವಾಲು ಹಾಕಿದರು.

ನನ್ನ ವಿರುದ್ಧ ಮಾಡಿರುವ ಆರೋಪ ಸಾಬೀತು ಮಾಡದಿದ್ದರೆ ನಾನು ಸುಮ್ಮನೆ ಬಿಡಲ್ಲ ಎಂದು ಗುಡುಗಿದ ಶಿವಲಿಂಗೇಗೌಡ, ಈ ಚಾಟ್‌ನ

ಪುಟ 2ಕ್ಕೆ

ಗೌರಿ, ಕಲಬುರ್ಗಿ ಹತ್ಯೆಯಲ್ಲಿ ಸಂಘ ಪರಿವಾರದ ಕೈವಾಡ: ಖರ್ಗೆ



ತಿರುವನಂತಪುರಂ: ಕರ್ನಾಟಕದಲ್ಲಿ ನಡೆದ ಗೌರಿ ಲಂಕೇಶ್, ಎಂ.ಎಂ.ಕಲಬುರ್ಗಿ ಹತ್ಯೆ ಹಿಂದೆ ಸಂಘ ಪರಿವಾರದವರ ಕೈವಾಡ ಇದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಗಂಭೀರ ಆರೋಪ ಮಾಡಿದರು.

ಕೇರಳದ ಎರ್ನಾಕುಲಂನಲ್ಲಿ ನಡೆದ ಮುಸ್ಲಿಂ ಯೂತ್ ಲೀಗ್ ರಾಜ್ಯ ಸಮ್ಮೇಳನದಲ್ಲಿ ಮಾತನಾಡಿದ ಖರ್ಗೆ, ಈ ಹತ್ಯೆಗಳ ಹಿಂದೆ ಸಂಘಕ್ಕೆ ಸಂಬಂಧಿಸಿದ ವ್ಯಕ್ತಿಗಳಿದ್ದಾರೆ. ರಾಜ್ಯ ಸರ್ಕಾರ ತನಿಖೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ. 6 ತಿಂಗಳ ಒಳಗೆ ಹತ್ಯೆ ಪ್ರಕರಣದ ಆರೋಪಿಗಳನ್ನು ಬಂಧಿಸಲಾಗುವುದು. ಪ್ರಕರಣಗಳ ತನಿಖೆ ಮತ್ತು ಕ್ರಮಕ್ಕೆ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

ಎಚ್‌ಡಿಕೆಗೆ ಹಾಸನ ಡಿಸಿ ಟಾಂಗ್

ಸಿಂಹ ಕೂತಿದ್ದರೂ ನಾಯಿಗಳು ಬೊಗಳುವ ಸ್ಟೇಟಸ್



ಹಾಸನ: ಹಾಸನ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮತ್ತು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ನಡುವಿನ ಜಟಾಪಟಿ ಮತ್ತೊಂದು ಹಂತಕ್ಕೆ ಮುಟ್ಟಿದೆ.

ಜಿಲ್ಲಾಧಿಕಾರಿ ತಮ್ಮ ವಾಪ್, ಎಕ್ಸ್ ವೇದಿಕೆಯಲ್ಲಿ ಸಿಂಹ ಸುಮ್ಮನೆ ಕೂತಿದ್ದರೂ ನಾಯಿಗಳು ಬೊಗಳುವ ಇಂಗ್ಲಿಷ್ ಬರಹವಿರುವ ಫೋಟೋವನ್ನು ಹಂಚಿಕೊಳ್ಳುವ ಮೂಲಕ ತಿರುಗೇಟು ನೀಡಿದ್ದಾರೆ. ಅಲ್ಲದೆ, ಪ್ರತಿಯೊಂದು ಧ್ವನಿಯೂ ಪ್ರತಿಕ್ರಿಯೆಗೆ ಅರ್ಹವಲ್ಲ ಎಂದು ಹಾಕಿದ್ದಾರೆ. ಈ ಪೋಸ್ಟ್ ಇದೀಗ ಪರ ವಿರೋಧ ಚರ್ಚೆಗೆ ಕಾರಣವಾಗಿದೆ.


ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರ ಲಂಚದ ಆರೋಪಕ್ಕೆ ಖಡಕ್ಕಾಗಿ ಪ್ರತಿಕ್ರಿಯೆ ನೀಡಿದ್ದ ಲತಾ ಕುಮಾರಿ, ಬಳಿಕ ತಮ್ಮ ಸೋಷಿಯಲ್ ಮೀಡಿಯಾಗಳಲ್ಲಿ ಪೋಸ್ಟ್ ಹಾಕುವ ಮೂಲಕ ಮತ್ತೊಮ್ಮೆ ಕೌಂಟರ್ ಕೊಟ್ಟಿದ್ದಾರೆ.

ಕುಮಾರಸ್ವಾಮಿ ಆರೋಪಕ್ಕೆ ಮಾತನಾಡಿದ್ದ ಡಿಸಿ, ನನ್ನನ್ನ ಟಾರ್ಗೆಟ್ ಮಾಡಿದ್ದಾರೆ. ಡೇ 1ನಿಂದ ಇದನ್ನ ಅನುಭವಿಸುತ್ತಲೇ ಬಂದಿದ್ದೇನೆ ಎಂದು ಟೀಕಿಸಿದ್ದರು.


ಕೃಪಾ ಆಳ್ವಾ ತನಿಖೆಗೆ ಹಾಜರು

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಸ್ಟಿಂಗ್ ಆಪರೇಷನ್ ಪ್ರಕರಣದಲ್ಲಿ ಆರೋಪಿ ಕೃಪಾ ಆಳ್ವಾ ಸೋಮವಾರ ವಿಚಾರಣೆಗೆ ಹಾಜರಾಗಿದ್ದರು. ಸೈಬರ್ ಕ್ರೈಂ ಪೊಲೀಸರು ಸುಮಾರು 2 ಗಂಟೆ ಕಾಲ ವಿಚಾರಣೆ ನಡೆಸಿದರು.

ವಿಚಾರಣೆಗೆ ಹಾಜರಾಗುವಂತೆ ಕೃಪಾ ಆಳ್ವಾಗೆ ಸಿಸಿಬಿ ನೋಟಿಸ್ ನೀಡಿತ್ತು. ಮೊಬೈಲ್, ಲ್ಯಾಪ್‌ಟಾಪ್ ಸಮೇತ ವಿಚಾರಣೆಗೆ ಬರುವಂತೆ ಸೂಚಿಸಲಾಗಿತ್ತು. ಪ್ರಕರಣ ಸಂಬಂಧ ಮಧ್ಯಂತರ ನಿರೀಕ್ಷಣಾ ಜಾಮೀನು ಪಡೆದ ಬಳಿಕ ಮೊದಲ ಬಾರಿಗೆ ಕೃಪಾ ಆಳ್ವಾ ವಿಚಾರಣೆಗೆ ಹಾಜರಾದರು. 2 ಗಂಟೆ ವಿಚಾರಣೆ ಬಳಿಕ ಮತ್ತೆ ನವೆಂಬರ್ 11ರಂದು ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ತಿಳಿಸಿದ್ದಾರೆ.



ರೆಸಾರ್ಟ್ ಈಜುಕೊಳದಲ್ಲಿ ಮುಳುಗಿ ಮಗು ಸಾವು



ರಾಮನಗರ: ನಗರದ ಹೊರವಲಯದ ಖಾಸಗಿ ರೆಸಾರ್ಟ್‌ನ ಸ್ವಿಮ್ಮಿಂಗ್ ಪೂಲ್‌ನಲ್ಲಿ ಮುಳುಗಿ ಮಗು ಸಾವನ್ನಪ್ಪಿರುವ ಘಟನೆ ತಾಲೂಕಿನ ಹರಿಸಂದ್ರ ಗ್ರಾಮದ ಬಳಿ ನಡೆದಿದೆ.

ಮಣಿಪುರ ಮೂಲದ ಲೀನ್ ಮತ್ತು ಟ್ರೇಸಿ

ಪುಟ 2ಕ್ಕೆ

ಅರಮನೆ ಆಸ್ತಿ ವಶಕ್ಕೆ ಷಡ್ಯಂತ್ರ

ಕಾರ್ಯಾಂಗ ದುರ್ಬಳಕೆ । ಸಂಸದ ಯದುವೀರ್ ಪ್ರತಿಕ್ರಿಯೆ



ಮೈಸೂರು: ಮೈಸೂರು ಅರಮನೆಯನ್ನು ರಾಜಮನೆತನದಿಂದ ವಶಪಡಿಸಿಕೊಳ್ಳಲು ಸರ್ಕಾರದಿಂದ ಕಾರ್ಯಾಂಗವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಈಗ ಅರಮನೆ ಆಸ್ತಿಯನ್ನು ವಶಕ್ಕೆ ಪಡೆಯಲು ಷಡ್ಯಂತ್ರ ನಡೆದಿದೆ ಎಂದು ರಾಜವಂಶಸ್ಥ ಹಾಗೂ ಬಿಜೆಪಿ ಸಂಸದ ಯದುವೀರ್ ಒಡೆಯರ್ ಆತಂಕ ವ್ಯಕ್ತಪಡಿಸಿದರು.

ಮೈಸೂರು ರಾಜಮನೆತನ ಮತ್ತು ರಾಜ್ಯ ಸರ್ಕಾರದ ನಡುವಿನ ಸಂಘರ್ಷ ತೀವ್ರ ಸ್ವರೂಪ ಪಡೆದುಕೊಂಡಿರುವ ಸಂದರ್ಭದಲ್ಲಿ ಮೊದಲ ಬಾರಿಗೆ ಯದುವೀರ್ ಒಡೆಯರ್ ಸೋಮವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ನ್ಯಾಯಾಲಯದ ಮೂಲಕ ನ್ಯಾಯ ಸಿಗುವ ವಿಶ್ವಾಸ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೈಯಕ್ತಿಕ ಟೀಕೆಗಳು ಮತ್ತು ಆಸ್ತಿ ವಿಷಯಗಳು ಸಾರ್ವಜನಿಕ ಚರ್ಚೆಗೆ ಅಪ್ರಸ್ತುತ. ಇವುಗಳ ಕುರಿತ ವ್ಯಾಜ್ಯ ನ್ಯಾಯಾಲಯದಲ್ಲಿ ತೀರ್ಮಾನವಾಗಬೇಕು. ನ್ಯಾಯಾಲಯದ ಕಾನೂನು ಪ್ರಕಾರದ ಆದೇಶವೇ ಅಂತಿಮ ಸತ್ಯ ಎಂದು ಹೇಳಿದರು.

ಅರಮನೆ ಆಸ್ತಿ ವಿವಾದಗಳು ಸುಪ್ರೀಂ ಕೋರ್ಟ್‌ನಲ್ಲಿರುವುದರಿಂದ, ನ್ಯಾಯಾಲಯದ ತೀರ್ಮಾನದ ನಂತರವೇ ನಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದಾಗಿ ಒಡೆಯರ್ ತಿಳಿಸಿದರು.

ದಸರಾ ಮಹೋತ್ಸವದ ಕುರಿತು ಮಾತನಾಡಿದ ಅವರು, ಈ ಬಾರಿಯ ದಸರಾ ಮುಗಿದಿದೆ. ಅದರ ಲೋಪಗಳ ಚರ್ಚೆಯನ್ನು ಮುಂದುವರಿಸುವ ಅಗತ್ಯವಿಲ್ಲ ಎಂದು ನಮ್ಮ ತಾಯಿ ಈಗಾಗಲೇ ಹೇಳಿದ್ದಾರೆ. ಮುಂದಿನ ದಸರಾ ಸುಧಾರಿಸುವ ದೃಷ್ಟಿಯಿಂದ ಕಾರ್ಯನಿರ್ವಹಿಸಬೇಕು. ದಸರಾದಿಂದ ರಾಜಕೀಯ ಲಾಭದ ನಿರೀಕ್ಷೆ. ದಸರಾ ಯಶಸ್ವಿಯಾದರೆ ಮೈಸೂರಿಗೇ ಲಾಭ ಎಂದು ಹೇಳಿದರು.

ಅರಮನೆ ಬೋರ್ಡ್ ಮತ್ತು ಅರಮನೆ, ಜಾಗ ಸರ್ಕಾರದ್ದು. ಅವರು ಉಳಿದುಕೊಳ್ಳಲು ಒಂದಿಷ್ಟು ಜಾಗ ಕೊಟ್ಟಿದ್ದೇವೆ ಅಷ್ಟೇ ಎಂದು ಸಚಿವ ಯತೀಂದ್ರ ಇತ್ತೀಚೆಗೆ ಹೇಳಿಕೆ ನೀಡಿದ್ದರು. ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದ ಪ್ರಮೋದಾ ದೇವಿ ಒಡೆಯರ್ ಅವರು, ಅರಮನೆ, ಅಂಬಾರಿ ಹಾಗೂ ಸಿಂಹಾಸನ ನಮ್ಮದು. ಸರ್ಕಾರ ಯದುವಂಶದ ವಾರಸುದಾರ ಅಲ್ಲ ಎಂದು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು.


13ಕ್ಕೆ ಪ್ರಧಾನಿ ಭೇಟಿ



ಮೈಸೂರು: ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ನಿರ್ಮಿಸಿರುವ 'ಬಾಗಿದ ಗುಮ್ಮಟ ಆಕೃತಿಯ ತಾರಾಲಯವನ್ನು ನ.13ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟನೆ ಮಾಡಲಿದ್ದಾರೆ.

ವಿಶ್ವದ ಮೊದಲ ಬಾಗಿದ ಗುಮ್ಮಟ ಆಕೃತಿಯ ಎಲ್‌ಇಡಿ ಪ್ಲಾನಿಟೋರಿಯಂ ನಭೋಮಂಡಲದ ಚಮತ್ಕಾರಗಳನ್ನು ಕಣ್ತುಂಬಿಕೊಳ್ಳಲು ಪ್ರಯೋಜನ ಆಗಲಿದೆ. ಭಾರತೀಯ ಖಗೋಳ ಭೌತ ವಿಜ್ಞಾನ ಸಂಸ್ಥೆ ಹಾಗೂ ಮೈಸೂರಿನ ಕಾಸ್ಮಾಲಜಿ ಶಿಕ್ಷಣ ಮತ್ತು ತರಬೇತಿ ಕೇಂದ್ರ ಈ ತಾರಾಲಯ ನಿರ್ಮಾಣಕ್ಕೆ ಸಹಕಾರ ನೀಡಿದೆ. ನಿರ್ಮಾಣಕ್ಕೆ 115 ಕೋಟಿ ರೂ. ವೆಚ್ಚ ಮಾಡಲಾಗಿದೆ ಎಂದು ಸಂಸದ ಯದುವೀರ್ ತಿಳಿಸಿದರು.

ದೀಪಾವಳಿ: ಹಾಸನಾಂಬ ದರ್ಶನಕ್ಕೆ ಭಕ್ತರು ಕಡಿಮೆ



ಹಾಸನ: ಹಾಸನಾಂಬ ದೇವಿ ದರ್ಶನಕ್ಕೆ ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಸೋಮವಾರ ಭಕ್ತರ ಸಂಖ್ಯೆ ಕೊಂಚ ಕಡಿಮೆಯಾಗಿತ್ತು. ನ.11ರ ನಂತರ ದೇವಾಲಯದ ಬಾಗಿಲು ಮುಚ್ಚಲಿದೆ. ಅಲ್ಲಿಯವರೆಗೂ ಸಾರ್ವಜನಿಕ ದರ್ಶನಕ್ಕೆ ಅನುಮತಿ ನೀಡಲಾಗಿದೆ.

ಧರ್ಮ ದರ್ಶನದ ಸಾಲಿನಲ್ಲಿ ಭಕ್ತರು ಶೀಘ್ರ ದರ್ಶನ ಪಡೆದರು. 1000, 300 ರೂ. ವಿಶೇಷ ದರ್ಶನದ ಸಾಲುಗಳಿಗಿಂತ ಧರ್ಮ ದರ್ಶನದ ಸಾಲಿನಲ್ಲಿ ಕಡಿಮೆ ಸಂಖ್ಯೆಯಲ್ಲಿ ಜನರು ದರ್ಶನ ಪಡೆದರು. ವಿವಿಧ ಕ್ಷೇತ್ರದ ಗಣ್ಯರು ಆಗಮಿಸಿ ಹಾಸನಾಂಬ ದೇವಿ ದರ್ಶನ ಪಡೆದರು. ಈ ಬಾರಿ ದೇವಾಲಯಯದ ಗರ್ಭಗುಡಿ ಬಾಗಿಲು ನ.11ಕ್ಕೆ ಮುಚ್ಚಲಿವೆ. ನ.10ರ ವರೆಗೂ ಜನಸಾಮಾನ್ಯರಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.



ಪೆಟ್ರೋಲ್‌ಗೆ ಎಥೆನಾಲ್ ಮಿಶ್ರಣ: ಕೇಂದ್ರದಿಂದ ಅಸಮರ್ಪಕ ಉತ್ತರ

ಬೆಂಗಳೂರು: ರಾಜ್ಯದ ಬಂಕ್‌ಗಳಲ್ಲಿ ಪೆಟ್ರೋಲ್‌ಗೆ ಶೇ.20ಕ್ಕೂ ಹೆಚ್ಚು ಎಥೆನಾಲ್ ಮಿಶ್ರಣ ಮಾಡಲಾಗುತ್ತಿದೆ ಎಂಬುದು ಪ್ರಯೋಗಾಲಯದ ವರದಿಯಲ್ಲಿ ಸಾಬೀತಾಗಿದೆ. ಆದರೆ ಕೇಂದ್ರ ಸರ್ಕಾರ ಇದಕ್ಕೆ ಸಮರ್ಪಕ ಉತ್ತರ ನೀಡುತ್ತಿಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ರಿಜ್ವಾನ್ ಅರ್ಷದ್ ತಿರುಗೇಟು ನೀಡಿದರು.

ರಾಜ್ಯದಲ್ಲಿ 6 ಕಡೆ ಮಿಶ್ರಣ

ಆಯಿಲ್ ಕಂಪನಿಗಳು ತಾಂತ್ರಿಕ ಅಂಶಗಳ ಬಗ್ಗೆ ಮಾತ್ರ ಮಾತಾಡಿದ್ದಾರೆ. ಆದರೆ ಪೆಟ್ರೋಲ್‌ಗೆ ಎಷ್ಟು ಪ್ರಮಾಣದಲ್ಲಿ ಎಥೆನಾಲ್ ಮಿಶ್ರಣ ಮಾಡಲಾಗುತ್ತಿದೆ ಅನ್ನೋದಕ್ಕೆ ಅವರ

ಪುಟ 2ಕ್ಕೆ



ಈ ಸಂಬಂಧ ನಡೆಸಿದ ಪ್ರಯೋಗಾಲಯ ಪರೀಕ್ಷಾ ವರದಿಗಳನ್ನು ಸುದ್ದಿಗೋಷ್ಠಿಯಲ್ಲಿ ಸೋಮವಾರ ಬಹಿರಂಗಪಡಿಸಿ ಮಾತನಾಡಿದ ಸಚಿವ ರಿಜ್ವಾನ್ ಅರ್ಷದ್,

ಪುಟ 2ಕ್ಕೆ


ಮೋದಿ ಹೇಳಿದ್ದೇ ಸತ್ಯ!

ಮೋದಿ ಸರ್ಕಾರದಲ್ಲಿ ಅವರು ಹೇಳಿದ್ದೇ ಸತ್ಯ. ಅವರದ್ದೇ ಸರಿ. ಯಾರದರೂ ಸತ್ಯ ಹೇಳಿದ್ರೆ ಅವರಿಗೆ ಒತ್ತಡ ಹಾಕಿ ವಾಪಸ್ ಹೇಳಿಕೆ ಪಡೆಯುವಂತೆ ಮಾಡ್ತಾರೆ. ಸೊಸೈಟಿ ಆಫ್ ಇಂಡಿಯನ್ ಅಟೋಮೊಬೈಲ್ ಮ್ಯಾನುಫ್ಯಾಕ್ಚರ್ ಅಸೋಸಿಯೇಷನ್ ಪತ್ರ ಬರೆದು ದೂರು ಕೊಡುತ್ತಾರೆ. ಒಂದು ಸೊಸೈಟಿ ಅವರು ಕ್ಲೋರೈಡ್ ಮತ್ತು ಸಲ್ಫರ್ ಜಾಸ್ತಿ ಇದೆ. ಇದು ಇಂಜಿನ್‌ಗೆ ಡ್ಯಾಮೇಜ್ ಮಾಡ್ತಿದೆ ಅಂತಾ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ ಎಂದು ಸಚಿವ ರಿಜ್ವಾನ್ ಹೇಳಿದರು.

ಪುಟ 2ಕ್ಕೆ

ನಿವೇಶನ ಅಕ್ರಮ–ಸಕ್ರಮ ಘೋಷಣೆ

ಸಿಲಿಕಾನ್ ಸಿಟಿ ಜನರಿಗೆ ಭರ್ಜರಿ ಗಿಫ್ಟ್: ಸಿಎಂ ಡಿ.ಕೆ.ಶಿವಕುಮಾರ್



ಬೆಂಗಳೂರು: ಸಿಲಿಕಾನ್ ಸಿಟಿ ಬೆಂಗಳೂರಿನ ಲಕ್ಷಾಂತರ ಆಸ್ತಿ ಮಾಲೀಕರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೀಪಾವಳಿ ಗಿಫ್ಟ್ ಕೊಟ್ಟಿದ್ದಾರೆ. ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಸಭೆಗೂ ಮುನ್ನ ಬಿಡಿಎ ವತಿಯಿಂದ ಮಹತ್ವದ ನಿರ್ಧಾರ ಪ್ರಕಟಿಸಿದರು.

ಬಿಡಿಎಗೆ 50 ವರ್ಷ ತುಂಬಿರುವ ಹಿನ್ನೆಲೆ ಬೆಂಗಳೂರಿನ ಅಭಿವೃದ್ಧಿಗೆ ಹೊಸ ಆಲೋಚನೆಗಳೊಂದಿಗೆ ಯೋಜನೆ ರೂಪಿಸಲಾಗುತ್ತಿದೆ. ಬಿಡಿಎಯನ್ನು ಜನಸ್ನೇಹಿ ಸಂಸ್ಥೆಯನ್ನಾಗಿ ಮಾಡಲು ಹಲವು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ನಗರದಲ್ಲಿ 2008ಕ್ಕೂ ಮುನ್ನ ಬಿಡಿಎ ಜಾಗದಲ್ಲಿ ಮನೆ ನಿರ್ಮಿಸಿಕೊಂಡು ವಾಸಿಸುತ್ತಿರುವವರಿಗೆ ಸಕ್ರಮಗೊಳಿಸಿಕೊಳ್ಳಲು ಮತ್ತೊಂದು ಅವಕಾಶ ನೀಡಲಾಗುತ್ತಿದೆ. ಈ ಹಿಂದೆ ಮಾಡಿದ್ದ 38ಸೆಕ್ಷನ್ ನಲ್ಲಿ ಅನಧಿಕೃತ ತೆಗೆದು ಅಧಿಕೃತ ಮಾಡಿಕೊಳ್ಳಿ ಎಂದು ಸಿಎಂ ತಿಳಿಸಿದರು.

ಪುಟ 2ಕ್ಕೆ

ಮಾರ್ಜಿನ್ ಜಾಗ ಖರೀದಿ

ಇನ್ನೂ ಬಿಡಿಎಯಿಂದ ನಿವೇಶನ ಹಂಚಿಕೆ ಪಡೆದಿರುವವರ ನಿವೇಶನದ ಪಕ್ಕದಲ್ಲಿ ಮಾರ್ಜಿನ್ ಲ್ಯಾಂಡ್ ಇದ್ದರೆ, ಅದನ್ನು ಖರೀದಿಸಲು ಅವಕಾಶ ಕಲ್ಪಿಸಲಾಗುತ್ತದೆ. 600 ಚದರ ಅಡಿ ನಿವೇಶನ ಹೊಂದಿರುವವರು ಬಿಡಿಎ ಹಂಚಿಕೆದಾರರು ಅರ್ಜಿ ಸಲ್ಲಿಸಿ ಪಕ್ಕದ ಮಾರ್ಜಿನ್ ಜಾಗವನ್ನು ಮಾರ್ಗಸೂಚಿ ದರದಲ್ಲಿ ಖರೀದಿಸಬಹುದು. ಮಾರ್ಜಿನ್ ಲ್ಯಾಂಡ್ ಖರೀದಿಗೆ ಅರ್ಜಿ ಸಲ್ಲಿಸಲು ಡಿಸೆಂಬರ್ 22ರವರೆಗೆ ಅವಕಾಶ ನೀಡಲಾಗುತ್ತದೆ ಎಂದು ಸಿಎಂ ಡಿಕೆಶಿ ತಿಳಿಸಿದರು.

ಸರಣಿ ಹತ್ಯೆ: ಶಿರಾಡಿ ಘಾಟ್‌ನಲ್ಲಿ 2 ಶವ ಪತ್ತೆ



ಬೆಂಗಳೂರು: ರಾಜ್ಯಾದ್ಯಂತ ಸಂಚಲನ ಮೂಡಿಸಿರುವ ಒಂದೇ ಕುಟುಂಬದ ಏಳು ಮಂದಿ ಸರಣಿ ಹತ್ಯೆ ಪ್ರಕರಣದಲ್ಲಿ ಮತ್ತೊಂದು ಮಹತ್ವದ ಬೆಳವಣಿಗೆಯಾಗಿದೆ.

ಶಿರಾಡಿ ಘಾಟ್‌ನಲ್ಲಿ ಮತ್ತೆರಡು ಮೃತದೇಹಗಳು ಪತ್ತೆಯಾಗಿವೆ. ಇದರೊಂದಿಗೆ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರಿಗೆ ಎಲ್ಲಾ ಏಳು ಮಂದಿಯ ಮೃತದೇಹಗಳು ಪತ್ತೆಯಾದಂತಾಗಿದೆ.

ಹತ್ಯೆಗೀಡಾದ ಶಂಕರ್ ಮತ್ತು ನಳಿನಿ ಅವರ ಮೃತದೇಹಗಳೆಂದು ಗುರುತಿಸಲಾಗಿದೆ. ಈ ಬಗ್ಗೆ ಮಾಹಿತಿ ಲಭ್ಯವಾಗುತ್ತಿದ್ದಂತೆ ರಾಜಾಜಿನಗರ ಪೊಲೀಸರು ಹಾಗೂ ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ತಂಡ ಬೆಂಗಳೂರಿನಿಂದ ಶಿರಾಡಿ ಘಾಟ್‌ಗೆ ತೆರಳಿ ಪರಿಶೀಲಿಸಿದೆ.

ಪ್ರಕರಣದ ತನಿಖೆಗಾಗಿ ಆರು ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಶೋಧ ಕಾರ್ಯಾಚರಣೆ ನಡೆಸು ತ್ತಿದ್ದ ವೇಳೆ ಶಿರಾಡಿ ಘಾಟ್‌ನಲ್ಲಿ ಎರಡು ಮೃತದೇಹಗಳು ಪತ್ತೆಯಾಗಿವೆ.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ದಿವ್ಯಾ ಮತ್ತು ಶಿವಕುಮಾರ್ ಅವರ ಮೃತದೇಹಗಳು ಪತ್ತೆಯಾಗಿದ್ದವು. ಸೇಲಂನಲ್ಲಿ ರೂಪವತಿ ಮತ್ತು ಸುನೀತಾ ಅವರ ಮೃತದೇಹ ಹಾಗೂ ಶಿರಾಡಿ ಘಾಟ್‌ನಲ್ಲಿ ಶಂಕರ್ ಮತ್ತು ನಳಿನಿ ಅವರ ಮೃತದೇಹಗಳನ್ನು ಪತ್ತೆ ಆಗಿವೆ. ಎಲ್ಲರ ಅಂತ್ಯಕ್ರಿಯೆಯನ್ನು ಒಂದೇ ಸ್ಥಳದಲ್ಲಿ ನೆರವೇರಿಸಲು ಕುಟುಂಬಸ್ಥರು ನಿರ್ಧರಿಸಿದ್ದಾರೆ. ಹತ್ಯೆಗೀಡಾಗಿದ್ದ ಬಾಲಕ ಪುನೀತ್‌ನ ಅಂತ್ಯಕ್ರಿಯೆಯನ್ನು ಶನಿವಾರ ರಾಜಾಜಿನಗರದ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿಸಲಾಗಿತ್ತು.

ಕ್ಯಾನ್ಸರ್ ಔಷಧಿಗಳ ಬೆಲೆ ಇಳಿಕೆ

137 ಜೀವರಕ್ಷಕ ಸೇರಿ 543 ಆಂಟಿ–ಕ್ಯಾನ್ಸರ್ ಔಷಧಿಗಳ ಬೆಲೆ ಕಡಿತ

ಬೆಂಗಳೂರು: ಕ್ಯಾನ್ಸರ್ ಔಷಧಿಗಳ ಬೆಲೆಯಲ್ಲಿ ಭಾರೀ ಇಳಿಕೆ ಆಗಿದೆ. ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರದ ಆದೇಶದಂತೆ ದೇಶಾದ್ಯಂತ 137 ಕ್ಯಾನ್ಸರ್ ಜೀವ ರಕ್ಷಕ ಔಷಧಿಗಳು ಸೇರಿದಂತೆ ಒಟ್ಟು 543 ಆಂಟಿ–ಕ್ಯಾನ್ಸರ್ ಔಷಧಿಗಳ ಗರಿಷ್ಠ ಚಿಲ್ಲರೆ ಬೆಲೆ ಸೋಮವಾರದಿಂದ ಕಡಿತಗೊಳ್ಳಲಿದೆ.

ಕೆಲವು ಔಷಧಿಗಳ ಬೆಲೆಯಲ್ಲಿ ಶೇ.50 ರಿಂದ ಗರಿಷ್ಠ ಶೇ.96.45ರಷ್ಟು ಇಳಿಕೆಯಾಗಲಿದೆ. ಕ್ಯಾನ್ಸರ್ ಔಷಧಿಗಳನ್ನ ದುಪ್ಪಟ್ಟು ದರಕ್ಕೆ ಮಾರಾಟ ಮಾಡಲಾಗುತ್ತಿತ್ತು. ರಾಜ್ಯ ಆರೋಗ್ಯ ಇಲಾಖೆ ಕ್ಯಾನ್ಸರ್ ಔಷಧಿಗಳ ಬೆಲೆ ಇಳಿಕೆಗೆ ಕೇಂದ್ರಕ್ಕೆ ಪತ್ರ ಬರೆದಿತ್ತು. ಸುಪ್ರೀಂ ಕೋರ್ಟ್



ಕ್ಯಾನ್ಸರ್ ಔಷಧಿಗಳ ದುಪ್ಪಟ್ಟು ದರದ ಬಗ್ಗೆ ಕಳವಳ ವ್ಯಕ್ತಪಡಿಸಿತ್ತು. ನಂತರ ರಾಷ್ಟ್ರೀಯ ಬೆಲೆ ಪ್ರಾಧಿಕಾರ ದರ ಇಳಿಕೆ ಮಾಡಿ ಇಂದಿನಿಂದ ಜಾರಿಗೆ ಬರುವಂತೆ ಆದೇಶ ಮಾಡಿದೆ.

ಕ್ಯಾನ್ಸರ್ ಔಷಧಿಗಳ ಬೆಲೆ ಇಳಿಕೆಯಿಂದ ರೋಗಿಗಳಿಗೆ ವಾರ್ಷಿಕವಾಗಿ 2 ಸಾವಿರ ಕೋಟಿಗೂ ಹೆಚ್ಚು ಉಳಿತಾಯ ಆಗಲಿದೆ. ಇಮ್ಯುನೊಥೆರಪಿ ಔಷಧಿಗಳು, ಡೆನೋಸುಮ್ಯಾಬ್, ಪೆಗ್‌ಫಿಲ್‌ಗ್ರಾಸ್ಟಿಮ್, ಮತ್ತು ಬೆವಾಸಿಝುಮಾಬ್ ಸೇರಿದಂತೆ ಪ್ರಮುಖ ಔಷಧಿಗಳ ಬೆಲೆಗಳು ಕಡಿಮೆಯಾಗಿವೆ. ಆಸ್ಪತ್ರೆಗಳು, ರಿಟೇಲರ್, ಹೋಲ್‌ಸೇಲ್ ಮಾರಾಟಗಾರರು, ಚಿಲ್ಲರೆ ಸಗಟು ವ್ಯಾಪಾರಿಗಳು ನಿಗದಿ ಆಗಿರುವ ಬೆಲೆಗೆ ಔಷಧಿಗಳನ್ನು ಮಾರಾಟ ಮಾಡಬೇಕು ಒಂದು ವೇಳೆ ದುಪ್ಪಟ್ಟು ದರಕ್ಕೆ ಮಾರಾಟ ಮಾಡಿದರೆ ಕಾನೂನು ರೀತಿಯಲ್ಲಿ ಕ್ರಮ ಆಗಲಿದೆ.

ಕೇಂದ್ರದಿಂದ ಗ್ರಾಹಕರಿಗೆ ದರ ಇಳಿಕೆಯ ಪರಿಶೀಲನೆಯನ್ನು ಆಪ್ ಮೂಲಕ ಗ್ರಾಹಕರು ಔಷಧದ ನೈಜ್ಯ

ಪುಟ 2ಕ್ಕೆ

ಕಾವಾಡಿಗರ ಹುದ್ದೆಗಳಲ್ಲಿ ಕಾಡಂಚಿನವರಿಗಿಲ್ಲ ಆದ್ಯತೆ

ಆಯ್ಕೆಯಲ್ಲಿ ಭ್ರಷ್ಟಾಚಾರದ ಆರೋಪ | ಅರಣ್ಯಾಧಿಕಾರಿಗಳ ನಡೆಗೆ ಆಕ್ರೋಶ

ಶಿವಕುಮಾರ ತುಂಬಸೋಗೆ

ಎಚ್.ಡಿ.ಕೋಟೆ: ಕೆಪಿಎಸ್ಸಿ ಅಕ್ರಮ ಹಾಗೂ 2011ರ ಕೆಎಎಸ್ ನೇಮಕಾತಿ ಅಕ್ರಮದ ಆರೋಪಗಳ ವಿವಾದಗಳು ಮಾಸುವ ಮುನ್ನವೇ ಅರಣ್ಯ ಇಲಾಖೆಯ ಮೈಸೂರು ವೃತ್ತದಲ್ಲಿ ನಡೆದಿರುವ 27 ಆನೆ ಕಾವಾಡಿಗರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲೂ ಅಕ್ರಮದ ಆರೋಪ ಕೇಳಿ ಬಂದಿದೆ. ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟವಾಗುತ್ತಿದ್ದಂತೆ ಅಭ್ಯರ್ಥಿಗಳು ಹಾಗೂ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ಷೇಪಗಳು ವ್ಯಕ್ತವಾಗಿದ್ದು, ನೇಮಕಾತಿ ಪ್ರಕ್ರಿಯೆಯ ಪಾರದರ್ಶಕತೆ ಕುರಿತು ಹಲವು ಪ್ರಶ್ನೆಗಳು ಚರ್ಚೆಗೆ ನಾಂದಿ ಹಾಡಿದೆ.

ನಿಯಮಗಳ ಪ್ರಕಾರ ಅನುಸೂಚಿತ ಅರಣ್ಯ (ರಾಷ್ಟ್ರೀಯ ಅಭಯಾರಣ್ಯದೊಳಗೆ) ವಾಸಿಸುವ ಅಥವಾ ಅರಣ್ಯದ ವ್ಯಾಪ್ತಿಯಿಂದ ಒಂದು ಕಿ.ಮೀ.ಅಂತರದಲ್ಲಿ ನೆಲೆಸಿರುವ ಹಾಗೂ ಆನೆಗಳೊಂದಿಗೆ ಕೆಲಸ ಮಾಡಿದ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಆದ್ಯತೆ ನೀಡಬೇಕಿತ್ತು. ಆದರೆ, ಈ ನಿಯಮಗಳನ್ನು ಪಾಲಿಸದೆ ನಗರ ಪ್ರದೇಶಗಳಲ್ಲಿ ವಾಸಿಸುವ, ಅರಣ್ಯ ಇಲಾಖೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಉದ್ಯೋಗ ನೀಡಲಾಗಿದೆ ಎಂಬ ಆರೋಪ ಕೇಳಿ ಬಂದಿದ್ದು, ಆಯ್ಕೆ ಪ್ರಕ್ರಿಯೆ ವಿವಾದಕ್ಕೆ ಕಾರಣವಾಗಿದೆ.

ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ಬಿ ವರ್ಗದ ಅಧಿಕಾರಿಗಳಿಂದ ಪಡೆದ ಕೆಲವು ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕಿತ್ತು. ಆದರೆ, ಈ ಪ್ರಮಾಣ ಪತ್ರಗಳನ್ನು ನೀಡುವ ವೇಳೆ ಅಧಿಕಾರಿಗಳು ನಿಯಮಗಳನ್ನು ಸಮರ್ಪಕವಾಗಿ ಪರಿಶೀಲಿಸದೆ, ಆಮಿಷಕ್ಕೆ ಒಳಗಾಗಿ ದಾಖಲೆಗಳನ್ನು ನೀಡಿದ್ದಾರೆ ಎಂಬ ಆರೋಪವೂ ಕೇಳಿಬಂದಿದೆ.

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಅಂಬಾರಿ ಹೊತ್ತಿದ್ದ ತಾಲ್ಲೂಕಿನ ದ್ರೋಣ, ಅರ್ಜುನ ಆನೆಗಳ ಮಾವುತರ ಕುಟುಂಬದ ಹಿನ್ನೆಲೆಯುಳ್ಳ ಹಾಗೂ ಅಭಿಮನ್ಯು ಆನೆ ಮಾವುತ ವಸಂತ್ ಪುತ್ರ ಸೇರಿದಂತೆ ಕಾವಾಡಿಗರ ಕುಟುಂಬಕ್ಕೆ ಸೇರಿದ ತಾಲ್ಲೂಕಿನ ಸುಮಾರು 50ಕ್ಕೂ ಹೆಚ್ಚು ಅಭ್ಯರ್ಥಿಗಳು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದರು ಎನ್ನಲಾಗಿದೆ. ಆದರೆ, ನ.3ರಂದು ಪ್ರಕಟಗೊಂಡ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಬಳ್ಳೆ ಶಿಬಿರದ ಕೇವಲ ಮೂವರಿಗೆ ಮಾತ್ರ ಸ್ಥಾನ ದೊರೆತಿದ್ದು, ಬಹುಪಾಲು ನಗರ ಪ್ರದೇಶದ ಅಸಮರ್ಥ ಅಭ್ಯರ್ಥಿಗಳು ಆಯ್ಕೆ



ಆಗಿರುವುದು ಕಾಡಂಚಿನ ಜನರ ಕಿಚ್ಚು ಹೆಚ್ಚಾಗಲು ಕಾರಣವಾಗಿದೆ

ಆನೆಗಳೊಂದಿಗೆ ನಿಕಟ ಸಂಪರ್ಕ ಹೊಂದಿರುವ, ಅವುಗಳ ಸ್ವಭಾವ, ನಡವಳಿಕೆ ಹಾಗೂ ನಿರ್ವಹಣೆಯ ಬಗ್ಗೆ ಪ್ರಾಯೋಗಿಕ ಜ್ಞಾನ ಹೊಂದಿರುವ, ಕಾಡಿನ ಪರಿಸರದಲ್ಲಿ ಬದುಕಿ ಕೆಲಸ ಮಾಡಿದ ಅನುಭವವಿರುವವರಿಗೆ ಇಂತಹ ಹುದ್ದೆಗಳಲ್ಲಿ ಆದ್ಯತೆ ನೀಡಬೇಕಿತ್ತು. ಅದರಲ್ಲೂ ಆದಿವಾಸಿ ಸಮುದಾಯದವರು ತಲೆಮಾರುಗಳಿಂದ ಆನೆಗಳ ಪಾಲನೆ, ಪೋಷಣೆ ಹಾಗೂ ನಿರ್ವಹಣೆಯಲ್ಲಿ ತೊಡಗಿಸಿಕೊಂಡು ಅಪಾರ ಅನುಭವ ಹೊಂದಿದ್ದಾರೆ. ಹೀಗಾಗಿ, ಆನೆಗಳ ಆರೈಕೆ ಹಾಗೂ ನಿರ್ವಹಣೆಯಂತಹ ಜವಾಬ್ದಾರಿಯುತ ಹುದ್ದೆಗಳ ನೇಮಕಾತಿಯಲ್ಲಿ ಸ್ಥಳೀಯರು ಹಾಗೂ ಬುಡಕಟ್ಟು ಸಮುದಾಯದ ಅಭ್ಯರ್ಥಿಗಳಿಗೆ ನಿಯಮಾನುಸಾರ ಆದ್ಯತೆ ನೀಡಬೇಕಿತ್ತು. ಆದರೆ, ಈ ಬಾರಿಯ ಆಯ್ಕೆ ಪ್ರಕ್ರಿಯೆಯಲ್ಲಿ ಸ್ಥಳೀಯ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಸೂಕ್ತ ಪ್ರಾತಿನಿಧ್ಯ ದೊರೆತಿಲ್ಲ ಎಂಬ ಅಸಮಾಧಾನ ವ್ಯಕ್ತವಾಗಿದ್ದು, ನೇಮಕಾತಿ ಪ್ರಕ್ರಿಯೆಯ ಪಾರದರ್ಶಕತೆ ಹಾಗೂ ನಿಯಮ ಪಾಲನೆಯ ಬಗ್ಗೆ ತನಿಖೆ ನಡೆಸಬೇಕೆಂಬ ಒತ್ತಾಯ ಕೇಳಿಬಂದಿದೆ.



ಗರ್ಭಿಣಿ, ಅನಾರೋಗ್ಯ, ದೈಹಿಕ ಅಸಮರ್ಥತೆ ಕಾರಣದಿಂದ ಆನೆ ನಿರ್ವಹಣಾ ಸಾಮರ್ಥ್ಯ ಪರೀಕ್ಷೆಗೆ ಗೈರು ಹಾಜರಾಗಿದ್ದ ಮಹಿಳೆಯೂ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿದ್ದಾರೆ. ಅರಣ್ಯಭವನದಲ್ಲಿ ಕೆಲಸ ಮಾಡುತ್ತಿರುವ, ಬ್ಯೂಟಿಪಾರ್ಲರ್ ಅಲ್ಲಿ ಕೆಲಸ ಮಾಡುವವರು, ವಯೋಮಿತಿ ಮೀರಿದ, ಹಣಬಲ, ರಾಜಕೀಯ ಬಲವಿರುವವರಿಗೆ ಕೆಲಸ ನೀಡಲಾಗಿದೆ. ಅಧಿಸೂಚನೆಯ ನಿಯಮಗಳನ್ನು ಪಾಲಸಿ ಅರಣ್ಯಾಧಿಕಾರಿಗಳು ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿಲ್ಲ. ಈ ಪ್ರಕ್ರಿಯೆ ಭ್ರಷ್ಟಾಚಾರ ತಡೆ ಕಾಯ್ದೆ ಪ್ರಕಾರ ಗಂಭೀರ ಸ್ವರೂಪದ ಕ್ರಿಮಿನಲ್ ಪ್ರಕರಣವಾಗಿದೆ.

–ರವಿಕುಮಾರ್ ವಕೀಲ, ಮೈಸೂರು.

ಪ್ರಸಿದ್ಧಿ ಪಡೆದ ಸ್ಥಳದಿಂದ ಕಡಿಮೆ ಆಯ್ಕೆಯೇ ಚರ್ಚೆಗೆ ಕಾರಣ

ಕಾಕನಕೋಟೆ ಅರಣ್ಯ ಪ್ರದೇಶವು ಏಷ್ಯಾದಲ್ಲಿಯೇ ಖೆಡ್ಡಾ ಕಾರ್ಯಾಚರಣೆಗೆ ಪ್ರಸಿದ್ಧಿ ಪಡೆದಿದೆ. ಇಲ್ಲಿನ ಕಾಡಿನಲ್ಲಿ ವಾಸಿಸುವ ಜನರು ಆನೆಗಳನ್ನು ಪಳಗಿಸುವ ಹಾಗೂ ನಿರ್ವಹಿಸುವ ಕಲೆಯಲ್ಲಿ ನಿಪುಣರಾಗಿದ್ದಾರೆ. ಆನೆಗಳ ನಿರ್ವಹಣೆಯಲ್ಲಿ ವಿಶೇಷ ಪರಿಣತಿ ಹೊಂದಿರುವ ಪ್ರದೇಶವಾಗಿದ್ದರೂ, ಇತ್ತೀಚೆಗೆ ನಡೆದ ಕಾವಾಡಿಗರ ಹುದ್ದೆಗಳ ನೇಮಕಾತಿಯಲ್ಲಿ ಈ ಭಾಗದಿಂದ ಬೆರಳೆಣಿಕೆಯಷ್ಟು ಅಭ್ಯರ್ಥಿಗಳೂ ಆಯ್ಕೆ ಆಗಗದಿರುವುದು ಸ್ಥಳೀಯ ಉದ್ಯೋಗಾಕಾಂಕ್ಷಿಗಳಲ್ಲಿ ಅಸಮಾಧಾನ ಮೂಡಿಸಿದೆ. ಈ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರಿಯೆಯ ಪಾರದರ್ಶಕತೆ ಹಾಗೂ ಆಯ್ಕೆ ಮಾನದಂಡಗಳ ಕುರಿತು ಹಲವು ಅನುಮಾನಗಳು ವ್ಯಕ್ತವಾಗಿದ್ದು, ಆಯ್ಕೆಯಲ್ಲಿ ಅಕ್ರಮ ನಡೆದಿದೆಯೇ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಐವರು ಮಹಿಳೆಯರ ಆಯ್ಕೆ ಪ್ರಕ್ರಿಯೆ ಹೇಗೆ ?

ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಐವರು ಮಹಿಳೆಯರು ಸ್ಥಾನ ಪಡೆದಿರುವುದು ಮತ್ತೊಂದು ಚರ್ಚೆಗೆ ಕಾರಣವಾಗಿದೆ. ಆನೆ ಕಾವಾಡಿಗರ ಕೆಲಸದ ಸ್ವರೂಪವನ್ನು ಮುಂದಿಟ್ಟುಕೊಂಡು ಕೆಲವರು ಮಹಿಳೆಯರ ಆಯ್ಕೆಯ ಕುರಿತು ಪ್ರಶ್ನೆ ಎತ್ತುತ್ತಿದ್ದಾರೆ. ಆನೆ ಕಾವಾಡಿಗರ ಕೆಲಸ ಎಂದರೆ ಆನೆಗಳ ಆರೈಕೆಗೆ ಸೀಮಿತವಾದುದಲ್ಲ. ಅವುಗಳಿಗೆ ಮೇವು ತರುವುದು, ಸ್ನಾನ ಮಾಡಿಸುವುದು, ಸ್ವಚ್ಛಗೊಳಿಸುವುದು, ಆಹಾರ ನೀಡುವುದು, ತರಬೇತಿ ನೀಡುವುದು ಸೇರಿದಂತೆ ಹಲವು ಜವಾಬ್ದಾರಿಗಳಿರುತ್ತವೆ. ಕೆಲ ಸಂದರ್ಭಗಳಲ್ಲಿ ಕಾಡಿನೊಳಗೆ ತೆರಳಿ ಆನೆಗಳನ್ನು ಕರೆತರುವುದು, ಅರಣ್ಯ ಕಾರ್ಯಾಚರಣೆಗಳಲ್ಲಿ ಭಾಗವಹಿಸುವುದು ಹಾಗೂ ಆನೆಗಳೊಂದಿಗೆ ಅಪಾಯಕಾರಿ ಸನ್ನಿವೇಶಗಳನ್ನು ಎದುರಿಸುವುದೂ ಕೆಲಸದ ಭಾಗವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಇಲಾಖೆಯ ಬದಲಿ ಉದ್ಯೋಗ ಕಲ್ಪಿಸಬೇಕಿತ್ತು ಎನ್ನಲಾಗುತ್ತಿದೆ.

ಅರ್ಹತಾ ಮಾನದಂಡಗಳನ್ನು ಬಹಿರಂಗೊಡಿಸಲಿ

ಪ್ರಸ್ತುತ ನೀಡಿರುವ ಹುದ್ದೆಗಳಿಗೆ ಮಹಿಳೆಯರ ಆಯ್ಕೆಗೆ ಸಂಬಂಧಿಸಿದಂತೆ ಇಲಾಖೆಯು ಅನುಸರಿಸಿರುವ ಅರ್ಹತಾ ಮಾನದಂಡಗಳನ್ನೂ ಸಾರ್ವಜನಿಕವಾಗಿ ಸ್ಪಷ್ಟಪಡಿಸಬೇಕು ಎಂಬ ಕೂಗು ಕೇಳುತ್ತಿದೆ. ಆನೆಗಳೊಂದಿಗೆ ಕೆಲಸ ಮಾಡುವುದು ಸಾಮಾನ್ಯ ಉದ್ಯೋಗಕ್ಕಿಂತ ಭಿನ್ನವಾಗಿದ್ದು, ಅದಕ್ಕೆ ವಿಶೇಷ ಆಸಕ್ತಿ, ಧೈರ್ಯ, ತಾಳ್ಮೆ ಮತ್ತು ಅನುಭವದ ಅಗತ್ಯವಿದೆ. ಇಂತಹ ಪರಿಸ್ಥಿತಿಯಲ್ಲಿ ನಿಜವಾಗಿಯೂ ಆನೆಗಳ ಆರೈಕೆ ಮತ್ತು ನಿರ್ವಹಣೆಯಲ್ಲಿ ಆಸಕ್ತಿ ಹೊಂದಿರುವವರಿಗೆ ಅವಕಾಶ ಸಿಕ್ಕಿದೆಯೇ ಎಂಬುದನ್ನೇ ಅವಕಾಶ ವಂಚಿತರು ಪ್ರಶ್ನಿಸುತ್ತಿದ್ದಾರೆ.

ಭಲವಾದಿ ನಾರಾಯಣಸ್ವಾಮಿ ಚಾಕು ಪಾರ್ಸಲ್‌ಗೆ ಖಂಡನೆ

ಎನ್‌ಎಸ್‌ಯುಐ ಕಾರ್ಯಕರ್ತರ ಗಡಿಪಾರಿಗೆ ಬಿಜೆಪಿ ಆಗ್ರಹ

ರಾಮನಗರ: ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ಮನೆಗೆ ಚಾಕು, ಚೂರಿ ಮಾರಕ ವಸ್ತುಗಳನ್ನು ಕಳುಹಿಸಿರುವ ಎನ್‌ಎಸ್‌ಯುಐ ಗೂಂಡಾಗಳನ್ನ ತಕ್ಷಣವೇ ಬಂಧಿಸಿ, ಗಡಿಪಾರು ಮಾಡಬೇಕು ಎಂದು ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಭಾನುವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಐಜೂರು ವೃತ್ತದಲ್ಲಿ ಜಮಾವಣೆಗೊಂಡ ಬಿಜೆಪಿ ಕಾರ್ಯಕರ್ತರು ಆನ್‌ಲೈನ್ ಡೆಲಿವರಿ ಆಪ್ ಮೂಲಕ ಚಾಕು ಮತ್ತು ಚೂರಿಗಳನ್ನು ಪಾರ್ಸಲ್ ಕಳುಹಿಸಿರುವ ಎನ್‌ಎಸ್‌ಯುಐ ಕಾರ್ಯಕರ್ತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ದರು. ಗೂಂಡಾ ಸಂಸ್ಕೃತಿಗೆ ಹೆಸರಾಗಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಕುಮ್ಮಕ್ಕಿನಿಂದಲೇ ಚಾಕು, ಚೂರಿ ಪಾರ್ಸೆಲ್ ಕಳುಹಿಸಲಾಗಿದೆ. ಈ ಹೇಯ ಕೃತ್ಯವೆಸಗಿರುವ ಎನ್‌ಎಸ್ ಯುಐ ಕಾರ್ಯಕರ್ತರನ್ನ ಈ ಕೂಡಲೇ ಬಂಧಿಸಿ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ಸಾರ್ವಜನಿಕರಲ್ಲಿ ಭೀತಿ – ಕಾಳಯ್ಯ



ಈ ವೇಳೆ ಜಿಲ್ಲಾ ಬಿಜೆಪಿ ಎಸ್‌ಸಿ ಘಟಕದ ಅಧ್ಯಕ್ಷ ಕಾಳಯ್ಯ ಮಾತನಾಡಿ, ಸಂವಿಧಾನಿಕ ಹುದ್ದೆಯಲ್ಲಿರುವ ಛಲವಾದಿ ನಾರಾಯಣಸ್ವಾಮಿ ಮನೆಗೆ ಎನ್‌ಎಸ್‌ಯುಐ ದುಷ್ಕರ್ಮಿಗಳು ಕೊರಿಯರ್ ಮೂಲಕ ಚಾಕುವನ್ನು ಪಾರ್ಸಲ್ ಕಳುಹಿಸಿದ್ದಾರೆ. ಈ ಘಟನೆಯಿಂದಾಗಿ ಸಾರ್ವಜನಿಕರಲ್ಲಿ ಭಯಭೀತ ವಾತಾವರಣ ನಿರ್ಮಾಣವಾಗಿದೆ. ದುಷ್ಕೃತ್ಯವೆಸಗಿದವರನ್ನ ಕೂಡಲೇ ಬಂಧಿಸದಿದ್ದರೆ ರಾಜ್ಯದಾದ್ಯಂತ ಉಗ್ರವಾದ ಹೋರಾಟ ಹಮ್ಮಿಕೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ – ಆನಂದಸ್ವಾಮಿ

ಜಿಲ್ಲಾ ಬಿಜೆಪಿ ಅಧ್ಯಕ್ಷ ಆನಂದಸ್ವಾಮಿ ಮಾತನಾಡಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಕುಮ್ಮಕ್ಕಿನಿಂದ ಗೂಂಡಾಗಿರಿ ಮತ್ತು ರೌಡಿಸಂ ಪ್ರವೃತ್ತಿ ಹೆಚ್ಚುತ್ತಿರುವುದು ಕಳವಳಕಾರಿಯಾಗಿದೆ. ಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ರೌಡಿಸಂ ಹಿನ್ನೆಲೆ ಉಳ್ಳವರು. ಹೀಗಾಗಿ ನಾರಾಯಣಸ್ವಾಮಿ ಅವರಿಗೆ ಚಾಕು ಕಳುಹಿಸುವ ಧೈರ್ಯ ಮಾಡಲಾಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು ಈ ಕೂಡಲೇ ಗೃಹ ಸಚಿವ ಪ್ರಿಯಾಂಕಖರ್ಗೆ ಮತ್ತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ರಾಮನಗರ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಆರ್.ನಾಗರಾಜು ರಾಜ್ಯ ಬಿಜೆಪಿ ವಕ್ತಾರ ರುದ್ರದೇವರು, ರಾಜ್ಯ ಪರಿಷತ್ ಸದಸ್ಯ ಆರ್.ವಿ.ಸುರೇಶ್, ನಗರಸಭೆ ಮಾಜಿ ಸದಸ್ಯ ಬಿ.ನಾಗೇಶ್,ಬನಗರ ಬಿಜೆಪಿ ಅಧ್ಯಕ್ಷ ಚಂದನ್‌ಮೋರೆ, ಮಾಧ್ಯಮ ಪ್ರಮುಖ ಎಸ್.ಸಿದ್ದರಾಜು, ಮುಖಂಡರಾದ ಕಾರ್ಪೆಂಟರ್ ಶ್ರೀನಿವಾಸ್, ನಂದಿಶ್, ರಾಮಕೃಷ್ಣ, ಶೇಖರ್, ರಂಗಸ್ವಾಮಿ, ಚನ್ನಪ್ಪ, ನಾಗಮ್ಮ, ಲಕ್ಷ್ಮಿ , ಪ್ರಶಾಂತ್, ಸಿದ್ದು, ಸಿದ್ದಲಿಂಗ ಮೂರ್ತಿ, ರಂಗಸ್ವಾಮಿ, ಬಸವರಾಜು ಸೇರಿದಂತೆ ಹಲವರಿದ್ದರು.

ಕಾಂಗ್ರೆಸ್‌ನದ್ದು ಗೂಂಡಾ ಸಂಸ್ಕೃತಿ – ರಾಜು

ದಲಿತ ಮುಖಂಡರಾದ ರಾಜು ಮಾತನಾಡಿ, ಛಲವಾದಿ ನಾರಾಯಣಸ್ವಾಮಿ ಅವರು ದಲಿತ ವಿರೋಧಿ ಸರ್ಕಾರದ ವಿರುದ್ಧವಾಗಿ ಟೀಕೆ ಮಾಡಿದ್ದಾರೆ. ವೈಯಕ್ತಿಕವಾಗಿ ಯಾವುದೇ ದುರುದ್ದೇಶದಿಂದ ಮಾತನಾಡಿಲ್ಲ. ಗೂಂಡಾ ಸಂಸ್ಕೃತಿ ಹೊಂದಿರುವ ಕಾಂಗ್ರೆಸ್ ಸರ್ಕಾರವು ಚಾಕುಗಳನ್ನು ಪಾರ್ಸಲ್ ಮೂಲಕ ವಿರೋಧಪಕ್ಷದ ನಾಯಕರ ಮನೆಗಳಿಗೆ ಕಳುಹಿಸಿದ್ದಾರೆ. ಚಾಕು-ಚೂರಿಗಳನ್ನು ತೋರಿಸಿ ಬೆದರಿಸಿದರೆ ನಾವು ಬಗ್ಗುವವರಲ್ಲ. ರೌಡಿಸಂಗೆ ಕುಮ್ಮಕ್ಕು ನೀಡುತ್ತಿರುವ ಕಾಂಗ್ರೆಸ್ ಸರ್ಕಾರವನ್ನ ಕೂಡಲೇ ವಜಾ ಮಾಡಬೇಕೆಂದು ಆಗ್ರಹಿಸಿದರು.

ಮೊದಲ ಪುಟದಿಂದ

ಬೇಜವಾಬ್ದಾರಿ ಕೇಂದ್ರ ಸಚಿವ

ಸತ್ಯಾಸತ್ಯತೆ ತಿಳಿಯಲು ಪರೀಕ್ಷೆಗೆ ಕಳುಹಿಸಿದ್ದೇವೆ. ಒಂದು ವೇಳೆ ಈ ಆರೋಪ ಸಾಬೀತಾದರೆ ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಿಸಲು ಸಿದ್ಧ. ಆದರೆ ಸುಳ್ಳು ಎಂದು ಸಾಬೀತಾದರೆ ಕುಮಾರಸ್ವಾಮಿ ಗೌರವ ಏನಾಗಬೇಕು ಎಂದು ಪ್ರಶ್ನಿಸಿದರು.

ಈ ಸಂಬಂಧ ದೂರು ದಾಖಲಿಸಿದ್ದೇವೆ. ತನಿಖೆ ನಡೆಯುತ್ತಿದೆ. ಆದರೆ ರಾಜಕೀಯ ಲಾಭಕ್ಕಾಗಿ ನಿರಪರಾಧಿಗಳ ಹಾಗೂ ಮರ್ಯಾದಸ್ಥರ ಮಾನಹಾನಿ ಮಾಡುವ ಪ್ರವೃತ್ತಿಯನ್ನು ಕುಮಾರಸ್ವಾಮಿ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಪೆಟ್ರೋಲ್‌ಗೆ ಎಥೆನಾಲ್ ಮಿಶ್ರಣ: ಕೇಂದ್ರದಿಂದ ಅಸಮರ್ಪಕ ಉತ್ತರ

ಕೇಂದ್ರ ಸರ್ಕಾರ ಹಾಗೂ ತೈಲ ಕಂಪನಿಗಳ ವಿರುದ್ಧ ವಾಗ್ದಾಳಿ ನಡೆಸಿದರು.

ರಾಜ್ಯದ ಪೆಟ್ರೋಲ್ ಬಂಕ್‌ಗಳಲ್ಲಿ ನಿಗದಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಎಥೆನಾಲ್ ಮಿಶ್ರಣ ಮಾಡಲಾಗುತ್ತಿದೆ ಎನ್ನುವ ರಾಜ್ಯ ಸರ್ಕಾರದ ವರದಿಗೆ ಕೇಂದ್ರ ಸರ್ಕಾರ ಉತ್ತರ ಕೊಡಬೇಕಿತ್ತು. ಆದರೆ ಕೇಂದ್ರ ಉತ್ತರ ಕೊಡುತ್ತಿಲ್ಲ. ತೈಲ ಕಂಪನಿಗಳು ಉತ್ತರ ಕೊಡುತ್ತಿವೆ. ಕೇವಲ ತಾಂತ್ರಿಕ ಅಂಶಗಳ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ಪೆಟ್ರೋಲ್‌ಗೆ ಎಷ್ಟು ಪ್ರಮಾಣದಲ್ಲಿ ಎಥೆನಾಲ್ ಮಿಶ್ರಣ ಮಾಡಲಾಗುತ್ತಿದೆ ಅನ್ನೋದಕ್ಕೆ ತೈಲ ಕಂಪನಿಗಳ ಬಳಿ ಉತ್ತರವಿಲ್ಲ ಎಂದು ಆರೋಪಿಸಿದರು.

ಪೆಟ್ರೋಲ್‌ಗೆ ಎಥೆನಾಲ್ ಮಿಶ್ರಣದ ಬಗ್ಗೆ ರಾಜ್ಯ ಸರ್ಕಾರವೇ ಪರೀಕ್ಷೆ ಮಾಡಿಸಿತ್ತು. ರಾಜ್ಯದ ವರದಿಯನ್ನ ದೇಶದ ಜನ ಗಂಭೀರವಾಗಿ ಪರಿಗಣಿಸಿದ್ದಾರೆ. ನಾವು ದೇಶದ ಜನರ ಮೆಚ್ಚುಗೆಗೆ ಪಾತ್ರರಾಗಿದ್ದೇವೆ. ಸೋಷಿಯಲ್ ಮೀಡಿಯಾಗಳಲ್ಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕೇಂದ್ರ ಸರ್ಕಾರ ಗಂಭೀರತೆ ಅರಿತು ನಮ್ಮಿಂದ ಮಾಹಿತಿ ಪಡೆದು ಉತ್ತರ ಕೊಡಬೇಕಾಗಿತ್ತು. ಆದರೆ ಅವರು ಸರ್ಕಾರದ ವತಿಯಿಂದ ಉತ್ತರ ಕೊಟ್ಟಿಲ್ಲ, ತೈಲ ಕಂಪನಿಗಳಷ್ಟೇ ಉತ್ತರ ಕೊಡುತ್ತಿವೆ ಎಂದಿದ್ದಾರೆ.

ರೆಸಾರ್ಟ್ ಈಜುಕೊಳದಲ್ಲಿ ಮುಳುಗಿ ಮಗು ಸಾವು

ದಂಪತಿಯ ಮೂರೂವರೆ ವರ್ಷದ ಇವಾನ್ ಮೃತ ಮಗು. ಸ್ವಿಮ್ಮಿಂಗ್ ಪೂಲ್‌ನಲ್ಲಿ ಆಟವಾಡುತ್ತಿದ್ದಾಗ ದುರಂತ ಸಾವಿಗೀಡಾಗಿದೆ. ಮೃತಪಟ್ಟಿದೆ. ಅವರು ಸುಮಾರು 40 ಜನರ ಜೊತೆ ರೆಸಾರ್ಟ್‌ಗೆ ಪ್ರವಾಸ ಬಂದಿದ್ದರು.

ಕ್ಯಾನ್ಸರ್ ಔಷಧಿಗಳ ಬೆಲೆ ಇಳಿಕೆ

ದರಪಟ್ಟಿಯನ್ನು ಪರಿಶೀಲಿಸಲು ಅವಕಾಶ ಇದೆ. ಫಾರ್ಮಾ ಸಹಿ ದಾಮ್ ವೆಬ್‌ಸೈಟ್‌ನಲ್ಲಿ ಇಳಿಕೆಯಾದ ಔಷಧಗಳ ಬೆಲೆ ಪರಿಶೀಲನೆಗೆ ಅವಕಾಶ ಇದೆ.

ಜಿಲ್ಲಾಧ್ಯಕ್ಷರಾಗಿ ಕಿರಣ್‌ರಾಜ್ ಆಯ್ಕೆ



ಚಾಮರಾಜನಗರ: ಕರ್ನಾಟಕ ರಾಜ್ಯ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಚಾಮರಾಜನಗರ ಜಿಲ್ಲಾ ಘಟಕದ ನೂತನ ಅಧ್ಯಕ್ಷರಾಗಿ ಎಂ. ಕಿರಣ್ ರಾಜ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ನಗರದ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಕಚೇರಿಯಲ್ಲಿ ನಡೆದ ಸಂಘದ ಜಿಲ್ಲಾ ಕಾರ್ಯಕಾರಿಣಿ ಸಭೆಯಲ್ಲಿ ಸರ್ವಾನುಮತದಿಂದ ವೀರಭದ್ರಸ್ವಾಮಿ ರಾಜೀನಾಮೆಯಿಂದ ತೆರವಾಗಿದ್ದ ಕರ್ನಾಟಕ ರಾಜ್ಯ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಚಾಮರಾಜನಗರ ಜಿಲ್ಲಾ ಘಟಕದ ಸ್ಥಾನಕ್ಕೆ ವೆಂಕಟಯ್ಯನ ಛತ್ರ ಪ್ರೌಢ ಶಾಲೆಯ ವಿಜ್ಞಾನ ಶಿಕ್ಷಕರಾದ ಕಿರಣ್ ರಾಜ್ ಅವರನ್ನು ಆಯ್ಕೆ ಮಾಡಲಾಯಿತು.

ಸನ್ಮಾನ: ಕರ್ನಾಟಕ ರಾಜ್ಯ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಚಾಮರಾಜನಗರ ಜಿಲ್ಲಾ ಘಟಕದ ನೂತನ ಅಧ್ಯಕ್ಷರಾಗಿ ಎಂ. ಕಿರಣ್ ರಾಜ್ ಹಾಗೂ ನಿಕಟಪೂರ್ವ ಅಧ್ಯಕ್ಷ ಎಂ.ವೀರಭದ್ರಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಉಪಾಧ್ಯಕ್ಷ ಶಾಂತರಾಜು ಸಭೆ ಅಧ್ಯಕ್ಷತೆ ವಹಿಸಿದ್ದರು. ನಿಕಟಪೂರ್ವ ಅಧ್ಯಕ್ಷ ಎಂ.ವೀರಭದ್ರಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಶಾಂತರಾಜು, ಜಿಲ್ಲಾ ಖಜಾಂಚಿ ಮಹೇಶ್ ಕುಮಾರ್, ಜಿಲ್ಲಾ ಸಹ ಕಾರ್ಯದರ್ಶಿ ಗಜೇಂದ್ರ, ಸಂಘಟನಾ ಕಾರ್ಯದರ್ಶಿ ಎಸ್.ಆರ್.ಶಿವಕುಮಾರ್, ಉಪಾಧ್ಯಕ್ಷರಾದ ಆನಂದರಾಜು, ನಾಗೇಶ್, ನಾಗಲಕ್ಷ್ಮಿ, ಶಿವಕುಮಾರ್, ಸಂಘಟನಾ ಕಾರ್ಯದರ್ಶಿ ಕಾಳಸ್ವಾಮಿ, ಮಹೇಶ್, ತಾಲೂಕು ಅಧ್ಯಕ್ಷರಾದ ಮಂಜುನಾಥ್, ಅಕ್ಬರ್, ಶಿವಾಲಂಕಾರ್, ಶಿವ ವೀರಭದ್ರಪ್ಪ, ಚಂದ್ರಶೇಖರ್ ಹಾಗೂ ತಾಲ್ಲೂಕು ಕಾರ್ಯದರ್ಶಿಗಳಾದ ಚಂದ್ರಶೇಖರಯ್ಯ, ವೆಂಕಟೇಶ್, ಪುತ್ರಸ್ವಾಮಿ, ನಿಕಟ ಪೂರ್ವ ಅಧ್ಯಕ್ಷ ಗುರುಪ್ರಸಾದ್, ಹನೂರು ತಾಲ್ಲೂಕು ಖಜಾಂಚಿ ಪ್ರದೀಪ್ ಹಾಜರಿದ್ದರು.

ಚಾ.ನಗರಕ್ಕೆ ನಾನು ಕೂಡ ಆಕಾಂಕ್ಷಿ

ಚಾಮರಾಜನಗರ: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಚಾಮರಾಜನಗರ ಮತ್ತು ಮೈಸೂರು ಜಿಲ್ಲಾ ನಾಯಕರ ಸಂಘದ ಅಧ್ಯಕ್ಷ ಕೆಲ್ಲಂಬಳ್ಳಿ ಸೋಮನಾಯಕ ಹೇಳಿದರು.

ತಾಲೂಕಿನ ಬದನಗುಪ್ಪೆ ಗ್ರಾಮದಲ್ಲಿ ತಮ್ಮ ಬೆಂಬಲಿಗರನ್ನು ಭೇಟಿ ಮಾಡಿ ದೀಪಾವಳಿ ಹಬ್ಬದ ಶುಭಾಶಯ ಕೋರಿ ಮಾತನಾಡಿದ ಅವರು, ದೀಪಾವಳಿ ಹಬ್ಬ ಎಲ್ಲರ ಬಾಳಲ್ಲಿ ನೆಮ್ಮದಿ, ಸಮೃದ್ಧಿ ತರಲಿ. ಬೆಳಕಿನ ಹಬ್ಬದ ದಿನವೇ ತಮ್ಮ ರಾಜಕೀಯ ಚಟುವಟಿಕೆಗೆ ಸಾಂಕೇತಿಕವಾಗಿ ಚಾಲನೆ ಕೊಡಲಾಗಿದೆ. ಮಾಜಿ ಸಚಿವರಾಗಿದ್ದ ದಿವಂಗತ ಬೆಂಕಿ ಮಹದೇವಪ್ಪ ಅವರು ಚಾಮರಾಜನಗರ ವಿಧಾನಸಭಾದಿಂದ ಸ್ಪರ್ಧೆ ಮಾಡಿದ ಕಾರಣದಿಂದಾಗಿ ಹನೂರಿನಲ್ಲಿ ಬಿಜೆಪಿಯಿಂದ ಸ್ಪರ್ಧೆ ಮಾಡಬೇಕಾಯಿತು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದೆ. ಆದರೆ ಕೇಂದ್ರ ಸಚಿವ ವಿ. ಸೋಮಣ್ಣ ಅವರ ಸ್ಪರ್ಧೆ ಮಾಡಿದ್ದರಿಂದ ಕಣದಿಂದ ದೂರಾಗಿ ಅವರ ಪರವಾಗಿ ಕೆಲಸ ಮಾಡಿದ್ದೇನೆ.

ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸತಾಯ– ಗತಾಯ ಸ್ಪರ್ಧೆಯ ಮಾಡುತ್ತೇನೆ ನೀವೆಲ್ಲರೂ ಸಂಪೂರ್ಣ ಸಹಕಾರ,ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಂದರ್, ತಾಲೂಕು ಅಧ್ಯಕ್ಷ ಕೂಡ್ಲೂರು ಮಹೇಶ್, ಬದನಗುಪ್ಪೆ ಗ್ರಾಮದ ಮುಖಂಡರಾದ ಚಿನ್ನಸ್ವಾಮಿ ನಾಯಕ, ರವೀಶ್, ಕಾಳಪ್ಪನಾಯಕ,ನವೀನ್, ಮಹೇಶ್, ಮಧು, ದಾಸನಾಯಕ, ಮೂರ್ತಿ ಹಾಜರಿದ್ದರು.



ಮೊದಲ ಪುಟದಿಂದ

ಮೋದಿ ಹೇಳಿದ್ದೇ ಸತ್ಯ!

ಆದರೆ, ಕೇಂದ್ರ ಸರ್ಕಾರದ ಒತ್ತಡ ಬಳಿಕ ಹೇಳಿಕೆ ವಾಪಸ್ ತಗೋತಾರೆ. ಇನ್ಶುರೆನ್ಸ್ ಕಂಪನಿಗಳು ಗ್ಯಾರಂಟಿ ಕೊಡಲ್ಲ ಅಂತಾರೆ. ಕೇಂದ್ರ ಸರ್ಕಾರದ ಒತ್ತಡದ ಬಳಿಕ ವಾಪಸ್ ಪಡೆಯುತ್ತಾರೆ. ಆಟಾರ್ನಿ ಜನರಲ್ ಕೋರ್ಟ್‌ಗೆ ಇದು ಪ್ರಯೋಗ ಅಂತಾರೆ, ಬಳಿಕ ವಾಪಸ್ ತಗೋತಾರೆ. ಬಿಎಂಡಬ್ಲ್ಯು ಅವರು ಎಥನಾಲ್ ಪ್ರಮಾಣದಲ್ಲಿ ನಮ್ಮ ಎಂಜಿನ್ ಸಪೋರ್ಟ್ ಮಾಡಲ್ಲ ಅಂತಾರೆ. ಆದರೆ ನಾವು ನಮ್ಮ ಹೇಳಿಕೆ ವಾಪಸ್ ಪಡೆಯಲ್ಲ. ನಮ್ಮ ವರದಿ ಸರಿ ಇದೆ ಎಂದು ಸಮರ್ಥಿಸಿಕೊಂಡಿದ್ದಾರೆ ಎಂದು ಸಚಿವ ರಿಜ್ವಾನ್ ಟೀಕಿಸಿದರು.

ರಾಜ್ಯದಲ್ಲಿ 6 ಕಡೆ ಮಿಶ್ರಣ

ಬಳಿಯೂ ಉತ್ತರ ಇಲ್ಲ. ಔಟ್‌ಲೆಟ್ ಪ್ರಶ್ನೆ ಇಲ್ಲಿ ಬರಲ್ಲ. ಡೀಲರ್ಸ್ ಮಿಶ್ರಣ ಮಾಡಲು ಸಾಧ್ಯವಿಲ್ಲ. ತೈಲ ಕಂಪನಿಗಳು ಎಥೆನಾಲ್ ಮಿಶ್ರಣ ಕಂಟ್ರೋಲ್ ಆಂಡ್ ಆಟೋಮ್ಯಾಟಿಕ್ ಪ್ರಕ್ರಿಯೆ ಅಂತಾರೆ. ಕರ್ನಾಟಕದಲ್ಲಿ 6 ಟರ್ಮಿನಲ್‌ಗಳಿವೆ, ಕರ್ನಾಟಕದಲ್ಲಿ 6 ಕಡೆ ಮಿಶ್ರಣ ಆಗುತ್ತದೆ. ಇದು ಡೀಲರ್ಸ್ ಸಮಸ್ಯೆ ಅಲ್ಲ ಎಂದು ಸಚಿವ ರಿಜ್ವಾನ್ ಆಕ್ರೋಶ ಹೊರಹಾಕಿದ್ದಾರೆ.


ನಿವೇಶನ ಅಕ್ರಮ-ಸಕ್ರಮ ಘೋಷಣೆ

ಹಿಂದಿನ ಸರ್ಕಾರ ನಿಗದಿಪಡಿಸಿದ್ದ ಸಕ್ರಮದ ದರವನ್ನ ಶೇ.50ರಷ್ಟು ಕಡಿತಗೊಳಿಸಲಾಗಿದೆ. ಈ ಹಿಂದೆ ಶೇ.10ರಷ್ಟಿದ್ದ ದರವನ್ನ ಶೇ.5ಕ್ಕೆ ಹಾಗೂ ಶೇ.25ರಷ್ಟಿದ್ದ ದರವನ್ನ ಶೇ.12ಕ್ಕೆ ಇಳಿಸಲಾಗಿದೆ ಎಂದರು.

ಸಕ್ರಮಕ್ಕೆ ಅರ್ಜಿ ಸಲ್ಲಿಸಲು ಡಿಸೆಂಬರ್ 17ರ ವರೆಗೆ ಅವಕಾಶ ನೀಡಲಾಗಿದೆ. ಸರ್ಕಾರಿ ಭೂಮಿಯಲ್ಲಿ ಈಗಾಗಲೇ ಮನೆ ನಿರ್ಮಿಸಿಕೊಂಡು ವಾಸಿಸುತ್ತಿರುವವರು ವಿದ್ಯುತ್ ಬಿಲ್, ನೀರಿನ ಬಿಲ್ ಹಾಗೂ ಕಂದಾಯ ದಾಖಲೆಗಳ ಆಧಾರದ ಮೇಲೆ ಅರ್ಜಿ ಸಲ್ಲಿಸಬಹುದು. ಈಗಾಗಲೇ ದರವನ್ನು ಅರ್ಧಕ್ಕೆ ಇಳಿಸಲಾಗಿದೆ. ಮತ್ತೆ ದರ ಕಡಿತ ಮಾಡುವುದಿಲ್ಲ. ಡಿಸೆಂಬರ್ 17ರ ಬಳಿಕ ಮತ್ತೊಂದು ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಯೋಧರೊಂದಿಗೆ ಪ್ರಧಾನಿ ದೀಪಾವಳಿ ಆಚರಣೆ

ರಾಯ್‌ಪುರ/ಗ್ಯಾಂಗ್ಟಕ್: ಛತ್ತೀಸಗಢದ ಬಸ್ತಾರ್ ನಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆಯಲ್ಲಿ ತೊಡಗಿರುವ ಭದ್ರತಾ ಸಿಬ್ಬಂದಿಯೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೀಪಾವಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.



ಬಸ್ತಾರ್‌ನಲ್ಲಿ ಯೋಧರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ, ಈ ಬಾರಿಯ ದೀಪಾವಳಿ ಅತ್ಯಂತ ವಿಶೇಷವಾಗಿದೆ ಎಂದು ಹೇಳಿದ್ದಾರೆ. ದಶಕಗಳ ಕಾಲ ದೇಶವನ್ನು ಕಾಡಿದ ನಕ್ಸಲಿಸಂ ಹಾಗೂ ಮಾವೋವಾದಿ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತ ಜಯಗಳಿಸಿದೆ. ದೇಶದ ಪ್ರತಿಯೊಂದು ಜಿಲ್ಲೆಯೂ ಪ್ರಸ್ತುತ ನಕ್ಸಲ್ ಮುಕ್ತವಾಗಿದ್ದು, ಕೋಟ್ಯಂತರ ಜನರು ಭಯಮುಕ್ತ ವಾತಾವರಣದಲ್ಲಿದ್ದಾರೆ ಎಂದು ತಿಳಿಸಿದ್ದಾರೆ.

116 ಎಕರೆ ಭೂ ಪ್ರದೇಶದಲ್ಲಿ ಹೊಸ ಬಡಾವಣೆ । ಶಾಸಕ ಇಕ್ಬಾಲ್ ಹುಸೇನ್, ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್ ಅವರಿಂದ ಚಾಲನೆ

ಜೀಗೇನಹಳ್ಳಿ ಅರ್ಕಾವತಿ ಬಡಾವಣೆಗೆ ಕಾಯಕಲ್ಪ

ಮರು ಅಭಿವೃದ್ಧಿ ಕಾಮಗಾರಿಗೆ ಚಾಲನೆ । ಮೂರು ಬಡಾವಣೆಗೆಳಲ್ಲಿ ಅಭಿವೃದ್ಧಿ ಕಾಮಗಾರಿಗೆ 37 ಕೋಟಿ ರೂ ವೆಚ್ಚ

ರಾಮನಗರ: ಬಡವರಿಗೆ ನಿವೇಶನ ಒದಗಿಸಲು ರಾಮನಗರ ತಾಲೂಕಿನಲ್ಲಿ 260 ಎಕರೆ ಸರ್ಕಾರಿ ಜಾಗ ಗುರುತಿಸಲಾಗಿದ್ದು, ಅದನ್ನು 27 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ. ಅಲ್ಲದೆ, ಪ್ರಾಧಿಕಾರ ವತಿಯಿಂದ ಅರ್ಚಕರಹಳ್ಳಿಯಲ್ಲಿ 116 ಎಕರೆಯಲ್ಲಿ ಹೊಸ ಬಡಾವಣೆ ನಿರ್ಮಾಣಕ್ಕೆ ಸಿದ್ಧತೆಗಳು ನಡೆದಿದ್ದು, ಶೀಘ್ರದಲ್ಲಿಯೇ ಅಧಿಸೂಚನೆ ಪ್ರಕಟಿಸಲಾಗುವುದು ಎಂದು ರಾಮನಗರ ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದರು.

ನಗರದ ಹೊರ ವಲಯದ ಜೀಗೇನಹಳ್ಳಿಯಲ್ಲಿ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ವತಿಯಿಂದ ಅರ್ಕಾವತಿ ವಸತಿ ಬಡಾವಣೆ ಹಾಗೂ ಕಣ್ವ ವಸತಿ ಬಡಾವಣೆಗಳ ಮರು ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಮುಂದಿನ ಆರೇಳು ತಿಂಗಳಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿವಿ ಲೋಕಾರ್ಪಣೆ ಮಾಡಲಾಗುವುದು ಎಂದರು.

ಪ್ರಾಧಿಕಾರದ ಮೂರು ಲೇಔಟ್‌ಗಳಿಗೆ ಮರು ಜೀವ ನಗರಾಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿರುವ ಮೂರು ಲೇಔಟ್‌ಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ ನೆನೆಗುದಿಗೆ ಬಿದ್ದಿತ್ತು. ಡಿ.ಕೆ.ಶಿವಕುಮಾರ್ ನೇತೃತ್ವ, ಡಿ.ಕೆ.ಸುರೇಶ್ ಮಾರ್ಗದರ್ಶನದಲ್ಲಿ ನಾನು ಮತ್ತು ಪ್ರಾಧಿಕಾರ ಅಧ್ಯಕ್ಷರು, ನಿರ್ದೇಶಕರು ಪ್ರಾಧಿಕಾರದ ಮೂರು ಬಡಾವಣೆಗಳಿಗೆ ಕಾಯಕಲ್ಪ ನೀಡಿದ್ದೇವೆ ಎಂದರು.

ಹಿಂದಿನ ಆಡಳಿತದ ವಿರುದ್ಧ ಕಿಡಿ

ಈ ಬಡಾವಣೆಗಳಲ್ಲಿ 170 ನಿವೇಶನಗಳು ಹರಾಜು ಬಾಕಿ ಇದೆ. ವಾರಸುದಾರರು ಇಲ್ಲದಿರುವ 60 ನಿವೇಶನಗಳಿವೆ. ಹಿಂದೆ ಇದ್ದ ಅಧ್ಯಕ್ಷರು, ಆಯುಕ್ತರು ಮತ್ತು ನಿರ್ದೇಶಕರಾಗಿದ್ದವರು ತಮ್ಮ ಸ್ವಾರ್ಥಕ್ಕಾಗಿ ಬಡವರ ರಕ್ತ ಹೀರುವ ಕೆಲಸ ಮಾಡಿದ್ದಾರೆ. ಅದರಲ್ಲಿ ಕೆಲವರು ಜೈಲಿಗೆ ಹೋಗಿದ್ದರೆ, ಇನ್ನೂ ಕೆಲವರು ತಪ್ಪಿಸಿಕೊಂಡು ಅಧ್ಯಕ್ಷ ಸ್ಥಾನ ಬಿಟ್ಟು ಹೋದರು ಎಂದು ಇಕ್ಬಾಲ್ ಹುಸೇನ್ ಕಿಡಿಕಾರಿದರು.



ಕಾಮಗಾರಿ ವಿಳಂಬವೇಕೆ?

ಸರ್ಕಾರದ ಅಣತಿಯಂತೆ ಚದರಡಿಗೆ 200 ರು ಅಭಿವೃದ್ಧಿ ಶುಲ್ಕ ಪಾವತಿಸಿಕೊಳ್ಳುವಂತೆ ಅರ್ಕಾವತಿ ಲೇಔಟ್‌ನಲ್ಲಿ ನಿವಶೇನ ಖರೀದಿದಾರರಿಗೆ ಮನವರಿಕೆ ಮಾಡಲಾಗಿತ್ತು. ಅಭಿವೃದ್ಧಿ ಶುಲ್ಕ ಪಾವತಿಸಿದ 6 ತಿಂಗಳೊಳಗೆ ಕಾಮಗಾರಿ ಆರಂಭಿಸುವುದಾಗಿ ತಿಳಿಸಿದ್ದೆವು. ಆದರೆ ಅನೇಕರಿಗೆ ಭರವಸೆ ಇರಲಿಲ್ಲ. ಅಭಿವೃದ್ಧಿ ಪಾವತಿಸುವ ವಿಶ್ವಾಸದ ಮೇರೆಗೆ ಕಾಮಗಾರಿ ಕೈಗೊಳ್ಳಲು ಟೆಂಡರ್ ಸಹ ಕರೆದಿದ್ದೆವು. ಅನೇಕರು ಶುಲ್ಕವನ್ನು ತಡವಾಗಿ ಪಾವತಿಸಿದರು. ಹೀಗಾಗಿ ಕಾಮಗಾರಿ ಆರಂಭವಾಗುವುದು ಸಹ ತಡವಾಗಿದೆ. 1661 ಮಂದಿ ಪೈಕಿ 1436 ಮಂದಿ ಅಭಿವೃದ್ಧಿ ಶುಲ್ಕವನ್ನು ಪಾವತಿಸಿದ್ದಾರೆ. ಉಳಿದವರು ಈಗಲಾದರೂ ಪಾವತಿಸುವ ವಿಶ್ವಾಸವಿದೆ. ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಟೆಂಡರ್ ಕರೆದ್‌ನಿವೇಶನ ಹಂಚಿಕೆಯಾಗಿ ಹಲವು ವರ್ಷಗಳು ಕಳೆದರೂ ರಸ್ತೆ, ನೀರು, ಒಳ ಚರಂಡಿಯಂತಹ ಅಗತ್ಯ ಸೌಲಭ್ಯಗಳಿಲ್ಲದೆ ಮನೆ ಕಟ್ಟಲು ಹಿಂದೇಟು ಹಾಕುತ್ತಿದ್ದ ನಿವೇಶನ ದಾರರಿಗೆ ಪ್ರಾಧಿಕಾರದ ಇತ್ತೀಚಿನ ಕ್ರಮಗಳು ಹೊಸ ಭರವಸೆ ಮೂಡಿಸಿವೆ, ಪ್ರಾಧಿಕಾರದ ಅಧ್ಯಕ್ಷರಾಗಿ ನಿವೇಶನ ಖರೀದಿದಾರರಿಗೆ ನ್ಯಾಯ ದೊರಕಿಸಿಕೊಟ್ಟ ತೃಪ್ತಿ ಇದೆ ಎಂದರು.

ಎಚ್.ಡಿ.ಕೆ ವಿರುದ್ಧ ಪರೋಕ್ಷ ಟೀಕಾ ಪ್ರಹಾರ

ಈ ಕ್ಷೇತ್ರದಿಂದ ಆಯ್ಕೆಯಾಗಿ ಪ್ರಧಾನಿ ಮತ್ತು ಮುಖ್ಯಮಂತ್ರಿ ಹುದ್ದೆ ಅಲಂಕರಿಸಿದವರು ಬಡವರ ಬದುಕಿನ ಬಗ್ಗೆ ಒಮ್ಮೆಯೂ ಚಿಂತನೆಯನ್ನೇ ಮಾಡಲಿಲ್ಲ. ಈಗ ಕೆಲವರು ಅಂಥವರ ಜೊತೆ ಸೇರಿಕೊಂಡು ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ತೊಡಕುಂಟು ಮಾಡುತ್ತಿದ್ದಾರೆ ಎಂದು ಶಾಸಕ ಇಕ್ಬಾಲ್ ಹುಸೇನ್ ಪರೋಕ್ಷವಾಗಿ ಎಚ್.ಡಿ.ದೇವೇಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಬೇಸರ ವ್ಯಕ್ತಪಡಿಸಿದರು. ಮಹಾನ್ ನಾಯಕರೊಬ್ಬರು ಅರ್ಕಾವತಿ ರಿವರ್ ಫ್ರಂಟ್ ಪಾರ್ಕ್ ನಿರ್ಮಾಣ ವಿಚಾರವಾಗಿ ದೇವಸ್ಥಾನ ಮತ್ತು ದರ್ಗಾಕ್ಕೆ ಧಕ್ಕೆಯಾಗುತ್ತದೆ ಎಂದು ಜನರನ್ನು ಎತ್ತಿ ಕಟ್ಟಿ ಅಭಿವೃದ್ಧಿ ಕಾರ್ಯಕ್ಕೆ ಅಡ್ಡಿ ಪಡಿಸುತ್ತಿದ್ದಾರೆ ಎಂದು ಟೀಕಿಸಿದರು.

ಮರು ಅಭಿವೃದ್ಧಿ ಕಾಮಗಾರಿಗೆ 37 ಕೋಟಿ ವೆಚ್ಚ – ಎ.ಬಿ. ಚೇತನ್ ಕುಮಾರ್

ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್ ಮಾತನಾಡಿ, 652 ನಿವೇಶನದಾರರಿರುವ ಜೀಗೇನಹಳ್ಳಿ/ಅರ್ಕಾವತಿ ಬಡಾವಣೆಯನ್ನು 15.52 ಕೋಟಿ ರೂ ವೆಚ್ಚದಲ್ಲಿ, 124 ನಿವೇಶನದಾರರಿರುವ ಆರ್.ಜಿ.ಲೇ ಔಟ್‌ನಲ್ಲಿ 2.98 ಕೋಟಿ ರೂ ವೆಚ್ಚದಲ್ಲಿ, 885 ನಿವೇಶನದಾರರಿರುವ ಕಣ್ವ ಲೇ ಔಟ್‌ನ್ನು 18.63 ಕೋಟಿ ರೂಗಳ ವೆಚ್ಚದಲ್ಲಿ ಮರುಅಭಿವೃದ್ಧಿ ಕಾಮಗಾರಿ ಯೋಜನೆಯ ಮೂಲಕ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ಇದರಿಂದ ಒಟ್ಟು 1661 ನಿವೇಶನ ದಾರರುಳ್ಳ ಮೂರು ಬಡಾವಣೆಗಳ ಅಭಿವೃದ್ಧಿಗೆ 37 ಕೋಟಿ ರೂಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ತಿಳಿಸಿದರು.

116 ಎಕರೆ ಪ್ರದೇಶದಲ್ಲಿ ಹೊಸ ಬಡಾವಣೆ

2017ರಲ್ಲಿ ರಾಮನಗರ ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ ವಿಭಜನೆಯಾಗಿ ರಾಮನಗರ ಮತ್ತು ಚನ್ನಪಟ್ಟಣ ಪ್ರಾಧಿಕಾರಗಳು ರಚನೆಯಾಗಿವೆ. ಆದರೆ ಇಲ್ಲಿಯವರೆಗೂ ಮಾಸ್ಟರ್ ಪ್ಲಾನ್ ಆಗಿಲ್ಲ. ಅರ್ಚಕರ ಹಳ್ಳಿಯಲ್ಲಿ ರಾಜೀವ್ ಗಾಂಧಿ ವಿವಿ ಬಳಿ 116 ಎಕರೆ ಭೂ ಪ್ರದೇಶದಲ್ಲಿ ಹೊಸ ಬಡಾವಣೆಯನ್ನು ನಿರ್ಮಿಸುವ ಉದ್ದೇಶವಿದೆ. ಸದ್ಯದಲ್ಲೇ ಈ ವಿಚಾರದಲ್ಲಿ ನೋಟಿಫಿಕೇಷನ್ ಹೊರಡಲಿದೆ ಎಂದರು. ಪ್ರಾಧಿಕಾರಕ್ಕೆ ಮುಂಬರುವ ಅಧ್ಯಕ್ಷರಿಗೆ ಈ ಎಲ್ಲಾ ವಿಚಾರಗಲಲ್ಲಿ ತಮ್ಮ ಸಹಕಾರ ಇರಲಿದೆ ಎಂದರು.

ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಜಿಲ್ಲಾಧ್ಯಕ್ಷ ಕೆ.ರಾಜು, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ನಿರ್ದೇಶಕರಾದ ಪರ್ವಿಜ್ ಪಾಷಾ, ಶ್ರೀದೇವಿ, ಶ್ರೀನಿವಾಸ್, ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪ್ರಮೋದ್, ನಿರ್ದೇಶಕರಾದ ಬಸವರಾಜು, ಫರೀದ್, ಲಕ್ಷ್ಮಮ್ಮ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿಎನ್ ಆರ್ ವೆಂಕಟೇಶ್, ನಗರಸಭೆ ಮಾಜಿ ಸದಸ್ಯರಾದ ನಿಜಾಮುದ್ದೀನ್ ಷರೀಫ್, ಆಯಿಷಾ ಬಾನು, ಭೈರೇಗೌಡ, ಗಿರಿಜಮ್ಮ, ವಿಜಯ ಕುಮಾರಿ, ಬಮೂಲ್ ನಿರ್ದೇಶಕ ಹರೀಶ್, ಬಗರ್ ಹುಕುಂ ಸಾಗುವಳಿ ಸಮಿತಿ ಸದಸ್ಯ ರವಿ, ಮುಖಂಡರಾದ ಪ್ರಾಣೇಶ್, ಮಂಚೇಗೌಡ, ಪ್ರಾಧಿಕಾರ ಆಯುಕ್ತೆ ತೇಜಸ್ವಿನಿ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪೂರ್ಣಿಮಾ ಇದ್ದರು.

ಡಿ.ಕೆ.ಶಿ, ಡಿ.ಕೆ.ಸು ಅವರ ಮಾರ್ಗದರ್ಶನ

ಪ್ರಾಧಿಕಾರ ನಿರ್ಮಿಸಿರುವ ಅರ್ಕಾವತಿ ಲೌಔಟ್‌ನಲ್ಲಿ ನಿವೇಶನ ಖರಿದಿಸಿ ದಶಕಗಳಾಗಿದ್ದರೂ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಆಗಿರಲಿಲ್ಲ, ತಾವು ಪ್ರಾಧಿಕಾರದ ಅಧ್ಯಕ್ಷರಾಗಿ ಅಧಿಕಾರವಹಿಸಿ ಕೊಂಡ ನಂತರ ಈ ವಿಚಾರಗಳನ್ನು ಅಂದಿನ ಸಂಸದ ರಾಗಿದ್ದ ಹಾಲಿ ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಮತ್ತು ಶಾಸಕರಾದ ಎಚ್.ಎ.ಇಕ್ಬಾಲ್ ಹುಸೇನ್ ಅವರ ಗಮನಕ್ಕೆ ತರಲಾಗಿತ್ತು. ಇಂದು ಅವರ ಸಹ ಕಾರದಿಂದ ಮತ್ತು ಮಾರ್ಗದರ್ಶನದಲ್ಲಿ ಮರು ಅಭಿ ವೃದ್ಧಿ ಕಾಮಗಾರಿಗೆ ಚಾಲನೆ ಸಿಕ್ಕಿದೆ. ನಿವೇಶನದಾರರ ಬದುಕಿನಲ್ಲಿ ಬೆಳಕು ತರಲಿ ಎಂಬ ಉದ್ದೇಶದಿಂದ ಅಭಿವೃದ್ಧಿ ಕೆಲಸಕ್ಕೆ ದೀಪಾವಳಿಯಂದೇ ಭೂಮಿ ಪೂಜೆ ನೆರವೇರಿಸಲಾಗುತ್ತಿದೆ ಸಿಎಂ ಡಿ.ಕೆ.ಶಿವಕು ಮಾರ್ ಅವರು ಈ ವಿಚಾರದಲ್ಲಿ ಕಾಳಜಿವಹಿಸಿ ದ್ದರಿಂದ ಎಲ್ಲವು ಸಾಕಾರವಾಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಮೂಲ ದಾಖಲೆಗಳು ಇರಲಿಲ್ಲ: ಶಿವಾನಂಕರಿ ಗೌಡ

ಪ್ರಾಧಿಕಾರದ ಆಯುಕ್ತರಾಗಿದ್ದ ಶಿವಾನಂಕರಿ ಗೌಡ ಮಾತನಾಡಿ, ತಾವು ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ ಅಧಿಕಾರವಹಿಸಿಕೊಂಡಾಗ ಲೇಔಟ್‌ಗಳ ನಿರ್ಮಾಣದ ವಿಚಾರದಲ್ಲಿ ಅಗತ್ಯವಾಗಿ ಇರಬೇಕಾಗಿದ್ದ ನಕ್ಷೆ ಸೇರಿದಂತೆ ದಾಖಲೆಗಳೇ ಇರಲಿಲ್ಲ. ಎಲ್ಲ ಸವಾಲುಗಳನ್ನು ಮೆಟ್ಟಿ ನಿಂತು ಪ್ರಾಧಿಕಾರವನ್ನು ಸರಿಪಡಿಸಲಾಗಿದೆ. ಈ ವಿಚಾರದಲ್ಲಿ ಅಧ್ಯಕ್ಷರು ಮತ್ತು ಶಾಸಕರ ಶ್ರಮವಿದೆ ಎಂದರು.

ಕೆಂಪೇಗೌಡ ವೃತ್ತದ ಅಭಿವೃದ್ಧಿ ಪರಿಶೀಲಿಸಿದ ಸಂಸದರು

ಮೈಸೂರು: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮೈಸೂರಿನ ಕೆಂಪೇಗೌಡ ವೃತ್ತ (ಮಣಿಪಾಲ್ ಸರ್ಕಲ್)ಕ್ಕೆ ಭೇಟಿ ನೀಡಿ, ಅಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕಾಮಗಾರಿಗಳ ಪ್ರಗತಿಯ ಕುರಿತು ಚರ್ಚಿಸಿ ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವುದು, ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಹಾಗೂ ಸಾರ್ವಜನಿಕರಿಗೆ ಉಂಟಾಗುವ ಅನಾನುಕೂಲಗಳನ್ನು ಕಡಿಮೆ ಮಾಡುವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ಯದುವೀರ್ ಒಡೆಯರ್, "ಕೆಂಪೇಗೌಡ ವೃತ್ತವು ಮೈಸೂರಿನ ಪ್ರಮುಖ ಸಂಚಾರ ಕೇಂದ್ರವಾಗಿದ್ದು, ಪ್ರತಿದಿನ ಸಾವಿರಾರು ವಾಹನಗಳು ಹಾಗೂ ಸಾರ್ವಜನಿಕರು ಈ ಮಾರ್ಗವನ್ನು ಬಳಸುತ್ತಾರೆ. ಇಲ್ಲಿ ನಡೆಯುತ್ತಿರುವ ಕಾಮಗಾರಿಗಳು ಸುಗಮ ಸಂಚಾರ, ರಸ್ತೆ ಸುರಕ್ಷತೆ ಮತ್ತು ಉತ್ತಮ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ಮಹತ್ವದ್ದಾಗಿವೆ. ಕಾಮಗಾರಿಗಳ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ, ಅವುಗಳನ್ನು ತ್ವರಿತವಾಗಿ ಹಾಗೂ ನಿಗದಿತ ಸಮಯದೊಳಗೆ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದೇನೆ," ಎಂದು ತಿಳಿಸಿದರು.



ಪ್ರಸ್ತುತ ಸ್ಥಳಾಂತರಿಸಲಾದ ಮರಗಳ ಶೇಕಡಾ 95ರಷ್ಟು ಮರಗಳು ಬದುಕುಳಿದಿದ್ದು, ಇದು ಆಶಾದಾಯಕ ಬೆಳವಣಿಗೆಯಾಗಿದೆ. "ಮರಗಳ ಸ್ಥಳಾಂತರವು ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಮಹತ್ವದ ಕಾರ್ಯವಾಗಿದೆ. ಪ್ರಸ್ತುತ ಶೇಕಡಾ 95ರಷ್ಟು ಮರಗಳು ಬದುಕುಳಿದಿರುವುದು ಸಂತೋಷದ ಸಂಗತಿ. ನಮ್ಮ ಜವಾಬ್ದಾರಿ ಇಲ್ಲಿಗೆ ಮುಗಿಯುವುದಿಲ್ಲ. ಸ್ಥಳಾಂತರಿಸ ಲಾದ ಪ್ರತಿಯೊಂದು ಮರದ ಆರೋಗ್ಯ ಮತ್ತು ಬೆಳವಣಿಗೆಯನ್ನು ನಾವು ನಿಕಟವಾಗಿ ಗಮನಿಸುತ್ತಿದ್ದು, ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದೇವೆ. ಮರಗಳು ಉತ್ತಮವಾಗಿ ಬೆಳೆಯುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮೂಲಸೌಕರ್ಯ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಎರಡೂ ಸಮಾನ ಮಹತ್ವ ಹೊಂದಿದ್ದು, ಅಭಿವೃದ್ಧಿ ಕಾರ್ಯಗಳು ಪರಿಸರದ ಮೇಲೆ ಕನಿಷ್ಠ ಪರಿಣಾಮ ಬೀರುವಂತೆ ನೋಡಿಕೊಳ್ಳುವುದು ಅಗತ್ಯ ಎಂದರು.

247ನೇ ರ್ಯಾಂಕಿಂಗ್‌ನಲ್ಲಿ ಮೈವಿವಿ

ಮೈಸೂರು: ಇತ್ತೀಚೆಗೆ ಪ್ರಕಟವಾದ ಕ್ಯು.ಎಸ್. ವರ್ಲ್ಡ್ ಯುನಿವರ್ಸಿಟಿ ರಾಂಕಿಂಗ್‌ನಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ದಕ್ಷಿಣ ಏಷ್ಯಾ ದೇಶಗಳ ನಡುವೆ 247ನೇ ಸ್ಥಾನವನ್ನು ಹಾಗೂ ಕರ್ನಾಟಕದ ಸಾರ್ವಜನಿಕ ವಿಶ್ವವಿದ್ಯಾನಿಲಯಗಳ ಪೈಕಿ 1ನೇ ಸ್ಥಾನವನ್ನು ಪಡೆದಿದೆ ಎಂದು ಮೈಸೂರು ವಿಶ್ವ ವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ ಲೋಕನಾಥ್ ಸಂತಸ ವ್ಯಕ್ತಪಡಿಸಿದರು.

ಈ ಕುರಿತು ಮಾಹಿತಿ ಹಂಚಿಕೊಂಡಿರುವ ಕುಲಪತಿ ಪ್ರೊ.ಲೋಕನಾಥ್, ಹನ್ನೊಂದು ಅಂಶಗಳನ್ನಾಧರಿಸಿ ಕ್ಯು.ಎಸ್.ಸಂಸ್ಥೆಯು ಪ್ರತಿ ವರ್ಷವೂ ಜಾಗತಿಕವಾಗಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ರ್ಯಾಂಕಿಂಗ್ ನೀಡುತ್ತದೆ. ಅವುಗಳಲ್ಲಿ ಪ್ರಮುಖವೆಂದರೆ ಶೈಕ್ಷಣಿಕ ವರ್ಚಸ್ಸು, ವಿದ್ಯಾರ್ಥಿ–ಅಧ್ಯಾಪಕರ ಅನುಪಾತ, ಅಂತಾರಾಷ್ಟ್ರೀಯ ಒಡಂಬಡಿಕೆಗಳು, ಉದ್ಯೋಗದಾತರು ಹೊಂದಿರುವ ಅಭಿಪ್ರಾಯ, ಹಾಗೂ ಸಂಶೋಧನಾ ಪ್ರಕಟಣೆಗಳು. ಮೈಸೂರು ವಿಶ್ವವಿದ್ಯಾನಿಲಯವು ಬೋಧನೆ, ಸಂಶೋಧನೆ ಹಾಗೂ ಉದ್ಯೋಗ ಸೃಷ್ಟಿಯ ಆಯಾಮಗಳಲ್ಲಿ ಉತ್ತಮ ಸಾಧನೆ ಮಾಡಿ ಈ ಸ್ಥಾನವನ್ನು ಪಡೆದಿದೆ ಎಂದು ತಿಳಿಸಿದರು.

ಖಾಯಂ ಅಧ್ಯಾಪಕರುಗಳ ಕೊರತೆ ಹಾಗೂ ಇನ್ನಿತರ ಮಿತಿಗಳ ನಡುವೆಯೂ ಮೈಸೂರು



ವಿಶ್ವವಿದ್ಯಾನಿಲಯವು 247ನೇ ಸ್ಥಾನ ಪಡೆದಿರುವುದು ಅಭಿಮಾನದ ಸಂಗತಿಯಾಗಿದೆ. ಕ್ಯು.ಎಸ್. ಸಂಸ್ಥೆಯ ಮಾರ್ಗಸೂಚಿಯನ್ವಯ ಇಡೀ ವಿಶ್ವವಿದ್ಯಾನಿಲಯದ ದತ್ತಾಂಶ ಮತ್ತು ದಾಖಲೆಗಳನ್ನು ನಿಖರವಾಗಿ ಹಾಗೂ ಸಮರ್ಪಕವಾಗಿ ಬಿಂಬಿಸಿದ ವಿಶ್ವವಿದ್ಯಾನಿಲಯದ ಐ.ಕ್ಯು.ಎ.ಸಿ.ಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರ ಪರಿಶ್ರಮವನ್ನು ವಿಶೇಷವಾಗಿ ಶ್ಲಾಘಿಸುತ್ತೇನೆ. ಮುಂದುವರಿದು, ವಿಶ್ವವಿದ್ಯಾನಿಲಯದ ಈ ಯಶಸ್ಸಿಗೆ ಕಾರಣಕರ್ತರಾದ ಸಿಂಡಿಕೇಟ್ ಹಾಗೂ ಶೈಕ್ಷಣಿಕ ಮಂಡಳಿಯ ಸದಸ್ಯರು, ಅಧ್ಯಾಪಕ ಹಾಗೂ ಅಧ್ಯಾಪಕೇತರ ವರ್ಗ, ಅಧಿಕಾರಿಗಳು, ಸಂಶೋಧಕರು, ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ ಎಂದಿದ್ದಾರೆ.

ತೀವ್ರ ಕಳಪೆ ಹಂತ ತಲುಪಿದ ದೆಹಲಿ ವಾಯು ಗುಣಮಟ್ಟ

ನವದೆಹಲಿ: ದೀಪಾವಳಿ ಹಬ್ಬದ ಸಂಭ್ರಮದ ನಡುವೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ವಾಯುಮಾಲಿನ್ಯದ ಮಟ್ಟ ಮತ್ತಷ್ಟು ಅಪಾಯಕಾರಿ ಹಂತಕ್ಕೆ ಕುಸಿದಿದೆ.

ಭಾನುವಾರ ಬೆಳಗ್ಗೆ 8.10 ರ ಸುಮಾರಿಗೆ ದೆಹಲಿಯ ಒಟ್ಟಾರೆ ವಾಯು ಗುಣಮಟ್ಟ ಸೂಚ್ಯಂಕ (ಎಕ್ಯೂಐ) 483ಕ್ಕೆ ಕುಸಿಯುವ ಮೂಲಕ 'ತೀವ್ರ ಕಳಪೆ ' ವಿಭಾಗವನ್ನು ತಲುಪಿದೆ. ಇಡೀ ನಗರ ದಟ್ಟವಾದ ವಿಷಕಾರಿ ಹೊಗೆಯಿಂದ ಆವೃತವಾಗಿದ್ದು, ದೃಷ್ಟಿ ಗೋಚರತೆ ಗಣನೀಯವಾಗಿ ಕಡಿಮೆಯಾಗಿದೆ. ಇದು ಸಾರ್ವಜನಿಕರಲ್ಲಿ ತೀವ್ರ ಆತಂಕ ಮೂಡಿಸಿದೆ. ನಗರದ ಹಲವು ಪ್ರದೇಶಗಳಲ್ಲಿ ಎಕ್ಯೂಐ 400ರ ಗಡಿ ದಾಟಿದ್ದು, ಗಾಳಿಯ ಗುಣಮಟ್ಟ ತೀವ್ರ ಕಳಪೆ ಹಂತ ತಲುಪಿದೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ತಿಳಿಸಿದೆ. ಭಾನುವಾರ ಬೆಳಗ್ಗೆ ದೆಹಲಿಯ ಕನಿಷ್ಠ ಎಂಟು ವಾಯು ಗುಣಮಟ್ಟ ಮೇಲ್ವಿಚಾರಣಾ ಕೇಂದ್ರಗಳಲ್ಲಿ ಎಕ್ಯೂಐ ತೀವ್ರ ಕಳಪೆ ಮಟ್ಟದಲ್ಲಿತ್ತು. ಪಂಜಾಬಿ ಬಾಗ್‌ನಲ್ಲಿ 449, ಆರ್.ಕೆ. ಪುರಂನಲ್ಲಿ 448, ಬವಾನಾದಲ್ಲಿ 446 ಹಾಗೂ ಐಟಿ ದೆಹಲಿ ಮತ್ತು ರೋಹಿಣಿಯಲ್ಲಿ ತಲಾ 445 ದಾಖಲಾಗಿದೆ. ಪಟ್ಪರ್‌ಗಂಜ್‌ನಲ್ಲಿ 421, ಚಾಂದಿನಿ ಚೌಕ್‌ನಲ್ಲಿ 420 ಹಾಗೂ ಅಲಿಪುರದಲ್ಲಿ 413 ಎಕ್ಯೂಐ ದಾಖಲಾಗಿದೆ. ಇತರ ಕೆಲವು ಪ್ರದೇಶಗಳಲ್ಲಿ ಗಾಳಿಯ ಗುಣಮಟ್ಟ ಕಳಪೆ ವರ್ಗದಲ್ಲಿತ್ತು. ನರೇಲಾದಲ್ಲಿ 395, ಇಂಡಿಯಾ ಗೇಟ್ ಬಳಿ 398, ಆನಂದ್ ವಿಹಾರ್‌ನಲ್ಲಿ 328, ಅಕ್ಷರಧಾಮ ದೇವಸ್ಥಾನದ ಸುತ್ತಮುತ್ತ 336 ಎಕ್ಯೂಐ ದಾಖಲಾಗಿದೆ.

ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಮೈಸೂರು: ನಗರದ ಪ್ರತಿಷ್ಠಿತ ದಿ ಮೈಸೂರು ಕೋಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾಗಿ ಜಿ.ನಿರಂಜನ್ ಮತ್ತು ಉಪಾಧ್ಯಕ್ಷರಾಗಿ ಎಂ.ರಾಮಕೃಷ್ಣ ಚುನಾವಣೆ ಮೂಲಕ ಆಯ್ಕೆಯಾದರು.

ಈ ವೇಳೆ ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಜೆ. ಯೋಗೇಶ್, ಮಾಜಿ ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಎಸ್.ಬಿ.ಎಂ.ಮಂಜು, ಎನ್. ಯೋಗಾನಂದ, ಹೆಚ್.ಹರೀಶ್ ಕುಮಾರ್, ಆರ್. ರವಿಕುಮಾರ್, ಆರ್.ಸೋಮಣ್ಣ, ಕೆ.ಗಿರೀಶ್, ಸಿ. ಚಂದ್ರಶೇಖರ್, ಪಿ.ರಾಜೇಶ್ವರಿ, ಎಂ.ಪ್ರಮೀಳ ಮತ್ತು ಬ್ಯಾಂಕಿನ ಕಾರ್ಯನಿರ್ವಾಹಕ ಅಧಿಕಾರಿ ಕೆ. ಹರ್ಷಿತ್ ಗೌಡ ಉಪಸ್ಥಿತರಿದ್ದರು.

ದೀಪ ಹಚ್ಚಿ ದೀಪಾವಳಿ ಹಬ್ಬ ಆಚರಣೆ



ಚಾಮರಾಜನಗರ,ತಾಲೂಕಿನ ಅಂಕನಶೆಟ್ಟಿನಪುರ ಗ್ರಾಮದಲ್ಲಿರುವ ಪ್ರೇರಣಾ ವಿದ್ಯಾ ಸಂಸ್ಥೆಯಲ್ಲಿ ವಿದ್ಯಾರ್ಥಿ ಗಳು ದೀಪಗಳನ್ನು ಹಚ್ಚುವ ಮೂಲಕ ದೀಪಾವಳಿ ಹಬ್ಬವನ್ನು ಆಚರಣೆ ಮಾಡಿದರು.

ಶಾಲೆಯ ಮೈದಾನ ಹಾಗೂ ಕೊಠಡಿಗಳಲ್ಲಿ ಬಣ್ಣ ಬಣ್ಣದ ಚಿತ್ತಾರವನ್ನು ಬಿಡಿಸಿ, ಹೂವುಗಳಿಂದ ಶೃಂಗರಿಸಿ, ದೀಪಗಳನ್ನು ಹಚ್ಚಿ ಸಿಹಿ ಹಂಚಿ ದೀಪಾವಳಿಯ ಹಬ್ಬದ ಶುಭಾಶಯವನ್ನು ವಿದ್ಯಾರ್ಥಿಗಳು ವಿನಿಮಯ ಮಾಡಿಕೊಂಡರು.

ಸಂಸ್ಥೆಯ ಅಧ್ಯಕ್ಷ ಬಿ.ಪಿ. ಪ್ರಕಾಶ್ ಮಾತನಾಡಿ, ದೀಪಾವಳಿ ಹಬ್ಬವು ಕತ್ತಲಿನಿಂದ ಬೆಳಕಿನ ಕಡೆಗೆ ಹೋಗುವುದೇ ಆಗಿದೆ. ಅಜ್ಞಾನದಿಂದ ಜ್ಞಾನದ ಕಡೆಗೆ ಹೋಗುವುದು ಆಗಿದೆ. ದೀಪಾವಳಿ ಹಬ್ಬವು ತಮ್ಮೆಲ್ಲರ ಬಾಳಿನಲ್ಲಿ ಸಂತೋಷವನ್ನು ಉಂಟು ಮಾಡಲಿ ಎಂದು ಶುಭ ಕೋರಿದರು.

ದೀಪಾವಳಿ ಕೇವಲ ಪಟಾಕಿ ಹೊಡೆಯುವ ಹಬ್ಬ ವಷ್ಟೆ ಅಲ್ಲ. ಬಲಿ ಪಾಡ್ಯಮಿಯ ಮತಹ್ವವನ್ನು ತಿಳಿಸಿದರು.

ಬಲಿ ಚಕ್ರವರ್ತಿಯ ನೆನಪಿಗಾಗಿ ದೀಪಾವಳಿ ಹಬ್ಬವನ್ನು ಆಚರಿಸಲಾಗುತ್ತದೆ. ದೀಪಾವಳಿ ಮಹತ್ವವನ್ನು ತಿಳಿಸಿದರು.

ಮುಖ್ಯ ಶಿಕ್ಷಕ ಎಚ್.ಜಿ. ಮಹೇಶ್‌ಕುಮಾರ್, ಶಾಲೆಯ ಶಿಕ್ಷಕರು, ಶಿಕ್ಷಕಿಯರು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.

ಜಿಲ್ಲಾ ಉಸ್ತವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ ಅವರಿಂದ ಭೂಮಿಪೂಜೆ

ವೆಂಕಟಯ್ಯನಛತ್ರ ಗ್ರಾಮದಲ್ಲಿ ಕಾಮಗಾರಿಗಳಿಗೆ ಚಾಲನೆ

ಚಾಮರಾಜನಗರ: ತಾಲೂಕಿನ ವೆಂಕಟಯ್ಯನಛತ್ರ ಗ್ರಾಮದ ಉಪ್ಪಾರ ಬಡಾವಣೆಯಲ್ಲಿ ಮಳೆ ಹಾನಿ ಪರಿಹಾರ ನಿಧಿಯಡಿ 50 ಲಕ್ಷ ರೂ ವೆಚ್ಚದಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ ಹಾಗೂ ಪರಿಶಿಷ್ಟ ಜಾತಿ ಬಡಾವಣೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 20 ಲಕ್ಷ ರೂ ವೆಚ್ಚದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ.ಪುಟ್ಟರಂಗಶೆಟ್ಟಿ ಅವರು ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಸಚಿವರು, ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳಿಗೆ ಸ್ಥಳೀಯ ನಿವಾಸಿಗಳು ಸಹಕಾರ ನೀಡಬೇಕು. ಗುತ್ತಿಗೆದಾರರು ನಿಗದಿತ ಅವಧಿಯೊಳಗೆ ಕಾಮಗಾರಿಗಳನ್ನು ಗುಣಮಟ್ಟದಿಂದ ಹಾಗೂ ಅಚ್ಚುಕಟ್ಟಾಗಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ಇದೇ ವೇಳೆ ಎರಡೂ ಬಡಾವಣೆಗಳ ನಿವಾಸಿಗಳಿಂದ ವಿವಿಧ ಸಮಸ್ಯೆಗಳನ್ನು ಆಲಿಸಿದ ಸಚಿವರು, ಅವುಗಳನ್ನು ಪರಿಹರಿಸುವುದಾಗಿ ಭರವಸೆ ನೀಡಿದರು.

ಬಳಿಕ ಉಪ್ಪಾರ ಸಮುದಾಯ ಭವನದ ಕಾಮಗಾರಿ ಹಾಗೂ ವಿ.ಸಿ.ಹೊಸೂರು ಗ್ರಾಮದಲ್ಲಿ ಕಾಮಗಾರಿ



ನಡೆಯುತ್ತಿರುವ ಚೆಂಗೂರು ಮಾರಮ್ಮ ದೇವಸ್ಥಾನಕ್ಕೆ ಭೇಟಿ ನೀಡಿದ ಸಚಿವರು, ಅಭಿವೃದ್ಧಿ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದರು. ಈ ವೇಳೆ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳ ಕುರಿತು ಮಾಹಿತಿ ಪಡೆದ ಸಚಿವರು, ದೇವಸ್ಥಾನದಲ್ಲಿ ಇನ್ನೂ ಅಗತ್ಯವಿರುವ ಹೆಚ್ಚುವರಿ ಕಾಮಗಾರಿಗಳನ್ನು ಸಹ ಮಾಡಿಸಿಕೊಡಲಾಗುವುದು ಎಂದು ತಿಳಿಸಿದರು.


ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷರಾದ ನಲ್ಲೂರು ಸೋಮೇಶ್ವರ್, ಎಪಿಎಂಸಿ ಸದಸ್ಯ ಸೋಮೇಶ್ವರ್, ಮುಖಂಡರಾದ ಸೋಮಣ್ಣ, ರಂಗಸ್ವಾಮಿ, ಶಿವಮಲ್ಲು, ನಾಗರಾಜು, ಪ್ರಜ್ವಲ್, ರವಿಕಿರಣ್, ಮಹೇಶ್ ಚಿಕ್ಕಮೋಳೆ, ಮುರುಗೇಶ್ ಸೇರಿದಂತೆ ಬಡಾವಣೆಯ ಯಜಮಾನರು, ಮುಖಂಡರು ಉಪಸ್ಥಿತರಿದ್ದರು.

ಅಕ್ರಮ ಪಡಿತರ ಅಕ್ಕಿ ಸಾಗಾಟ ಪತ್ತೆ: 1,125 ಕೆ.ಜಿ. ಅಕ್ಕಿ, ವಾಹನ ವಶ

ಗುಂಡ್ಲುಪೇಟೆ: ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಾಗಾಟ ಮಾಡುತ್ತಿದ್ದ ವಾಹನದ ಮೇಲೆ ಆಹಾರ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ, 1,125 ಕೆ.ಜಿ. ಪಡಿತರ ಅಕ್ಕಿ ಮತ್ತು ಸಾಗಾಟಕ್ಕೆ ಬಳಸಿದ್ದ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ಪಡಗೂರು ಗ್ರಾಮದ ಬಸ್ ನಿಲ್ದಾಣದ ಬಳಿ ನ.7ರಂದು ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಟ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಆಹಾರ ನಿರೀಕ್ಷಕರಾದ ಎಂ.ಜೆ. ಅರವಿಂದ್ ಅವರು ಪೊಲೀಸ್ ಸಿಬ್ಬಂದಿಯೊಂದಿಗೆ ದಾಳಿ ನಡೆಸಿದರು. ಈ ಸಂದರ್ಭದಲ್ಲಿ ಕೆಎ–09 ಬಿ–8589 ನೋಂದಣಿ ಸಂಖ್ಯೆಯ ಮಹೀಂದ್ರಾ ಮ್ಯಾಕ್ಸಿಮೋ ಗೂಡ್ಸ್ ವಾಹನದಲ್ಲಿ ಸಾಗಿಸುತ್ತಿದ್ದ 36 ಚೀಲಗಳ ಒಟ್ಟು 1,125 ಕೆ.ಜಿ. ಪಡಿತರ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದೆ.

ಅಕ್ಕಿಯ ಅಂದಾಜು ಮೌಲ್ಯ 16,875 ರೂ. ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಸಂಬಂಧ ತೆರಕಣಾಂಬಿ ಪೊಲೀಸ್ ಠಾಣೆಯಲ್ಲಿ ಮೊ.ಸಂ.



102/2026ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಾಹನದ ಚಾಲಕ ಸ್ಥಳದಿಂದ ಪರಾರಿಯಾಗಿದ್ದು, ಆತನ ಪತ್ತೆಗೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಜಿಲ್ಲೆಯಲ್ಲಿ ಅಕ್ರಮ ಚಟುವಟಿಕೆಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಪೊಲೀಸ್ ವರಿಷ್ಠಾಧಿಕಾರಿಗಳು ಸೂಚನೆ ನೀಡಿದ್ದು, ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಕಾರ್ಯವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು ಎಂ. ಪ್ರಶಂಸಿಸಿದ್ದಾರೆ.

ನೇತ್ರ ತಪಾಸಣೆ: ಅರಣ್ಯ ರಕ್ಷಕರ ಬೆನ್ನಿಗೆ ನಿಂತ ಲಯನ್ಸ್ ಕ್ಲಬ್

ಹುಣಸೂರು: ಕಾಡು ಮತ್ತು ವನ್ಯಜೀವಿಗಳ ರಕ್ಷಣೆಯೇ ಬದುಕಿನ ಭಾಗವಾಗಿಸಿಕೊಂಡಿರುವ ಅರಣ್ಯ ಸಿಬ್ಬಂದಿಗೆ ಅನುಕಂಪ ತೋರುವುದಕ್ಕಿಂತ ಅವರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸವಾಗಬೇಕು ಎಂದು ಖ್ಯಾತ ನಟ ದುನಿಯಾ ವಿಜಯ್ ಅಭಿಪ್ರಾಯಪಟ್ಟರು.

ನಾಗರಹೊಳೆ ಅರಣ್ಯ ವಲಯದಲ್ಲಿ ಮೈಸೂರು ಲಯನ್ಸ್ ಕ್ಲಬ್ ಹಾಗೂ ಎಎಸ್ಸಿ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಅರಣ್ಯ ಸಿಬ್ಬಂದಿ ಮತ್ತು ಆದಿವಾಸಿ ಸಮುದಾಯದವರಿಗಾಗಿ ಆಯೋಜಿಸಿದ್ದ ನೇತ್ರ ತಪಾಸಣಾ ಶಿಬಿರ ಹಾಗೂ ವಿವಿಧ ಸವಲತ್ತುಗಳ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು.ಅರಣ್ಯ ಸಂರಕ್ಷಣೆ ಎನ್ನುವುದು ಅರಣ್ಯ ಇಲಾಖೆಯೊಂ ದರ ಜವಾಬ್ದಾರಿಯಲ್ಲ. ಅದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಕಾಡಿನೊಳಗೆ ಪ್ರತಿನಿತ್ಯ ಕರ್ತವ್ಯ ನಿರ್ವಹಿಸುವ ಸಿಬ್ಬಂದಿ ಎದುರಿಸುವ ಸವಾಲುಗಳು ಸಾಮಾನ್ಯವಾದುದಲ್ಲ. ಅರಣ್ಯ ಕಳ್ಳರ ಹಾವಳಿ, ವನ್ಯಜೀವಿ ಮತ್ತು ಮಾನವ ಸಂಘರ್ಷದಂತಹ ಅಪಾಯಕಾರಿ ಸನ್ನಿವೇಶಗಳ ನಡುವೆಯೂ ಅವರು ಪರಿಸರದ ರಕ್ಷಣೆಗಾಗಿ ಶ್ರಮಿಸುತ್ತಿದ್ದಾರೆ. ಇಂತಹವರ ಆರೋಗ್ಯ ಮತ್ತು ಸುರಕ್ಷತೆಗೆ ಸಮಾಜ ಹೆಚ್ಚಿನ



ಆದ್ಯತೆ ನೀಡಬೇಕು ಎಂದು ಹೇಳಿದರು.

ಅರಣ್ಯ ಸಿಬ್ಬಂದಿಯೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಕಾಡಿನ ಸಂರಕ್ಷಣೆಯಲ್ಲಿ ತೊಡಗಿರುವ ಆದಿವಾಸಿ ಸಮುದಾಯದ ಆರೋಗ್ಯದ ಕಡೆಗೂ ಗಮನ ಹರಿಸುವುದು ಅಗತ್ಯ. ಪರಿಸರ ಸಂರಕ್ಷಣೆ ಒಂದು ದಿನದ ಕಾರ್ಯಕ್ರಮಕ್ಕೆ ಸೀಮಿತವಾಗದೆ ವರ್ಷದ ಎಲ್ಲ ದಿನಗಳಲ್ಲೂ ನಿರಂತರವಾಗಿ ನಡೆಯಬೇಕಾದ ಕಾರ್ಯವಾಗಿದೆ. ಅರಣ್ಯ ರಕ್ಷಕರಿಗೆ ಬೆಂಬಲ ನೀಡುವ ಮೂಲಕ ಅವರ ಸೇವೆಗೆ ಸಮಾಜ ಗೌರವ ಸಲ್ಲಿಸಬೇಕು ಎಂದು ತಿಳಿಸಿದರು.

ಆರೋಗ್ಯ ಸೇವೆಯ ಮೂಲಕ ಮಾನವೀಯ ಸ್ಪಂದನೆ

ನಾಗರಹೊಳೆ ಎಸಿಎಫ್ ಗೋಪಾಲ್ ಮಾತನಾಡಿ, ಅರಣ್ಯ ಸಿಬ್ಬಂದಿಗೆ ನೇತ್ರ ತಪಾಸಣೆ ನಡೆಸುವ ಮೂಲಕ ಲಯನ್ಸ್ ಸಂಸ್ಥೆಯ ಪದಾಧಿಕಾರಿಗಳು ಮಾನವೀಯತೆ ಮೆರೆದಿದ್ದಾರೆ. ಇಲಾಖೆಯ ಪರವಾಗಿ ಸಂಸ್ಥೆಗೆ ಕೃತಜ್ಞತೆ ಸಲ್ಲಿಸುತ್ತೇವೆ. ಅರಣ್ಯ ಸಂಪತ್ತಿನ ಸಂರಕ್ಷಣೆಯ ಜೊತೆಗೆ ಆದಿವಾಸಿ ಸಮುದಾಯದ ವಯೋವೃದ್ಧರಿಗೆ ಅಗತ್ಯ ಸವಲತ್ತುಗಳನ್ನು ಹಾಗೂ ಮಕ್ಕಳಿಗೆ ಕ್ರೀಡಾ ಕಿಟ್ಗಳನ್ನು ವಿತರಿಸಿರುವುದು ಶ್ಲಾಘನೀಯ. ಎಂದರು. ಕಾರ್ಯಕ್ರಮದಲ್ಲಿ ಲಯನ್ಸ್ ಕ್ಲಬ್ ಆಫ್ ಗ್ರೀನ್ ಸಿಟಿ ಅಧ್ಯಕ್ಷ ಜಯಕುಮಾರ್, ದಿಲೀಪ್ ಕುಮಾರ್, ಡಾ.ಎಚ್.ವಿ. ಉದಯಕುಮಾರ್, ಮಂಜುನಾಥ್ ಶೆಟ್ಟಿ, ನವೀನ್ ರಾವತ್, ಡಾ. ಸಿ. ವೆಂಕಟೇಶ್, ಭಾಸ್ಕರ್, ಕಿರಣ್ ರಾವತ್, ಶ್ರೀನಿವಾಸ್ ವಿ., ಚಂದ್ರಶೇಖರ್, ಕೋಮಲಾ, ಕೃಷ್ಣ, ಪುಟ್ಟೇಗೌಡ, ಚೆನ್ನರಸ ನಾಯಕ, ಪ್ರವೀಣ್ ಕುಮಾರ್ ಸೇರಿದಂತೆ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಎಎಸ್ಸಿ ಆಸ್ಪತ್ರೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಮಕ್ಕಳಿಗೆ ಕ್ರೀಡಾ ಕಿಟ್

ನಾಗರಹೊಳೆ ಅರಣ್ಯ ವಲಯದಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಅರಣ್ಯ ಸಿಬ್ಬಂದಿಗೆ ಉಚಿತ ನೇತ್ರ ತಪಾಸಣೆ ನಡೆಸಲಾಯಿತು. ಅರಣ್ಯ ಸಂರಕ್ಷಣೆಯಲ್ಲಿ ತೊಡಗಿರುವ ಸಿಬ್ಬಂದಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಉದ್ದೇಶದಿಂದ ಮೈಸೂರು ಲಯನ್ಸ್ ಕ್ಲಬ್ ಹಾಗೂ ಎಎಸ್ಸಿ ಕಣ್ಣಿನ ಆಸ್ಪತ್ರೆ ಈ ಸೇವಾ ಕಾರ್ಯ ಕೈಗೊಂಡಿವೆ. ಇದೇ ಸಂದರ್ಭದಲ್ಲಿ ಆದಿವಾಸಿ ಸಮುದಾಯದ ವಯೋವೃದ್ಧರಿಗೆ ವಿವಿಧ ಸವಲತ್ತುಗಳು ಹಾಗೂ ಮಕ್ಕಳಿಗೆ ಕ್ರೀಡಾ ಕಿಟ್ಗಳನ್ನು ವಿತರಿಸಲಾಯಿತು. ಆರೋಗ್ಯ ಸೇವೆ, ಸಾಮಾಜಿಕ ಕಾಳಜಿ ಮತ್ತು ಪರಿಸರ ಸಂರಕ್ಷಣೆಯನ್ನು ಒಟ್ಟುಗೂಡಿಸಿದ ಈ ಕಾರ್ಯಕ್ರಮ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು.

ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ ಫಸಲ್ ಬಿಮಾ (ವಿಮಾ) ಯೋಜನೆ ಅನುಷ್ಠಾನ



ಚಾಮರಾಜನಗರ, ಜಿಲ್ಲೆಯಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯನ್ನು 2026-27 ರ ಹಿಂಗಾರು ಹಾಗೂ ಬೇಸಿಗೆ ಹಂಗಾಮಿನಲ್ಲಿ ಹೋಬಳಿ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ.

ಯೋಜನೆಯಡಿ ಹಿಂಗಾರು ಹಂಗಾಮಿನಲ್ಲಿ ಮಳೆ ಆಶ್ರಯದಲ್ಲಿ ಹುರುಳಿ ಬೆಳೆಯನ್ನು ವಿಮೆಗೆ ಒಳಪಡಿಸಿ ಗ್ರಾಮ ಪಂಚಾಯಿತಿ ಮಟ್ಟಕ್ಕೆ ಅಧಿಸೂಚಿಸಲಾಗಿದೆ. ಹಿಂಗಾರು ಹಂಗಾಮಿಗೆ ಹೋಬಳಿ ಮಟ್ಟದಲ್ಲಿ ಚಾಮರಾಜನಗರ ತಾಲ್ಲೂಕು ಕಸಬಾ ಮತ್ತು ಸಂತೇಮರಹಳ್ಳಿ ಹೋಬಳಿಗೆ ಮಳೆ ಆಶ್ರಿತ ಕಡಲೆ, ಹರದನಹಳ್ಳಿ ಹೋಬಳಿಗೆ ಅನಿರ್ದಿಷ್ಟಾವಧಿ ಟೊಮ್ಯಾಟೋ, ಹರವೆ ಹೋಬಳಿಗೆ ನೀರಾವರಿ ಆಶ್ರಿತ ಈರುಳ್ಳಿ ಬೆಳೆ ವಿಮೆ ವ್ಯಾಪ್ತಿಗೆ ಒಳಪಡಲಿದೆ.

ಗುಂಡ್ಲುಪೇಟೆ ತಾಲ್ಲೂಕು ಕಸಬಾ ಹೋಬಳಿಗೆ ನೀರಾವರಿ ಆಶ್ರಿತ ಈರುಳ್ಳಿ, ಮಳೆ ಆಶ್ರಿತ ಕಡಲೆ, ಅನಿರ್ದಿಷ್ಟಾವಧಿ ಟೊಮ್ಯಾಟೋ, ಮಳೆ ಆಶ್ರಿತ ಮುಸುಕಿನಜೋಳ, ತೆರಕಣಾಂಬಿ ಹೋಬಳಿಗೆ ಮಳೆ ಆಶ್ರಿತ ಕಡಲೆ, ನೀರಾವರಿ ಆಶ್ರಿತ ಮುಸುಕಿನಜೋಳ, ಮಳೆ ಆಶ್ರಿತ ಮುಸುಕಿನಜೋಳ, ನೀರಾವರಿ ಆಶ್ರಿತ ಈರುಳ್ಳಿ, ಅನಿರ್ದಿಷ್ಟಾವಧಿ ಟೊಮ್ಯಾಟೋ, ಬೇಗೂರು ಹೋಬಳಿಗೆ ಅನಿರ್ದಿಷ್ಟಾವಧಿ ಟೊಮ್ಯಾಟೋ, ಹಂಗಳ ಹೋಬಳಿಗೆ ಮಳೆ ಆಶ್ರಿತ ಮುಸುಕಿನಜೋಳ, ನೀರಾವರಿ ಆಶ್ರಿತ ಈರುಳ್ಳಿ, ಅನಿರ್ದಿಷ್ಟಾವಧಿ ಟೊಮ್ಯಾಟೋ ಬೆಳೆ ವಿಮೆ ವ್ಯಾಪ್ತಿಗೆ ಒಳಪಡಲಿದೆ. ಕೊಳ್ಳೇಗಾಲ ತಾಲ್ಲೂಕು ಕಸಬಾ ಹೋಬಳಿಗೆ ನೀರಾವರಿ ಆಶ್ರಿತ ಭತ್ತ, ಮುಸುಕಿನಜೋಳ, ಪಾಳ್ಯ ಹೋಬಳಿಗೆ ನೀರಾವರಿ ಆಶ್ರಿತ ಮುಸುಕಿನಜೋಳ ಹಾಗೂ ಹನೂರು ತಾಲೂಕಿನ ಹನೂರು, ಲೊಕ್ಕನಹಳ್ಳಿ, ರಾಮಾಪುರ ಹೋಬಳಿಗೆ ನೀರಾವರಿ ಆಶ್ರಿತ ಮುಸುಕಿನಜೋಳ ಬೆಳೆ ವಿಮೆ ವ್ಯಾಪ್ತಿಗೆ ಒಳಪಡಲಿದೆ. ಬೇಸಿಗೆ ಹಂಗಾಮಿಗೆ ಹೋಬಳಿ ಮಟ್ಟಕ್ಕೆ ಗುಂಡ್ಲುಪೇಟೆ ತಾಲ್ಲೂಕು ಕಸಬಾ, ಬೇಗೂರು, ತೆರಕಣಾಂಬಿ ಹೋಬಳಿಗೆ ಅನಿರ್ದಿಷ್ಟಾವಧಿ ಟೊಮ್ಯಾಟೋ ಹಾಗೂ ಕೊಳ್ಳೇಗಾಲ ತಾಲ್ಲೂಕಿನ ಕಸಬಾ ಮತ್ತು ಪಾಳ್ಯ ಹೋಬಳಿಗೆ ನೀರಾವರಿ ಆಶ್ರಿತ ಭತ್ತ ಬೆಳೆ ವಿಮೆ ವ್ಯಾಪ್ತಿಗೆ ಒಳಪಡಲಿದೆ.

ಬೆಳೆ ವಿಮೆ ನೋಂದಣಿಗಾಗಿ ರೈತರು ಕಡ್ಡಾಯವಾಗಿ ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿ ಮಾಡಿಕೊಂಡಿದ್ದು, ಫ್ರೂಟ್ಸ್ ಐಡಿ ಹೊಂದಿರುವುದು ಕಡ್ಡಾಯವಾಗಿರುತ್ತದೆ. ಬೆಳೆ ಸಾಲ ಪಡೆಯದ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ, ಖಾತೆ, ಪಾಸ್ ಪುಸ್ತಕ, ಕಂದಾಯ ರಶೀದಿಯನ್ನು ನೀಡಬೇಕು.

ಹಿಂಗಾರು ಹಂಗಾಮಿಗೆ ಪ್ರತಿ ಎಕರೆಗೆ ವಿಮಾ ಕಂತಾಗಿ ನೀರಾವರಿ ಆಶ್ರಿತ ಮುಸುಕಿನಜೋಳ ಬೆಳೆಗೆ 463 ರೂ. ಮಳೆಯಾಶ್ರಿತ ಮುಸುಕಿನ ಜೋಳ ಬೆಳೆಗೆ 410 ರೂ., ನೀರಾವರಿ ಆಶ್ರಿತ ಈರುಳ್ಳಿಗೆ 1900, ಅನಿರ್ದಿಷ್ಟಾವಧಿ ಟೊಮ್ಯಾಟೋ 3436 ರೂ. ಈ ಎಲ್ಲಾ ಬೆಳೆಗಳಿಗೆ ವಿಮಾ ಕಂತು ಪಾವತಿಸಲು ನವೆಂಬರ್ 30 ಕಡೆಯ ದಿನವಾಗಿದೆ. ಮಳೆಯಾಶ್ರಿಯ ಹುರಳಿ ಬೆಳೆಗೆ ವಿಮಾ ಕಂತಾಗಿ 143 ರೂ., ಮಳೆ ಆಶ್ರಿತ ಕಡಲೆ ಬೆಳೆಗೆ ವಿಮಾ ಕಂತಾಗಿ 253 ರೂ. ಪಾವತಿಸಬೇಕಿದ್ದು, ವಿಮಾ ಕಂತು ಪಾವತಿಸಲು ಡಿಸೆಂಬರ್ 15 ಕಡೆಯ ದಿನವಾಗಿದೆ. ನೀರಾವರಿ ಆಶ್ರಿತ ಭತ್ತಕ್ಕೆ ವಿಮಾ ಕಂತಾಗಿ 659 ರೂ. ಪಾವತಿಸಬೇಕಿದ್ದು, ವಿಮಾ ಕಂತು ಪಾವತಿಸಲು ಡಿಸೆಂಬರ್ 31 ಕೊನೆಯ ದಿನವಾಗಿದೆ. ಬೇಸಿಗೆ ಹಂಗಾಮಿಗೆ ನೀರಾವರಿ ಆಶ್ರಿತ ಭತ್ತಕ್ಕೆ ವಿಮಾ ಕಂತಾಗಿ 659 ರೂ., ಅನಿರ್ದಿಷ್ಟಾವಧಿ ಟೊಮ್ಯಾಟೋ ಬೆಳೆಗೆ 3,436 ರೂ. ಆಗಿದ್ದು, ವಿಮಾ ಕಂತು ಪಾವತಿಸಲು 2027ರ ಫೆಬ್ರವರಿ 26 ಕೊನೆಯ ದಿನವಾಗಿದೆ. ವಿಮಾ ಮೊತ್ತವು ಬೆಳೆ ಸಾಲ ಪಡೆಯುವ ಮತ್ತು ಬೆಳೆ ಸಾಲ ಪಡೆಯದ ರೈತರಿಗೆ ಒಂದೇ ಆಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ತಮ್ಮ ವ್ಯಾಪ್ತಿಗೆ ಒಳಪಡುವ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ಬ್ಯಾಂಕುಗಳನ್ನು ಸಂಪರ್ಕಿಸುವಂತೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಎಥನಾಲ್ ಬಳಕೆಯಲ್ಲಿ ಕೇಂದ್ರದ ಲೂಟಿ

ತನಿಖೆಗೆ ಎಂ.ಲಕ್ಷ್ಮಣ್ ಒತ್ತಾಯ । ವಾಹನಗಳ ದುರಸ್ತಿಗೆ 62 ಸಾವಿರ ಕೋಟಿ ವೆಚ್ಚ

ಮೈಸೂರು: ಪೆಟ್ರೋಲ್ ಮತ್ತು ಡೀಸೆಲ್ನಲ್ಲಿ ಶೇ.30 ರಷ್ಟು ಎಥನಾಲ್ ಮಿಶ್ರಣ ಮಾಡುತ್ತಿರುವುದರಿಂದ ವಾಹನಗಳ ದುರಸ್ತಿ ಪ್ರಮಾಣ ಹೆಚ್ಚಾಗಿದ್ದು, ಈವರೆಗೆ ಕೋಟ್ಯಂತರ ರೂಪಾಯಿ ನಷ್ಟ ಉಂಟಾಗಿದೆ. ಈ ಕುರಿತು ರಾಜ್ಯ ಸರ್ಕಾರ ತನಿಖಾ ಸಮಿತಿಗಳ ಮೂಲಕ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಒತ್ತಾಯಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಆರು ತಿಂಗಳಿಂದ ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಮತ್ತು ರಾಮನಗರ ಜಿಲ್ಲೆಗಳ 65 ಪೆಟ್ರೋಲ್ ಬಂಕ್ಗಳಿಂದ ಪೆಟ್ರೋಲ್ ಮತ್ತು ಡೀಸೆಲ್ ಮಾದರಿಗಳನ್ನು ಸಂಗ್ರಹಿಸಲಾಗಿದೆ. 14 ಆಯಿಲ್ ಕಂಪನಿಗಳ ಉತ್ಪನ್ನಗಳಲ್ಲಿ ಶೇ.30ರಷ್ಟು ಎಥನಾಲ್ ಬಳಕೆಯಾಗುತ್ತಿರುವುದು ಪರಿಶೀಲನೆಯಲ್ಲಿ ಕಂಡುಬಂದಿದೆ ಎಂದು ತಿಳಿಸಿದರು.

ಎಥನಾಲ್ ಬಳಕೆಯಿಂದಾಗಿ ದೇಶದಾದ್ಯಂತ ಕಳೆದ 15 ತಿಂಗಳಲ್ಲಿ ವಾಹನಗಳ ದುರಸ್ತಿಗಾಗಿ ಒಟ್ಟು 62 ಸಾವಿರ ಕೋಟಿ ವೆಚ್ಚ ಮಾಡಲಾಗಿದೆ. ಈ ಸಂಬಂಧ ಆಹಾರ ಇಲಾಖೆ ಸಚಿವ ರಿಜ್ವಾನ್ ಹರ್ಷದ್ ಅವರು ಸಂಪೂರ್ಣ ವರದಿ ಸಿದ್ಧಪಡಿಸಿದ್ದಾರೆ. ಈ ಪ್ರಕರಣದಲ್ಲಿ ಕೇಂದ್ರ ಸರ್ಕಾರದ ಆಯಿಲ್ ಕಂಪನಿಗಳ ನೇರ ಸಂಪರ್ಕವಿದೆ ಎಂಬುದು ವರದಿಯಲ್ಲಿ ಉಲ್ಲೇಖವಾಗಿದೆ. ಹೀಗಾಗಿ ಪ್ರಕರಣದ ಕುರಿತು ಉನ್ನತ ಮಟ್ಟದ ತನಿಖೆ ನಡೆಸುವುದು ಅಗತ್ಯ ಎಂದು ಹೇಳಿದರು.

ವಾಹನ ಸವಾರರು ರಶೀದಿಗಳನ್ನು ಸಂಗ್ರಹಿಸಿಡಿ

ಪೆಟ್ರೋಲ್ ಬಳಕೆಯಿಂದ ವಾಹನಗಳಿಗೆ ತೊಂದರೆಯಾದ ಸವಾರರಿಗೆ ಒಂದು ತಿಂಗಳೊಳಗೆ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ ವಾಹನ ಸವಾರರು ಪೆಟ್ರೋಲ್ ಹಾಕಿಸಿದ ಬಂಕ್ನ ರಶೀದಿ ಹಾಗೂ ದಿನಾಂಕವನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು. ವಾಹನದಲ್ಲಿ ಸಮಸ್ಯೆ ಉಂಟಾಗಿ ದುರಸ್ತಿ ಮಾಡಿಸಿದ್ದರೆ, ಅದರ ರಶೀದಿಯನ್ನೂ ಸಂಗ್ರಹಿಸಿಡಬೇಕು ಎಂದು ಸಲಹೆ ನೀಡಿದರು. ಅಗತ್ಯವಿದ್ದರೆ ಸುಪ್ರೀಂಕೋರ್ಟ್ ಮೊರೆ ಹೋಗಿಯಾದರೂ ಜನರಿಗೆ ನ್ಯಾಯ ಕೊಡಿಸುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಲಿದೆ ಎಂದು ತಿಳಿಸಿದರು.

ಎಥನಾಲ್ ದರದ ಹೆಸರಿನಲ್ಲಿ ಹೆಚ್ಚುವರಿ ಹಣ ವಸೂಲಿ ಆರೋಪ

ಪೆಟ್ರೋಲ್ನಲ್ಲಿ 700 ಎಂಎಲ್ಗೆ ?78 ವೆಚ್ಚವಾಗುತ್ತದೆ. ಇನ್ನು 300 ಎಂಎಲ್ ಎಥನಾಲ್ಗೆ ?30 ವೆಚ್ಚವಾಗುತ್ತದೆ. ಹೀಗಾಗಿ ಒಟ್ಟು ?98ಕ್ಕೆ ಮಾರಾಟ ಮಾಡಬೇಕಿದೆ. ಆದರೆ, ಹೆಚ್ಚುವರಿಯಾಗಿ ?14 ವಸೂಲಿ ಮಾಡುವ ಮೂಲಕ ಕೇಂದ್ರ ಸರ್ಕಾರ ಲೂಟಿ ಮಾಡುತ್ತಿದೆ ಎಂದು ಎಂ.ಲಕ್ಷ್ಮಣ್ ಆರೋಪಿಸಿದರು.

ಈ ಹೆಚ್ಚುವರಿ ಹಣವನ್ನು ಗ್ರಾಹಕರಿಗೆ ಅಥವಾ ರೈತರಿಗೆ ನೀಡಬೇಕಿತ್ತು. ಆದರೆ, ಕೇಂದ್ರ ಸರ್ಕಾರ ಅದನ್ನು ತನ್ನ ಖಜಾನೆಗೆ ಸೇರಿಸಿಕೊಳ್ಳುತ್ತಿದೆ ಎಂದು ದೂರಿದರು. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ರಾಜ್ಯದಲ್ಲಿ ವಿಧಿಸಲಾಗುತ್ತಿರುವ ಶೇ.19.9 ರಷ್ಟು ವ್ಯಾಟ್ ಅನ್ನು ಕಡಿಮೆ ಮಾಡುವಂತೆ ಹೇಳಬೇಕು. ರಾಜ್ಯದಲ್ಲಿ ಶೇ.25ರಷ್ಟು ವ್ಯಾಟ್ ಇದ್ದರೆ, ಬಿಜೆಪಿ ಆಡಳಿತವಿರುವ ಮಹಾರಾಷ್ಟ್ರದಲ್ಲಿ ಶೇ.47. 64, ಆಂಧ್ರಪ್ರದೇಶದಲ್ಲಿ ಶೇ.38.82, ಮಧ್ಯಪ್ರದೇಶದಲ್ಲಿ ಶೇ.38.79, ರಾಜಸ್ಥಾನದಲ್ಲಿ ಶೇ.42.03, ಪಂಜಾಬ್ನಲ್ಲಿ ಶೇ.36, ತೆಲಂಗಾಣದಲ್ಲಿ ಶೇ.35.02 ಹಾಗೂ ಗುಜರಾತ್ನಲ್ಲಿ ಶೇ.38.02ರಷ್ಟು ವ್ಯಾಟ್ ನಿಗದಿಪಡಿಸಲಾಗಿದೆ ಎಂದು ವಿವರಿಸಿದರು.

ಇನ್ನು ರಾಜ್ಯವು ಕೇಂದ್ರಕ್ಕೆ ಕಟ್ಟುವ ಅಬಕಾರಿ ಸುಂಕದ ಪ್ರಮಾಣ ಶೇ.19.90ರಷ್ಟಿದೆ. ಮಹಾರಾಷ್ಟ್ರದಲ್ಲಿ ಶೇ.15, ಆಂಧ್ರಪ್ರದೇಶದಲ್ಲಿ ಶೇ.14, ಮಧ್ಯಪ್ರದೇಶದಲ್ಲಿ ಶೇ.12, ಪಂಜಾಬ್ನಲ್ಲಿ ಶೇ.18, ತೆಲಂಗಾಣದಲ್ಲಿ ಶೇ.19 ಹಾಗೂ ಗುಜರಾತ್ನಲ್ಲಿ ಶೇ.11.90ರಷ್ಟಿದೆ. ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಹೆಚ್ಚಿನ ಪ್ರಮಾಣದ ಅಬಕಾರಿ ಸುಂಕ ವಿಧಿಸಲಾಗುತ್ತಿದ್ದು, ಅದನ್ನು ಕಡಿಮೆ ಮಾಡುವ ಕೆಲಸವಾಗಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಎಂ. ರಾಮು, ನಗರ ಕಾಂಗ್ರೆಸ್ ವಕ್ತಾರ ಆರ್. ಮೂರ್ತಿ, ಮಾಧ್ಯಮ ವಕ್ತಾರ ಮಹೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಹಾಲಿನ ದರ ಹೆಚ್ಚಳವನ್ನು ರೈತರು ಸ್ವಾಗತಿಸಿದ್ದಾರೆ

ರಾಜ್ಯದಲ್ಲಿ ಹಾಲಿನ ದರ ಹೆಚ್ಚಳವಾಗಿರುವುದನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಟೀಕಿಸುತ್ತಿದ್ದಾರೆ. ಆದರೆ, ಇತರ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಹಾಲಿನ ದರ ಕಡಿಮೆಯಿದೆ. ಈ ವಿಚಾರವನ್ನು ಟೀಕಿಸುವವರು ಗಮನಿಸಬೇಕು ಎಂದು ಹೇಳಿದರು. 2014ರಿಂದ ಈವರೆಗೆ 800 ಇದ್ದ ಹಿಂಡಿ ಬೆಲೆ 3,500ಕ್ಕೆ ಏರಿಕೆಯಾಗಿದೆ. ಮೊದಲು ಈ ಬೆಲೆ ಏರಿಕೆಯನ್ನು ನಿಯಂತ್ರಿಸುವ ಕೆಲಸ ಮಾಡಲಿ ಎಂದು ಕೇಂದ್ರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ರಾಜ್ಯದಲ್ಲಿ ರೈತರು ಹಾಲಿನ ದರ ಹೆಚ್ಚಳವನ್ನು ಸ್ವಾಗತಿಸಿದ್ದಾರೆ. ಬೇಕಿದ್ದರೆ ಮಾಧ್ಯಮದವರು ಗ್ರಾಮೀಣ ಪ್ರದೇಶಗಳಿಗೆ ತೆರಳಿ ರೈತರನ್ನು ಭೇಟಿ ಮಾಡಲಿ. ಹೈನುಗಾರಿಕೆಯಲ್ಲಿ ಅವರು ಎದುರಿಸುತ್ತಿರುವ ದುಪ್ಪಟ್ಟು ಕಷ್ಟ ಹಾಗೂ ಹಾಲಿನ ದರ ಹೆಚ್ಚಳದ ಕುರಿತು ರೈತರೇ ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ ಎಂದು ಹೇಳಿದರು.

ಎಚ್ಡಿಕೆ ಒತ್ತಾಯಿಸಲಿ

ಸಿದ್ದರಾಮಯ್ಯನವರ ಸ್ಟಿಂಗ್ ಪ್ರಕರಣವನ್ನು ಹೊರತೆಗೆದಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಸದರಿ ಪ್ರಕರಣದ ಸಮಗ್ರ ತನಿಖೆ ನಡೆಸುವಂತೆ ಒತ್ತಾಯಿಸ ಬೇಕು. ಅದರ ಜೊತೆಗೆ ತನಿಖೆಗೆ ಸಂಪೂರ್ಣ ಸಹಕಾರ ನೀಡುವ ಕೆಲಸವನ್ನೂ ಮಾಡಬೇಕು.

▸▸ **ಎಂ.ಲಕ್ಷ್ಮಣ್** ವಕ್ತಾರರು

ಕಾಂಗ್ರೆಸ್‌ನಿಂದ ಗೂಂಡಾಗಿರಿ ಸಂಸ್ಕೃತಿ

ಮೈಸೂರು: ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ನಿವಾಸಕ್ಕೆ ಚಾಕು, ಚೂರಿ ಪಾರ್ಸೆಲ್ ಕಳುಹಿಸಿ ಕಾಂಗ್ರೆಸ್ ಗೂಂಡಾಗಿರಿ ಸಂಸ್ಕೃತಿ ಪ್ರದರ್ಶಿಸಿದೆ ಎಂದು ಆರೋಪಿಸಿ ಮೈಸೂರು ನಗರ ಬಿಜೆಪಿ ದಲಿತ ಮೋರ್ಚಾ ಪದಾಧಿಕಾರಿಗಳು ಭಾನುವಾರ ಪ್ರತಿಭಟನೆ ನಡೆಸಿದರು.

ನಗರದ ಪುರಭವನದ ಮುಂಭಾಗದ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆ ಎದುರು ಜಮಾಯಿಸಿದ್ದ ಬಿಜೆಪಿ ಮುಖಂಡರು, ಕಾರ್ಯಕರ್ತರು, ರಾಜ್ಯ ಸರ್ಕಾರ ಹಾಗೂ ಕಾಂಗ್ರೆಸ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಅಲ್ಲದೇ ಪ್ರತಿಪಕ್ಷದ ನಾಯಕರ ಮನೆಗೆ ಈ ರೀತಿ ಪಾರ್ಸೆಲ್ ಕಳುಹಿಸಿದರೆ ಜನಸಾಮಾನ್ಯರ ಗತಿಯೇನು? ಇಂತಹ ಕೃತ್ಯ ಮಾಡಿರುವ ವ್ಯಕ್ತಿಗಳನ್ನು ಪತ್ತೆ ಹಚ್ಚಿ ಬಂಧಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಸಂಸದ ಯದುವೀರ್ ಒಡೆಯರ್ ಮಾತನಾಡಿ, ರಾಜ್ಯದಲ್ಲಿ ಅಸ್ತಿತ್ವದಲ್ಲಿ ಇರುವ ಸರ್ಕಾರ ಪ್ರಜಾಪ್ರಭುತ್ವ ಮತ್ತು ಸಂವಿಧಾನ ವ್ಯವಸ್ಥೆಯಲ್ಲಿ ಆಡಳಿತ ನಡೆಸಬೇಕು. ಅದೇ ರೀತಿ ವರ್ತಿಸಬೇಕು. ತಮ್ಮನ್ನು ಟೀಕೆ ಮಾಡಿದರೆ ಸಹಿಸಲ್ಲವೆಂದು ಗೂಂಡಾ ರೀತಿಯಲ್ಲಿ ನಡೆದುಕೊಳ್ಳುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ವಸತಿಗೃಹಕ್ಕೆ ಕಾಂಗ್ರೆಸ್ ಪಕ್ಷದ ಕೆಲವು ಗೂಂಡಾಗಳು ಚಾಕು, ಚೂರಿಗಳಂತಹ ಮಾರಕಾಸ್ತ್ರಗಳನ್ನು ಆನ್‌ಲೈನ್ ಮೂಲಕ ಡೆಲಿವರಿ ಕೊಟ್ಟಿದ್ದಾರೆ. ಕಾಂಗ್ರೆಸ್‌ನಲ್ಲಿ ಗೂಂಡಾ ಸಂಸ್ಕೃತಿ ಹೊಂದಿ ರುವ ವ್ಯಕ್ತಿಗಳನ್ನು ಬಂಧಿಸಬೇಕು. ಛಲವಾದಿ ನಾರಾಯಣಸ್ವಾಮಿ ಹೇಳಿಕೆ ಯನ್ನು ಬೇರೆ ರೀತಿಯಲ್ಲಿ ಅರ್ಥೈಸುವ ಕೆಲಸ ಮಾಡು ತ್ತಿದ್ದಾರೆ. ತಮಿಳುನಾಡಿನ ಇನ್‌ಫ್ಲೂಯೆನ್ಸರ್ ವೀರಮಣಿ ವಿಚಾರದಲ್ಲಿ ನಡೆದ ಕಾನ್ಸೆಪ್ಟ್ ಕಾಂಗ್ರೆಸ್‌ನವರು ಕಾಪಿ ಮಾಡುತ್ತಿದ್ದಾರೆ. ಈ ರೀತಿಯಾಗಿ ಚಾಕು, ಚೂರಿಯನ್ನು ಬುಕ್ ಮಾಡಿ ನಿಮ್ಮ ವಿದ್ಯಾರ್ಥಿ ಕಾಂಗ್ರೆಸ್ ಹುಡುಗರು ಮನೆ ತೋರಿಸಲು ಹೋಗುತ್ತಾರೆ ಎಂದು ಟೀಕಿಸಿದರು.

ಸಂವಿಧಾನಿಕ ಹುದ್ದೆಯಲ್ಲಿರುವ ನಾಯಕರ ಮನೆಗೆ ಚಾಕು ಚೂರಿ ಕಳುಹಿಸಿ ಬೆದರಿಕೆ ಹಾಕುವುದು ಸರಿಯಲ್ಲ. ಯುವಪೀಳಿಗೆ ರಾಜಕೀಯದಲ್ಲಿ ಸುಧಾರಣೆ ಬಯಸುತ್ತಿದ್ದು, ಅದಕ್ಕೆ ರಾಜಕಾರಣಿಗಳು ಬದ್ಧವಾಗಿರಬೇಕು. ರಾಜಕೀಯವನ್ನು ರಾಜಕೀಯವಾಗಿ ಎದುರಿಸಬೇಕಿದ್ದು, ಈ ರೀತಿಯಾದ ಕೃತ್ಯಗಳನ್ನಲ್ಲ.

▸▸ **ಯದುವೀರ್ ಒಡೆಯರ್** ಸಂಸದ

ಅಲ್ಲದೇ ಸಿಎಂ ಡಿ.ಕೆ.ಶಿವಕುಮಾರ್ ಮತ್ತು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರು ಯಾರ ಶಿಷ್ಯಂದಿರು ಎಂಬುದು ರಾಜ್ಯದ ಜನರಿಗೆ ಗೊತ್ತಿದೆ. ಒಬ್ಬರು ಸಿಎಂ ಆಗಿದ್ದೀರ ಮತ್ತೊಬ್ಬರು ಕಾಂಗ್ರೆಸ್ ಅಧ್ಯಕ್ಷರಾಗಿದ್ದೀರ. ಆದರೂ ನಿಮ್ಮ ಹಳೇ ಬುದ್ಧಿ ಬಿಡದೆ ನಾರಾಯಣಸ್ವಾಮಿಗೆ ಹೆದರಿಸಲು ಕಳುಹಿಸುತ್ತಿರಾ. ನಿಮ್ಮನ್ನೆ ನಂಬಿ ದಲಿತರು ಕಾಂಗ್ರೆಸ್ ಬೆಂಬಲಿಸುತ್ತಾ ಬಂದಿದ್ದಾರೆ. ನಿಮ್ಮ ಯೋಗ್ಯತೆಗೆ ಕಾಂಗ್ರೆಸ್‌ನಲ್ಲಿರುವ ದಲಿತರನ್ನು ಸಿಎಂ ಮಾಡಲು ಆಗಲಿಲ್ಲ. ಈಗ ದಲಿತ ನಾಯಕರನ್ನು ಬೆದರಿಸಲು ಓಡಾಡುತ್ತಿದ್ದೀರಾ. ಡಿಕೆ ಮತ್ತು ಬಿಕೆ ಇಬ್ಬರೂ ಈ ಆಟಾಟೋಪವನ್ನು ಕೂಡಲೇ ನಿಲ್ಲಿಸಬೇಕು. ಇನ್ನು ಒಂದೂವರೆ ವರ್ಷ ಅಷ್ಟೇ ಇರೋದು. 2027 ಕಳೆದ ಕೂಡಲೇ ನೀವು ನಿಮ್ಮ ಬಂಗಲೆ ಖಾಲಿ ಮಾಡೊದಕ್ಕೆ ತಯಾರಿ ಮಾಡಿಕೊಳ್ಳಿ ಎಂದರು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ರಾಜ್ಯ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಮಾಜಿ ಮೇಯರ್ ಎಸ್.ಸಂದೇಶ್‌ಸ್ವಾಮಿ, ನಿಗಮ ಮಂಡಳಿಗಳ ಮಾಜಿ ಅಧ್ಯಕ್ಷರಾದ ಎಸ್.ಮಹದೇವಯ್ಯ, ಹೇಮಂತ ಕುಮಾರ್ ಗೌಡ, ಪ್ರಧಾನ ಕಾರ್ಯದರ್ಶಿಗಳಾದ ವಿ.ಸೋಮಸುಂದರ್, ರುದ್ರಮೂರ್ತಿ, ಪರೀಕ್ಷಿತ್‌ರಾಜೇ ಅರಸ್, ನಗರ ಬಿಜೆಪಿ ದಲಿತ ಮೋರ್ಚಾ ಅಧ್ಯಕ್ಷ ಕಾರ್ತಿಕ್ ಮರಿಯಪ್ಪ ಹಾಜರಿದ್ದರು.



2028ಕ್ಕೆ ಕಾಂಗ್ರೆಸ್ ಧೂಳಿಪಟ – ಮಾಜಿ ಸಚಿವ ರೇಣುಕಾಚಾರ್ಯ

ಪ್ರಭಾವಿ ಸಚಿವರಿಗೆ ಹೀನಾಯ ಸೋಲು

ಚಾಮರಾಜನಗರ: ಅಗತ್ಯ ವಸ್ತುಗಳ ಬೆಲೆಯನ್ನು ಏರಿಕೆ ಮಾಡಿ ಜನರಿಗೆ ದೀಪಾವಳಿ ಉಡು ಗೊರೆಯನ್ನು ಸರ್ಕಾರ ನೀಡಿದೆ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ವ್ಯಂಗ್ಯವಾಡಿ ದರು. ಚಾಮರಾಜನಗರದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿ ಮಾಸಾಶನವೇ ಬಂದ್ ಆಗಿದೆ. ಕಳೆದ ಒಂದು ವರ್ಷದಿಂದ ವೃದ್ಧಾಪ್ಯ ವೇತನ, ಅಂಗವಿಕಲರ ಮಾಸಾಶನ ಎಲ್ಲವನ್ನೂ ನಿಲ್ಲಿಸಿದ್ದಾರೆ. ಹಾಲಿನ ದರ, ಬಸ್ ದರ ಏರಿಕೆ ಮೂಲಕ ರಾಜ್ಯದ ಜನರಿಗೆ ದೀಪಾವಳಿ ಗಿಫ್ಟ್ ಕೊಟ್ಟಿದ್ದಾರೆ ಎಂದು ಕಿಡಿಕಾರಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಪಾಪರ್ ಆಗಿದೆ, ಖಜಾನೆ ಖಾಲಿಯಾಗಿದೆ. ರಾಜ್ಯದ ಜನರೇ ಚುನಾವಣೆ ಕಾಯುತ್ತಿದ್ದು ಅವರೇ ಪಾಠ ಕಲಿಸುತ್ತಿದ್ದಾರೆ. 2028 ಕ್ಕೆ ಕಾಂಗ್ರೆಸ್ ಧೂಳಿಪಟ ಆಗಲಿದ್ದು 40 ಪ್ರಭಾವಿ ಸಚಿವರು, ಶಾಸಕರು ಹೀನಾಯವಾಗಿ ಸೋಲುತ್ತಾರೆ ಎಂದು ಭವಿಷ್ಯ ನುಡಿದರು. ಚುನಾವಣಾ ಆಯೋಗವು ಎಸ್‌ಐಆರ್ ಮೂಲಕ ತಮ್ಮ ಕೆಲಸವನ್ನು ಪಾರದರ್ಶಕವಾಗಿ ಮಾಡುತ್ತಿದೆ. ಆದರೆ, ಕಾಂಗ್ರೆಸ್ ಜನರನ್ನು ದಾರಿತಪ್ಪಿಸುವ ಕೆಲಸ ಮಾಡುತ್ತಿದೆ ಎಂದು ಹೇಳಿದರು.



ಅಕ್ರಮ ಬಾಂಗ್ಲಾ ವಲಸಿಗರು, ನಕಲಿ ಮತದಾರರನ್ನು ಮತಪಟ್ಟಿಯಿಂದ ತೆಗೆಯೋದು ತಪ್ಪಾ?, ಕಾಂಗ್ರೆಸ್ ಜನರಲ್ಲಿ ಗೊಂದಲ ಮೂಡಿಸುತ್ತಿದೆ. ಮತದಾರರು ಈ ಬಾರಿ ಕಾಂಗ್ರೆಸ್ ಅನ್ನು 50 ಸೀಟ್‌ಗೆ ಇಳಿಸುತ್ತಾರೆ ಎಂದರು. ಸಿದ್ದರಾಮಯ್ಯ ವಿರುದ್ಧ ಸ್ಟಿಂಗ್ ಷಡ್ಯಂತ್ರ ವಿಚಾರ ಕುರಿತು ಪ್ರತಿಕ್ರಿಯಿಸಿ, ಸ್ಟಿಂಗ್ ಆಪರೇಷನ್ ರಾಜ್ಯಕ್ಕೆ ಒಂದು ಕಳಂಕ. ಸರಿಯಾಗಿ ತನಿಖೆ ಆದರೆ ಈ ಸ್ಟಿಂಗ್ ಹಿಂದೆ ಯಾರೆಲ್ಲಾ ಇದ್ದಾರೆ ಎಲ್ಲರೂ ಹೊರಡಗೆ ಬರ್ತಾರೆ. ಆದರೆ, ಸರ್ಕಾರ ಈ ಪ್ರಕರಣವನ್ನು ಮುಚ್ಚಿಹಾಕುತ್ತಿದೆ ಎಂದು ರೇಣುಕಾಚಾರ್ಯ ಅಭಿಪ್ರಾಯಪಟ್ಟರು.

ಹೋಲಿ ಕ್ರೆಸೆಂಟ್‌ನಲ್ಲಿ ಕನ್ನಡ ನಿತ್ಯೋತ್ಸವ

ರಾಮನಗರ: 71ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಇಲ್ಲಿನ ಹೋಲಿ ಕ್ರೆಸೆಂಟ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಕನ್ನಡ ನಿತ್ಯೋತ್ಸವದಲ್ಲಿ ಶಾಲೆಯ ವಿದ್ಯಾರ್ಥಿಗಳು ಕರ್ನಾಟಕದ ಇತಿಹಾಸ, ಪರಂಪರೆ, ಸಂಸ್ಕೃತಿ ಮತ್ತು ವೈಶಿಷ್ಟ್ಯಗಳನ್ನು ಕಲಾಕೃತಿಗಳ ಮೂಲಕ ಪ್ರದರ್ಶನ ಮಾಡಿ ಗಮನ ಸೆಳೆದರು. ನಾಡಿನ ಬಗ್ಗೆ ತಮಗಿರುವ ಅಭಿಮಾನ ಮತ್ತು ತಮ್ಮಲ್ಲಿರುವ ಕ್ರಿಯಾತ್ಮಕ ಕೌಶಲ್ಯಗಳು ಸಹ ವ್ಯಕ್ತವಾದವು.



ಇಡೀ ಶಾಲೆಯ ಆವರಣ ಕನ್ನಡ ಮಯವಾಗಿತ್ತು. ಆಂಗ್ಲ ಮಾಧ್ಯಮದ ಶಾಲೆಯೊಂದು ಈ ಪರಿಯ ಕನ್ನಡದ ಪ್ರೇಮವನ್ನು ಸಾರಿದ್ದು ನಾಗರಿಕರ ಪ್ರಶಂಸಗೂ ಪಾತ್ರವಾಯಿತು. ಮೈಸೂರು ಅರಮನೆ, ಅಂಬಾರಿ, ಬೆಂಗಳೂರು ಅರಮನೆ, ಗೋಲ್‌ಗುಂಬಜ್, ಹಂಪಿಯ ಕಲ್ಲಿನ ರಥ, ಕಮಲ ಮಹಲ್ ಹೀಗೆ ರಾಜ್ಯದ ಐತಿಹಾಸಿಕ ಕುರುಹುಗಳು ಮಕ್ಕಳು ರಚಿಸಿದ ಕಲಾಕೃತಿಗಳಲ್ಲಿ ಅರಳಿದ್ದವು. ಕರ್ನಾಟಕದಲ್ಲಿನ ಐತಿಹಾಸಿಕ ಸ್ಥಳಗಳು, ಆಯಾ ಜಿಲ್ಲೆಯ ವೈಶಿಷ್ಟ್ಯಗಳ ಬಗ್ಗೆ ವಿದ್ಯಾರ್ಥಿಗಳು ನೋಡುಗರಿಗೆ ಮಾಹಿತಿ ಕೊಟ್ಟರು. ರಾಮನಗರ ತಾಲ್ಲೂಕಿನ ಕೂಟಗಲ್ ಹೋಬಳಿಯಲ್ಲಿರುವ ಬೆಟ್ಟದ ಮೇಲೆ ನಿಸರ್ಗಕ್ಕೆ ಸವಾಲಾಗಿ ನಿಂತಿರುವ ಕಲ್ಲುಗಳ ಕಲಾಕೃತಿ ಎಲ್ಲರ ಗಮನ ಸೆಳೆಯಿತು. ಶಾಲೆಯ ಆವರಣದಲ್ಲಿ ಕೃತಕವಾಗಿ ನಿರ್ಮಾಣ ವಾಗಿದ್ದ ಪಕ್ಷಿಧಾಮ ಎಲ್ಲರ ಗಮನ ಸೆಳೆಯಿತು. ನಿತ್ಯೋತ್ಸವದ ಅಂಗವಾಗಿ ನಗರದ ಪ್ರಮುಖ ರಸ್ತೆಗಳಲಿ ನಡೆದ ಮೆರವಣಿಗೆ ಕೂಡ ನಾಗರೀಕರ ಗಮನ ಸೆಳೆಯಿತು. ಶಾಲೆಯ ವಿದ್ಯಾರ್ಥಿಗಳು ಬಸವೇಶ್ವರ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಟಿಪ್ಪು ಸುಲ್ತಾನ್, ಸಂಗೊಳ್ಳಿರಾಯಣ್ಣ, ಕಿತ್ತೂರ ರಾಣಿ ಚೆನ್ನಮ್ಮ, ಕನ್ನಡ ತಾಯಿ ಭುವನೇಶ್ವರಿ ಅಮ್ಮ ನವರ ವೇಷ ತೊಟ್ಟಿದ್ದರು. ವಿದ್ಯಾರ್ಥಿಗಳು ನೂರು ಅಡಿ ಉದ್ದದ ಕನ್ನಡ ಬಾವುಟವನ್ನು ಐಜೂರು ವೃತ್ತದಲ್ಲಿ ಪ್ರದರ್ಶಿಸಿದರು. ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷೆ ಡಾ.ಶಾಜಿಯ, ಸಂಸ್ಥಾಪಕ ಕಾರ್ಯದರ್ಶಿ ಅಲ್ತಾಫ್ ಅಹಮದ್, ಡೀನ್ ಡಾ. ಫಕ್ರುದ್ದೀನ್, ಪಿಯೂ ವಿಭಾಗದ ಪ್ರಾಂಶುಪಾಲರಾದ ಸ್ಟಾನ್ಲಿಪಾಲ್, ಹಿರಿಯ ಪ್ರಾಥಮಿಕ ಶಾಲೆಯ ಪ್ರಾಂಶುಪಾಲರಾದ ಯೇಸುದಾಸ್, ಉಪಪ್ರಾಂಶುಪಾಲರಾದ ಲತಾ ಆನಂದ್ ಮತ್ತು ಶಿಕ್ಷಕ ವೃಂದ ಹಾಜರಿದ್ದರು.

ಮಹರ್ಷಿ ವಾಲ್ಮೀಕಿ ಒಂದು ಸಮುದಾಯಕ್ಕೆ ಸೀಮಿತರಲ್ಲ;: ಸಮಾಜದ ಆಸ್ತಿ: ಸಿ. ಚಿಕ್ಕರಂಗನಾಯಕ

ಮಕ್ಕಳಿಗೆ ಶಿಕ್ಷಣ ನೀಡಿ, ಉತ್ತಮ ಪ್ರಜೆಗಳನ್ನಾಗಿ ರೂಪಿಸುವುದು ನಮ್ಮೆಲ್ಲರ ಜವಾಬ್ದಾರಿ



ನಂಜನಗೂಡು: ತಾಲ್ಲೂಕಿನ ಮರಳೂರು-ಗುದ್ದನಪುರ ಗ್ರಾಮದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ನಾಯಕರ ಸಂಘದ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಭಕ್ತಿಭಾವ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.

ಶ್ರೀ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷ ಸಿ. ಚಿಕ್ಕರಂಗನಾಯಕ ಅವರು ಪುಷ್ಪಾರ್ಚನೆ ನೆರವೇರಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಮಹರ್ಷಿ ವಾಲ್ಮೀಕಿ, ಗೌತಮ ಬುದ್ಧ, ಬಸವಣ್ಣ, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಕನಕದಾಸರು ಯಾವುದೇ ಒಂದು ಜಾತಿ ಅಥವಾ ಸಮುದಾಯಕ್ಕೆ ಸೀಮಿತವಾದವರಲ್ಲ. ಅವರೆಲ್ಲರೂ ಇಡೀ ಸಮಾಜದ ಆಸ್ತಿಯಾಗಿದ್ದಾರೆ. ಪ್ರತಿಯೊಂದು ಸಮುದಾಯದಲ್ಲಿಯೂ ಮಹಾನ್ ಸಾಧಕರು ಹಾಗೂ ಐತಿಹಾಸಿಕ ವ್ಯಕ್ತಿಗಳಿದ್ದು, ಅವರ ಆದರ್ಶ ಮತ್ತು ತತ್ವಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಮಹರ್ಷಿ ವಾಲ್ಮೀಕಿ ಅವರು ಕಳ್ಳರಾಗಿರಲಿಲ್ಲ, ಬದಲಾಗಿ ಅಪಾರ ಜ್ಞಾನ ಮತ್ತು ಪಾಂಡಿತ್ಯ ಹೊಂದಿದ್ದ ಮಹಾನ್ ಋಷಿಯಾಗಿದ್ದರು. ಅರಣ್ಯ ಪರಿಸರದಲ್ಲಿ ಬೆಳೆದು, ತಮ್ಮ ಜ್ಞಾನ ಮತ್ತು ಅನುಭವದ ಮೂಲಕ ಜಗತ್ತಿಗೆ ಮಹಾನ್ ಕಾವ್ಯವಾದ ರಾಮಾಯಣವನ್ನು ಕೊಡುಗೆಯಾಗಿ ನೀಡಿದ್ದಾರೆ. ಮೂಲ ರಾಮಾಯಣದ ಆಶಯಗಳನ್ನು ಆಧರಿಸಿ ವಿವಿಧ ಭಾಷೆಗಳಲ್ಲಿ ಹಾಗೂ ನೂರಾರು ರೂಪಾಂತರಗಳಲ್ಲಿ ರಾಮಾಯಣ ರಚನೆಯಾಗಿದೆ. ಜೀವನದ ಮೌಲ್ಯಗಳು, ಕುಟುಂಬದ ಬಾಂಧವ್ಯ, ಸಹೋದರತ್ವ, ಭಕ್ತಿ ಹಾಗೂ ಮಾನವೀಯತೆಯ ಸಂದೇಶವನ್ನು ರಾಮಾಯಣ ಸಾರುತ್ತದೆ ಎಂದು ಹೇಳಿದರು.

ರಾಮಾಯಣದಲ್ಲಿ ಸಹೋದರನ ಕರ್ತವ್ಯ ಹೇಗಿರಬೇಕು ಎಂಬುದನ್ನು ತೋರಿಸಿಕೊಟ್ಟಿದ್ದು, ಹನುಮಂತನ ಭಕ್ತಿಯ ಮೂಲಕ ನಿಷ್ಠೆ ಮತ್ತು ಸಮರ್ಪಣಾ ಮನೋಭಾವದ ಮಹತ್ವವನ್ನು ಸಾರಲಾಗಿದೆ. ಸಮಾಜದಲ್ಲಿ ಯಾರೇ ಆಗಲಿ ತಮ್ಮ ಪರಿಶ್ರಮ, ಜ್ಞಾನ ಮತ್ತು ನಿಷ್ಠೆಯಿಂದ ಶ್ರೇಷ್ಠತೆಯನ್ನು ಸಾಧಿಸಬಹುದು ಎಂಬ ಸಂದೇಶವನ್ನು ವಾಲ್ಮೀಕಿ ರಾಮಾಯಣ ನೀಡುತ್ತದೆ ಎಂದರು.

ಡಾ. ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂವಿಧಾನ ನಮ್ಮೆಲ್ಲರಿಗೂ ಸಮಾನ ಹಕ್ಕು ಮತ್ತು ಅವಕಾಶಗಳನ್ನು ಕಲ್ಪಿಸಿದೆ. ಶಿಕ್ಷಣ, ಸಂಘಟನೆ ಹಾಗೂ ಹೋರಾಟದ ಮೂಲಕ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕು. ಸಮಾಜದ ಅಭಿವೃದ್ಧಿಗೆ ಶಿಕ್ಷಣವೇ ಪ್ರಮುಖ ಅಸ್ತ್ರವಾಗಿದ್ದು, ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಿ, ಅವರನ್ನು ಜವಾಬ್ದಾರಿಯುತ ಹಾಗೂ ಉತ್ತಮ ಪ್ರಜೆಗಳನ್ನಾಗಿ ರೂಪಿಸಬೇಕು. ಜಾತಿ-ಧರ್ಮದ ಭೇದಭಾವ ಮರೆತು ಎಲ್ಲ ಸಮುದಾಯದವರನ್ನು ಗೌರವಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ನಾಯಕರ ಸಂಘದ ಮಾಜಿ ಅಧ್ಯಕ್ಷ ಬಂಗಾರಸ್ವಾಮಿ, ಮಾಜಿ ಖಜಾಂಚಿ ರಂಗಸ್ವಾಮಿ, ಕಾರ್ಯದರ್ಶಿ ಮಂಜು, ಬಿಜೆಪಿ ಯುವ ಘಟಕದ ಅಧ್ಯಕ್ಷ ವಿನಯ್ ಕುಮಾರ್, ಮುಖಂಡರಾದ ಮಹದೇವನಾಯಕ, ಸಾಮಾಜಿಕ ಡ್ರಾಮಾ ಮಾಸ್ಟರ್ ಶಿವಕುಮಾರ್, ಆಟೋ ಮಂಜು, ಶ್ರೀಕಂಠನಾಯಕ, ಉಪ್ಪಿ ಮಹದೇವನಾಯಕ, ಕೃಷ್ಣ, ಸವಿತಾ, ಬಸವೇಗೌಡ, ಚಲುವೇಗೌಡ, ಸಿದ್ದಪ್ಪಾಜಿ ಆಚಾರ್ಯ, ಶಿವಪ್ಪಗೌಡ, ಕೃಷ್ಣನಾಯಕ, ಶಂಕರ್ ಸೇರಿದಂತೆ ಗ್ರಾಮದ ಮುಖಂಡರು, ಸಂಘದ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಶಿಕ್ಷಕರ ಆಶಯದಂತೆ ಗುರುಭವನ ನವೀಕರಣ

ಕೆ.ಶೇಷಾದ್ರಿ ನಗರಸಭೆ ಅನುದಾನದಲ್ಲಿ ಗುರುಭವನ ನವೀಕರಣ



ರಾಮನಗರ: ಹಲವು ವರ್ಷಗಳಿಂದ ಶಿಥಿಲಾವಸ್ಥೆ ತಲುಪಿದ್ದ ರಾಮನಗರದ ಗುರುಭವನವನ್ನು ರೂ.27 ಲಕ್ಷ ರೂ. ನಗರಸಭೆ ಅನುದಾನದಲ್ಲಿ ನವೀಕರಣಗೊಳಿಸಲಾಗಿದ್ದು, ಶಿಕ್ಷಕರ ಬಹುದಿನಗಳ ಆಶಯ ಈಡೇರಿದೆ ಎಂದು ನಗರಸಭಾಧ್ಯಕ್ಷ ಕೆ. ಶೇಷಾದ್ರಿ ಶಶಿ ತಿಳಿಸಿದರು.

ನವೀಕರಣಗೊಂಡ ಗುರುಭವನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಗುರುಭವನ ಅಭಿವೃದ್ಧಿಗೆ ಸಂಬಂಧಿಸಿದಂತೆ ನಗರಸಭೆಗೆ ಆಗಮಿಸಿ ಶಿಕ್ಷಕರ ಸಂಘಟನೆಗಳ ಪ್ರಮುಖರು ಮನವಿ ಸಲ್ಲಿಸಿದ್ದರು. ಆರಂಭದಲ್ಲಿ ಇದು ನಗರಸಭೆ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಸಿದ್ದೆ. ಆದರೆ, ಶಿಕ್ಷಕರ ಬೇಡಿಕೆಗಳಿಗೆ ಮನ್ನಣೆ ನೀಡಬೇಕು ಎಂಬ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಿದಾಗ, ಕೆಲವು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅವಕಾಶವಿತ್ತು. ಬಳಿಕ ಶಿಕ್ಷಕರ ಆಶಯದಂತೆ ಗುರುಭವನಕ್ಕೆ ಅಗತ್ಯ ಸೌಲಭ್ಯ ಕಲ್ಪಿಸಲು ಮುಂದಾದೆವು ಎಂದರು.

ಶಿಕ್ಷಕರ ಮನವಿ ಈಡೇರಿಸಿದ ತೃಪ್ತಿ ಇದೆ

ಗುರುಭವನದಲ್ಲಿ ಹದಗೆಟ್ಟಿದ್ದ ಮೇಲ್ಛಾವಣಿಗೆ ಚುರುಕಿ ಹಾಕುವುದು, ಫ್ಯಾನ್, ಕಿಟಕಿ, ಬಾಗಿಲು, ನೀರಿನ ಸೌಲಭ್ಯ, ಶೌಚಾಲಯಗಳ ನವೀಕರಣ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸುವಂತೆ ಶಿಕ್ಷಕರು ಮನವಿ ಮಾಡಿದ್ದರು. ಶಿಕ್ಷಕರು ಸಮಾಜದ ಕಣ್ಣುಗಳಿದ್ದಂತೆ. ಸಮಾಜದ ಭವಿಷ್ಯ ರೂಪಿಸುವ ಶಿಕ್ಷಕರಿಗೆ ಉತ್ತಮ ಸೌಲಭ್ಯಗಳು ದೊರೆಯಬೇಕು ಎಂಬ ಉದ್ದೇಶದಿಂದ ನಗರಸಭೆ ಅನುದಾನದಲ್ಲಿ 27 ಲಕ್ಷ ರೂ. ವೆಚ್ಚದಲ್ಲಿ ನವೀಕರಣ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಹೇಳಿದರು.

ದೇಶಕಟ್ಟುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಪ್ರಮುಖ. ದೇಶದ ಮುಂದಿನ ಪ್ರಜೆಗಳನ್ನು ಸೃಷ್ಟಿಸುವ ಶಿಕ್ಷಕರು ಯಾವುದೇ ಸಮಸ್ಯೆಗಳು ಆಗಬಾರದು. ಸರ್ಕಾರಿ ಶಾಲಾ ಮಕ್ಕಳಿಗೆ ಇನ್ನೂ ಹೆಚ್ಚಿನ ಗುಣಮಟ್ಟದ ಶಿಕ್ಷಣ ನೀಡಲು ಶ್ರಮಿಸಬೇಕು. ನಗರಸಭೆ ಅಧ್ಯಕ್ಷರಾಗಿ ಇಂದು ನಮ್ಮ ಅಧಿಕಾರದ ಕೊನೆಯ ದಿನ. ಈದಿನ ಗುರುಭವನ ಉದ್ಘಾಟಿಸುವ ಮೂಲಕ ಶಿಕ್ಷಕರ ಸೇವೆ ಮಾಡಿದ ತೃಪ್ತಿ ಇದೆ ಎಂದು ಹೇಳಿದರು.

ಕಟ್ಟಡ ಪುನಶ್ಚೇತನ, ನಗರಸಭಾಧ್ಯಕ್ಷರಿಗೆ ಕೃತಜ್ಞತೆ

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ ಎಚ್.ಹನುಮಯ್ಯ ಮಾತನಾಡಿ, 1993ರಲ್ಲಿ ಅಂದಿನ ಶಾಸಕ ಸಿ.ಎಂ. ಲಿಂಗಪ್ಪ ಅವರ ಅವಧಿಯಲ್ಲಿ ಗುರುಭವನಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. 2005ರಲ್ಲಿ ಕಟ್ಟಡ ಲೋಕಾರ್ಪಣೆಗೊಂಡಿತ್ತು. ಆದರೆ, ನಿರ್ವಹಣೆ ಕೊರತೆಯಿಂದಾಗಿ ಹಲವು ವರ್ಷಗಳಿಂದ ಕಟ್ಟಡ ಶಿಥಿಲಾವಸ್ಥೆ ತಲುಪಿದ್ದು, ಪಾಳುಬಿದ್ದ ಸ್ಥಿತಿಯಲ್ಲಿತ್ತು. ಇದೀಗ ಶಿಕ್ಷಕರ ಕೋರಿಕೆಯಂತೆ ಕಟ್ಟಡಕ್ಕೆ ಪುನಶ್ಚೇತನ ನಗರಸಭೆ ಅಧ್ಯಕ್ಷರು ಅನುದಾನ ನೀಡಿ ಗುರುಭವನಕ್ಕೆ ನವಚೈತನ್ಯ ನೀಡಿರುವುದು ಸಂತಸದ ಸಂಗತಿ. ಗುರಭವನದ ನವೀಕರಣ ಶಿಕ್ಷಕರಿಗೆ ಸಂಭ್ರಮದ ದಿನವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಕಾರಿ ಸೋಮಲಿಂಗಯ್ಯ, ಅಕ್ಷರ ದಾಸೋಹ ಪರಿವೀಕ್ಷಕ ಸಂತೋಷ್ ನಿವೃತ್ತ ಪ್ರಾಂಶುಪಾಲ ಜಿ. ಶಿವಣ್ಣ, ಪ್ರೌಢಶಾಲಾ ವಿಭಾಗದ ಅಧ್ಯಕ್ಷ ಪ್ರದೀಪ್ ಕುಮಾರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷರಾದ ರಂಗಸ್ವಾಮಯ್ಯ, ಶಂಕರಾನಂದ, ಪ್ರಧಾನ ಕಾರ್ಯದರ್ಶಿ ಬಸವರಾಜು, ತಾಲ್ಲೂಕು ಅಧ್ಯಕ್ಷರುಗಳಾದ ಕೃಷ್ಣ, ಮಲ್ಲಿಕಾರ್ಜುನ್, ಬಸವೇಗೌಡ, ಚಂದ್ರು, ಪದಾಕಾರಿಗಳಾದ ಶಿವರುದ್ರಯ್ಯ, ಪ್ರಭಾಕರ್ ಗಂಗಾಂಬಿಕೆ, ಜಗದಾಂಭೆ, ಶಶಿಕಲಾ ಹಿರೇಮಠ, ಜಯರಾಮ್, ಸತೀಶ್ ಕುಮಾರ್ ಸೇರಿದಂತೆ ಹಲವು ಶಿಕ್ಷಕರು ಮತ್ತು ಶಿಕ್ಷಣ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.


ದೀಪಾವಳಿ ಪಟಾಕಿ ಮಳಿಗೆಗಳಲ್ಲಿ 18 ವರ್ಷದೊಳಗಿನ ಮಕ್ಕಳ ದುಡಿಮೆ ನಿಷೇಧ: ಉಲ್ಲಂಘಿಸಿದರೆ ಕಾನೂನು ಕ್ರಮ



ಮಂಡ್ಯ: ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಮಕ್ಕಳ ದುಡಿಮೆಯನ್ನು ನಿಯಂತ್ರಿಸಲು ಹಾಗೂ ನಿಷೇಧಿಸಲು ಬಾಲ್ಯಾವಸ್ಥೆ ಮತ್ತು ಕಿಶೋರವ್ಯಸ್ಥೆ ಕಾರ್ಮಿಕ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ 1986 ತಿದ್ದುಪಡಿ 2016 ರನ್ನು ಜಾರಿಗೆ ತಂದಿರುತ್ತದೆ. ಸದರಿ ಕಾಯ್ದೆಯನ್ವಯ ಎಲ್ಲಾ ಉದ್ಯೋಗ ಮತ್ತು ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಹಾಗೂ 14 ರಿಂದ 18 ರ ವಯಸ್ಸಿನ ಕಿಶೋರ ಕಾರ್ಮಿಕ ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ.

ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ದೀಪಾವಳಿ ಹಬ್ಬದಪ್ರಯುಕ್ತ ಪಟಾಕಿ ಮಾರಟ ಮಳಿಗೆಗಳನ್ನು ಸ್ಥಾಪಿಸಲಾಗುತ್ತಿದೆ. ಪಟಾಕಿ ತಯಾರಿಕೆ ಮಾರಟ ಹಾಗೂ ಇತರೆ ಪ್ರಕ್ರಿಯೆಗಳು ಅಪಾಯಕಾರಿ ಉದ್ದೆಮಗಳಲ್ಲಿ ಬರುವುದರಿಂದ ಸದರಿ ಅಂಗಡಿಗಳಲ್ಲಿ ಯಾವುದೇ ಕಾರಣಕ್ಕೂ 18 ವರ್ಷದ ಒಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳದಂತೆ ತಿಳಿಸಲಾಗಿದೆ. ತಪ್ಪಿದಲ್ಲಿ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ 1986 ತಿದ್ದುಪಡಿ 2016 ರ ಅನ್ವಯ ಕಾನೂನು ಕ್ರಮ ಜರಿಗಿಸಲಾಗುವುದು ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಸದಸ್ಯ ಕಾರ್ಯದರ್ಶಿಗಳು, ಡಾ.ಸವಿತ.ಎಂ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಹಾರದ ಶಿಸ್ತು : ಸಾವಿನ ವಿಸ್ಮೃತಿ



ಆಹಾರವೆಂದರೆ ಕೇವಲ ಹಸಿವು ನೀಗಿಸುವ ಸಾಧನವಲ್ಲ; ಅದು ದೇಹಕ್ಕೆ ಚೈತನ್ಯ ತುಂಬುವ ಜೀವಾಮೃತ, ಮನಸ್ಸಿಗೆ ನೆಮ್ಮದಿ ನೀಡುವ ಸಂಜೀವಿನಿ. ಆಹಾರದ ಆಯ್ಕೆಯಷ್ಟೇ ಅದರ ಸೇವನೆಯ ಶಿಸ್ತೂ ಮುಖ್ಯ. ನಿಗದಿತ ಸಮಯಕ್ಕೆ ಊಟ ಮಾಡುವುದರಿಂದ ದೇಹದ ಜೈವಿಕ ಗಡಿಯಾರ ಮತ್ತು ಚಯಾಪಚಯ ಕ್ರಿಯೆಗಳು ಸಮತೋಲನದಲ್ಲಿರುತ್ತವೆ. ಸಮಯಪಾಲನೆಯೇ ಆರೋಗ್ಯದ ಮೊದಲ ಮೆಟ್ಟಿಲು.

ಆಹಾರವನ್ನು ನಿಧಾನವಾಗಿ, ಚೆನ್ನಾಗಿ ಅಗಿದು, ಪ್ರತಿಯೊಂದು ತುತ್ತನ್ನೂ ಆಸ್ವಾದಿಸುತ್ತಾ ಸೇವಿಸಬೇಕು. ಇದು ಜೀರ್ಣಕ್ರಿಯೆಗೆ ನೆರವಾಗಿ, ಅತಿಯಾದ ಆಹಾರ ಸೇವನೆಯನ್ನು ನಿಯಂತ್ರಿಸುತ್ತದೆ. ಊಟದ ವೇಳೆ ಮೊಬೈಲ್, ದೂರದರ್ಶನಗಳನ್ನು ಬದಿಗಿಟ್ಟು ಏಕಾಗ್ರತೆಯಿಂದ ಆಹಾರ ಸೇವಿಸುವುದು ಉತ್ತಮ ಅಭ್ಯಾಸ. ಪ್ರತಿಯೊಂದು ತುತ್ತಿನಲ್ಲೂ ಕೃತಜ್ಞತೆಯ ಭಾವವಿರಲಿ. ಕುಟುಂಬದ ಸದಸ್ಯರೆಲ್ಲ ಒಟ್ಟಿಗೆ ಕುಳಿತು ಊಟ ಮಾಡುವುದರಿಂದ ಪ್ರೀತಿ, ಆತ್ಮೀಯತೆ ಮತ್ತು ಬಾಂಧವ್ಯ ವೃದ್ಧಿಸುತ್ತವೆ. ಹಿರಿಯರ ಅನುಭವದ ಮಾತುಗಳು ಮಕ್ಕಳಿಗೆ ಸಂಸ್ಕಾರ ಕಲಿಸುತ್ತವೆ. ದೀರ್ಘಾಯುಷ್ಯದ ಗುಟ್ಟು ದುಬಾರಿ ಔಷಧಿಗಳಲ್ಲಿಲ್ಲ; ಸಮಯಪಾಲನೆ, ಮಿತಾಹಾರ ಮತ್ತು ಸಮತೋಲಿತ ಆಹಾರದಲ್ಲಿದೆ. ಇಂತಹ ಸರಳ ಶಿಸ್ತುಗಳೇ ಆರೋಗ್ಯ, ಸಂತೋಷ ಮತ್ತು ನೆಮ್ಮದಿಯ ಬದುಕಿಗೆ ಭದ್ರ ಬುನಾದಿಯಾಗಿ, ಸಾವಿನ ಚಿಂತೆಯನ್ನೂ ಮರೆಸುವಷ್ಟು ಬದುಕನ್ನು ಸುಂದರವಾಗಿಸುತ್ತವೆ



ದೀಪಾವಳಿ ಹಬ್ಬ ಆಚರಿಸದ ನತದೃಷ್ಟ ನಾನು!



ರೂಪ ಮಂಜುನಾಥ
ಹೊಳೆನರಸೀಪುರ

ನಮಸ್ಕಾರ ಕನ್ನಡಿಗರೇ,ನಾನು ಮೇಲುಕೋಟೆ.

ಪಾಂಡವಪುರ ತಾಲ್ಲೂಕಿನ ಯಾದವಗಿರಿಯ ಬೆಟ್ಟದ ಮೇಲೆ ಕುಳಿತಿರುವ ನಾನು, ನಿಮ್ಮನ್ನು ಇತಿಹಾಸದ ಸಾವಿರ ವರ್ಷಗಳ ಹಿಂದಕ್ಕೆ ಟೈಮ್ ಮೆಶೀನಿನಲ್ಲಿ ಕೂರಿಸಿಕೊಂಡು ಕರೆದೊಯ್ಯಬಲ್ಲೆ. ಇಲ್ಲಿನ ಕಲ್ಲು-ಮಣ್ಣುಗಳಲ್ಲಿ ಭಕ್ತಿ ಮತ್ತು ವೈರಾಗ್ಯದ ಘಮಲಿದೆ.ರಕ್ತಪಿಪಾಸು ಮೊಘಲರು ಗೈದ ಮಾರಣ ಹೋಮದ ವ್ಯಥೆ ಇದೆ!

ನಾನು ಬೆಟ್ಟದ (ಕೋಟೆಯ) ಮೇಲಿರುವುದರಿಂದ ಜನರು ನನ್ನನ್ನು 'ಮೇಲು-ಕೋಟೆ' ಎಂದು ಕರೆದರು. ಆದರೆ ಶಾಸನಗಳಲ್ಲಿ ನನ್ನನ್ನು 'ತಿರುನಾರಾಯಣಪುರ' ಮತ್ತು 'ಯಾದವಗಿರಿ' ಎಂದು ಕೂಡಾ ಗುರುತಿಸಲಾಗಿದೆ. ಇಲ್ಲಿ ಶ್ರೀರಾಮ ಮತ್ತು ಶ್ರೀ ಕೃಷ್ಣ ಇಬ್ಬರೂ ಆರಾಧನೆ ಮಾಡಿದ್ದರು ಎಂಬ ನಂಬಿಕೆ ಇರುವುದರಿಂದ ನನಗೆ ಈ ಪವಿತ್ರ ಹೆಸರುಗಳು ಬಂದವೆ. ಎಂಥಾ ಪುಣ್ಯವಂತಳು ರೀ ನಾನು!

ನನ್ನ ಇತಿಹಾಸದಲ್ಲಿ ಸುವರ್ಣ ಅಕ್ಷರಗಳಲ್ಲಿ ಬರೆಯಬೇಕಾದ ಕಾಲವೆಂದರೆ ಅದು 12ನೇ ಶತಮಾನ. ತಮಿಳುನಾಡಿನಿಂದ ಹೆ?ರಟ ಮಹಾನ್ ಸಂತ ಶ್ರೀ ರಾಮಾನುಜಾಚಾರ್ಯರು ನನ್ನಲ್ಲಿ ಬಂದು 12 ವರ್ಷಗಳ ಕಾಲ ನೆಲೆಸಿದರು. ಹೊಯ್ಸಳ ಅರಸ ಬಿಟ್ಟಿದೇವನನ್ನು (ವಿಷ್ಣುವರ್ಧನ) ಭೇಟಿಯಾಗಿ, ಈ ಭಾಗದಲ್ಲಿ ಶ್ರೀವೈಷ್ಣವ ಧರ್ಮದ ಪ್ರಸಾರ ಮಾಡಿದರು. ಜಾತಿ-ಮತದ ಭೇದವಿಲ್ಲದೆ ಎಲ್ಲರನ್ನೂ ದೇವಸ್ಥಾನದ ಒಳಕ್ಕೆ ಬರಮಾಡಿಕೊಂಡ ಅಪ್ಪಟ ಮಾನವತಾವಾದಿ ನೆಲೆಯಾಗಿರುವೆ ನಾನು.


ನನ್ನಲ್ಲಿ ಎರಡು ಪ್ರಮುಖ ದೇವಸ್ಥಾನಗಳಿವೆ:

ಊರಿನ ಮಧ್ಯದಲ್ಲಿ ನೆಲೆಸಿರುವ ಈ ದೇವಾಲಯದ ದೇವರು ಎಷ್ಟು ಸುಂದರ ಎಂದರೆ, ಅವನ ಹೆಸರೇ ಚೆಲುವ ನಾರಾಯಣ! ರಾಮಾನುಜಾಚಾರ್ಯರು ಚೆಲುವರಲ್ಲಿ ಚೆಲುವನಾದ ಇವರನ್ನು 'ಸೆಲ್ವಪಿಳ್ಳೈ' (ಮುದ್ದಿನ ಮಗ) ಎಂದು ಕರೆದರು. ಇಲ್ಲಿ ನಡೆಯುವ 'ವೈರಮುಡಿ ಉತ್ಸವ' ಜಗತ್ಪ್ರಸಿದ್ಧ.ಮೈ ತುಂಬಾ ಬೆಲೆಬಾಳುವ ವಜ್ರ, ಪಚ್ಚೆ, ಮಾಣಿಕ್ಯ, ಕೆಂಪಿನ ಹಾರಗಳು,ವಜ್ರದ ಕಿರೀಟವನ್ನು ನಾರಾಯಣನಿಗೆ ತೊಡಿಸಿ ಅವನನ್ನು ಹೊತ್ತು ಭಕ್ತರು ಮೆರೆಸುವ ಆ ದೃಶ್ಯವೈಭವವನ್ನು ನೋಡಲು ಎಷ್ಟು ಕಣ್ಣುಗಳಿದ್ದರೂ ಸಾಲದು! ಲಕ್ಷಾಂತರ ಜನರು ಗೋವಿಂದಾ ಗೋವಿಂದಾ ಎಂದು ಉದ್ಘೋಷಿಸುತ್ತಿದ್ದರೆ ನನ್ನ ರೋಮಗಳೂ ನಿಮಿರಿ ನಿಲ್ಲುತ್ತವೆ. ಆ ವೈರಮುಡಿಯನ್ನು ದೇವರಿಗೆ ತೊಡಿಸುವಾಗ ಅರ್ಚಕರು ತಮ್ಮ ಕಣ್ಣಿಗೆ ರೇಷ್ಮೆ ವಸ್ತ್ರದ ಪಟ್ಟಿಯನ್ನು ಕಟ್ಟಿಕೊಳ್ಳುತ್ತಾರೆ ಎಂಬ ಅದ್ಭುತ ನಂಬಿಕೆಯಿದೆ. ಆ ದಿವ್ಯ ತೇಜಸ್ಸನ್ನು ಕಣ್ಣಾರೆ ನೋಡಬಾರದು ಎಂಬ ಸಂಪ್ರದಾಯ ಅದರ ಪಾವಿತ್ರ್ಯತೆಗೆ ಸಾಕ್ಷಿಯಾಗಿದೆ.

ಬೆಟ್ಟದ ತುದಿಯಲ್ಲಿ ಕುಳಿತಿರುವ ಯೋಗಾನರಸಿಂಹ ಸ್ವಾಮಿಗಳು ನನ್ನ ರಕ್ಷಕರು. ಸ್ವಲ್ಪ ಕಡಿದಾಗೇ ಇರುವ ಮೆಟ್ಟಿಲುಗಳನ್ನು ಹತ್ತಿ ಬಂದು ನೀವು ಇಲ್ಲಿಂದ ಕೆಳಗೆ ನೋಡಿದರೆ, ಸುತ್ತಮುತ್ತಲಿನ ಹಸಿರು ಗದ್ದೆಗಳು ಮತ್ತು ಕೆರೆಗಳು, ಕಲ್ಯಾಣಿಗಳು,ದೇವಾಲಯಗಳು ಕಣ್ಣಿಗೆ ಹಬ್ಬ ನೀಡುತ್ತವೆ.

ನನ್ನಲ್ಲಿರುವ 'ಅಕ್ಕ-ತಂಗಿಯರ ಕಲ್ಯಾಣಿ'ಗಳು ಪ್ರವಾಸಿಗರ ಪ್ರಿಯವಾದ ತಾಣ..ಇವೆರಡೂ ಪಕ್ಕಪಕ್ಕದಲ್ಲೇ ಇರುವುದು ವಿಶೇಷ.ಈ ಕಲ್ಯಾಣಿಗಳು ಹೊಯ್ಸಳ ಮತ್ತು ವಿಜಯನಗರ ಶೈಲಿಯ ವಾಸ್ತುಶಿಲ್ಪದ ಪ್ರಭಾವವನ್ನು ಹೊಂದಿವೆ. ಕೊಳದ ಸುತ್ತಲೂ ಕಲ್ಲಿನ ಮೆಟ್ಟಿಲುಗಳನ್ನು ಅತ್ಯಂತ ಕಲಾತ್ಮಕವಾಗಿ ಕೆತ್ತಲಾಗಿದೆ.

ಜನಪದ ಕಥೆಗಳ ಪ್ರಕಾರ, ಇಬ್ಬರು ಸಹೋದರಿಯರು (ಅಕ್ಕ-ತಂಗಿ) ಈ ಕಲ್ಯಾಣಿಗಳನ್ನು ನಿರ್ಮಿಸಿದರು ಎಂದು ನಂಬಲಾಗಿದೆ.



ಅಕ್ಕನು ಸ್ವಭಾವದಿಂದ ಬಹಳ ದುಷ್ಟಳಾಗಿದ್ದರಿಂದ ಆಕೆಯ ಕಲ್ಯಾಣಿಯ ನೀರು ಉಪ್ಪಿನಮಯವಾಗಿದ್ದು, ಯಾವ ಕೆಲಸಕ್ಕೂ ಬರದ ವ್ಯರ್ಥ ನೀರಾಗಿದೆ.

ಅದೇ ತಂಗಿಯು ಬಹಳ ಸುಗುಣಿಯಾಗಿದ್ದ ಕಾರಣ, ಆಕೆಯ ಕಲ್ಯಾಣಿಯ ನೀರು ನೀರು ಅತ್ಯಂತ ಸ್ವಚ್ಛವಾಗಿದ್ದು ಕುಡಿಯಲು ಯೋಗ್ಯವಾಗಿದೆ ಎಂದು ಹೇಳಲಾಗುತ್ತದೆ.ಈ ಕಲ್ಯಾಣಿಯ ನೀರನ್ನು ಇತರ ಧಾರ್ಮಿಕ ಮತ್ತು ದೈನಂದಿನ ಕಾರ್ಯಗಳಿಗೆ ಬಳಸಲಾಗುತ್ತಿತ್ತು. ಇಂದಿಗೂ ಇವುಗಳಲ್ಲಿ ನೀರು ಬತ್ತದಿರುವುದು ಇಲ್ಲಿನ ಜಲ ನಿರ್ವಹಣಾ ತಂತ್ರಜ್ಞಾನಕ್ಕೆ ಸಾಕ್ಷಿ.



ಎರಡೂ ಕಲ್ಯಾಣಿಗಳು ಪಕ್ಕಪಕ್ಕದಲ್ಲೇ ಅಂಟಿಕೊಂಡಂತಿದ್ದರೂ, ಗುಣದ ವ್ಯತ್ಯಾಸದಿಂದ ಒಂದರ ನೀರನ್ನು ತೀರ್ಥವನ್ನಾಗಿಸುತ್ತದೆ ಅಥವಾ ವ್ಯರ್ಥವನ್ನಾಗಿಸುತ್ತದೆ ಎಂಬುದಕ್ಕೆ ಈ ಕಲ್ಯಾಣಿಗಳೇ ಸಾಕ್ಷಿ."ಈ ನೀರಿನ ವ್ಯತ್ಯಾಸ ಕಂಡಾಗ ಇದು ವಿಜ್ಞಾನದ ವಿಸ್ಮಯವೋ,ದೈವದ ಲೀಲೆಯೋ ಎಂದು ಹುಬ್ಬೇರಿಸುವಂತಾಗುತ್ತದೆ.

ಎಲ್ಲಕೂ ಮಿಗಿಲಾಗಿ ಅರ್ಧಕ್ಕೆ ನಿಂತಿರುವಂತೆ ಕಾಣುವ 'ರಾಯಗೋಪುರ' ಇದೆಯಲ್ಲಾ, ಅದರ ವಾಸ್ತುಶಿಲ್ಪ ಎಷ್ಟು ಅದ್ಭುತವೆಂದರೆ ಅದೆಷ್ಟೋ ಸಿನೆಮಾಗಳ ಚಿತ್ರೀಕರಣಕ್ಕೆ ಇದು ನೆಚ್ಚಿನ ಜಾಗ.ರಾಯಗೋಪುರ ಅರ್ಧಕ್ಕೆ ನಿಂತಿದ್ದರೂ ಅದು 'ಅಪೂರ್ಣ'ವಲ್ಲ, ಬದಲಿಗೆ 'ಅನಂತ' ವಾಗಿದೆ! "ಪೂರ್ಣಗೊಳ್ಳದ ಆ ರಾಯಗೋಪುರವು, ಕಾಲದ ಹೊಡೆತಕ್ಕೂ ಜಗ್ಗದೆ ನಿಂತಿರುವ ನನ್ನ ಅಚಲ ಬದ್ಧತೆಯ ಸಂಕೇತ."ಇಲ್ಲಿನ ಕಲ್ಲಿನ ಕಂಬಗಳ ಕೆತ್ತನೆ ನನ್ನ ಹಳೆಯ ಗೈರತ್ತು ಗರಿಮೆಯನ್ನು ಸಾರುತ್ತದೆ.

ನನ್ನ ಬಗ್ಗೆ ಮಾತನಾಡುವಾಗ 'ಪುಳಿಯೋಗರೆ' ಬಗ್ಗೆ ಹೇಳದಿದ್ದರೆ ಹೇಗೆ? ಇಲ್ಲಿನ ದೇವಸ್ಥಾನದ ಪ್ರಸಾದವಾದ ಪುಳಿಯೋಗರೆಯ ರುಚಿ ಜಗತ್ತಿನಲ್ಲಿ ಮತ್ಯಾವುದೇ ಹೋಟೆಲ್‌ನಲ್ಲಿ ಸಿಗಲು ಸಾಧ್ಯವಿಲ್ಲ. ಆ ಮಸಾಲೆ, ಆ ಎಣ್ಣೆಯ ಘಮ ಮತ್ತು ಸಕ್ಕರೆ ಪೊಂಗಲ್‌ನ ಸಿಹಿ ನಿಮ್ಮ ನಾಲಿಗೆಯ ಮೇಲೆ ಸದಾ ಉಳಿಯುತ್ತದೆ.ಇನ್ನೂ ಸುಬ್ಬಣ್ಣ ಮೆಸ್ ನ ಪುಷ್ಕಳ ಭೋಜನ ನೀವು ಸವಿಯದೇ ಹೋಗದಿದ್ದರೆ, ನಿಮಗೆ ಲಾಸೇ!

ನಾನು ಕೇವಲ ಪ್ರವಾಸಿ ತಾಣವಲ್ಲ,ಭಕ್ತಿಯ ಬೀಡಲ್ಲ. ಜ್ಞಾನ,ಹಾಗೂ ವಿದ್ವತ್ತಿನ ಕೇಂದ್ರ. ಇಲ್ಲಿನ *'ಸಂಸ್ಕೃತ ಪಾಠಶಾಲೆ'*ಯಲ್ಲಿ ಇಂದಿಗೂ ಪ್ರಾಚೀನ ಪದ್ಧತಿಯಲ್ಲಿ ವೇದ-ಶಾಸ್ತ್ರಗಳನ್ನು ಕಲಿಸಲಾಗುತ್ತದೆ. ಪುತಿನ (ಪಿ.ಟಿ. ನರಸಿಂಹಾಚಾರ್) ಅಂತಹ ಶ್ರೇಷ್ಠ ಕವಿಗಳು ನನ್ನ ಮಣ್ಣಿನಲ್ಲಿ ಕುಳಿತು ಕಾವ್ಯ ಬರೆದಿದ್ದಾರೆ.

ನನ್ನಲ್ಲಿ ಗದ್ದಲವಿಲ್ಲ, ಕೇವಲ ಗಂಟೆಯ ಸದ್ದು ಮತ್ತು ಗಾಳಿಯ ಮರ್ಮರವಿದೆ. ನೀವು ಆಧ್ಯಾತ್ಮಿಕ ನೆಮ್ಮದಿ ಹುಡುಕುತ್ತಾ ಬಂದರೆ, ನಾನು ನಿಮ್ಮನ್ನು ಮಡಿಲಿಗೆ ಹಾಕಿಕೊಳ್ಳುತ್ತೇನೆ. ಬಂದಾಗ ಮರೆಯದೇ ಸಕ್ಕರೆ ಪೊಂಗಲ್, ಪುಳಿಯೋಗರೆ ಸವಿಯಿರಿ!

ನನಗೆ 'ಮೇಲುಕೋಟೆ' ಎಂಬ ಹೆಸರು ಬರಲು ಕೇವಲ ಅದು ಬೆಟ್ಟದ ಮೇಲಿದೆ ಎನ್ನುವುದಷ್ಟೇ ಕಾರಣವಲ್ಲ, ಅದರ ಹಿಂದೆ ಬಲವಾದ ರಕ್ಷಣಾತ್ಮಕ ಮತ್ತು ಧಾರ್ಮಿಕ ಹಿನ್ನೆಲೆಯಿದೆ:

ಭೌಗೋಳಿಕ ಕಾರಣ, ಸಮುದ್ರ ಮಟ್ಟದಿಂದ ಸುಮಾರು 3589 ಅಡಿ ಎತ್ತರದಲ್ಲಿರುವ 'ಯಾದವಗಿರಿ' ಶ್ರೇಣಿಯ ಮೇಲೆ ನಾನಿರುವೆ. ಸುತ್ತಮುತ್ತಲಿನ ಬಯಲು ಪ್ರದೇಶಕ್ಕಿಂತ ನಾನು ಎತ್ತರದಲ್ಲಿದ್ದು, ಒಂದು ನೈಸರ್ಗಿಕ 'ಕೋಟೆ'ಯಂತೆ ಭಾಸವಾಗುತ್ತೇನೆ. 'ಮೇಲೆ ಇರುವ ಕೋಟೆ' ಎಂಬ ಅರ್ಥದಲ್ಲಿ ಮೇಲುಕೋಟೆ ಎಂಬ ಹೆಸರು ರೂಢಿಗೆ ಬಂತು.

ರಕ್ಷಣಾತ್ಮಕ ಪ್ರಾಮುಖ್ಯತೆ: ವಿಜಯನಗರದ ಅರಸರ ಕಾಲದಲ್ಲಿ ಮತ್ತು ನಂತರದ ಪಾಳೆಯಗಾರರ ಕಾಲದಲ್ಲಿ, ನಾನಿರುವ ಬೆಟ್ಟದ ತುದಿಯನ್ನು ಒಂದು ಭದ್ರವಾದ ಮಿಲಿಟರಿ ತಾಣವಾಗಿ ಬಳಸಲಾಗುತ್ತಿತ್ತು. ಬೆಟ್ಟದ ಸುತ್ತಲೂ ಕಲ್ಲಿನ ಗೋಡೆಗಳನ್ನು ಕಟ್ಟಿ ರಕ್ಷಣೆ ಒದಗಿಸಲಾಗಿತ್ತು. ಅರಸರು ಇಲ್ಲಿನ ದೇವಾಲಯದ ರಕ್ಷಣೆಗಾಗಿ ಸದಾ ಸನ್ನದ್ಧರಿರುತ್ತಿದ್ದರು.

ಧಾರ್ಮಿಕ ಶ್ರೇಷ್ಠತೆ: ಭಕ್ತಿಯ ದೃಷ್ಟಿಯಿಂದ ನನ್ನನ್ನು 'ದಕ್ಷಿಣ ಬದರಿಕಾಶ್ರಮ' ಎಂದು ಕರೆಯಲಾಗುತ್ತದೆ. ಅಂದರೆ ಉತ್ತರದಲ್ಲಿರುವ ಬದರಿನಾಥಕ್ಕೆ ಸಮಾನವಾದ 'ಮೇಲು' (ಶ್ರೇಷ್ಠ) ಸ್ಥಾನ ಪಡೆದ ಕ್ಷೇತ್ರವಿದು. ಶಾಸನಗಳಲ್ಲಿ ನನ್ನನ್ನು 'ದಕ್ಷಿಣ ನಾರಾಯಣಪುರ' ಎಂದೂ ಕರೆಯಲಾಗಿದೆ. ಇಲ್ಲಿನ ಪ್ರತಿಯೊಂದು ಶಿಲೆಯೂ ಒಂದು ರಕ್ಷಣಾ ಗೋಡೆಯಂತೆ ಇರುವುದರಿಂದ 'ಕೋಟಿ' (ಶ್ರೇಷ್ಠತೆ) ಮತ್ತು 'ಕೋಟೆ' ಎಂಬ ಅರ್ಥಗಳು ಬೆಸೆದುಕೊಂಡಿವೆ.

ದೀಪಾವಳಿ ಹಬ್ಬವು ಹಿಂದುಗಳೆಲ್ಲರ ಪಾಲಿಗೆ ಬೆಳಗಿನ ಸಂಭ್ರಮದ ಹಬ್ಬವಾದರೆ, ನನ್ನ ಇತಿಹಾಸದಲ್ಲಿ ದೀಪಾವಳಿಯು ಅತ್ಯಂತ ದುಃಖದ ದಿನವಾಗಿದೆ. ನನ್ನನ್ನಾಶ್ರಯಿಸಿರುವ ಬಹುಸಂಖ್ಯಾತ ಜನಸಮುದಾಯವಾದ 'ಮಂಡ್ಯಂ ಅಯ್ಯಂಗಾರ್' ಕುಟುಂಬಗಳು ಇಂದಿಗೂ ದೀಪಾವಳಿಯನ್ನು ಹಬ್ಬವಾಗಿ ಆಚರಿಸುವುದಿಲ್ಲ. ಇದರ ಹಿಂದೆ 1790ರ ದಶಕದ ಒಂದು ನೋವಿನ ಕಥೆಯಿದೆ. ಕಥೆ ಹೇಳುವೇ ನನ್ನ ಕತೆ ಹೇಳುವೇ?ಬಾಳಿನಾ ಪುಟಗಳಲಿ ಕಣ್ಣೀರ ಹನಿಗಳಲಿ, ಬರೆದಿರುವ ನನ್ನಯಾ ಕತೆ ಹೇಳುವೆ?.

ಟಿಪ್ಪು ಸುಲ್ತಾನನ ಆಳ್ವಿಕೆಯ ಕಾಲದಲ್ಲಿ, ಮೇಲುಕೋಟೆಯ ಮಂಡ್ಯಂ ಅಯ್ಯಂಗಾರ್ ಸಮುದಾಯದವರು ಮೈಸೂರು ಒಡೆಯರ್ ಮನೆತನಕ್ಕೆ ನಿಷ್ಠರಾಗಿದ್ದರು. ರಾಜಮನೆತನಕ್ಕೆ ನೆರವು ನೀಡುತ್ತಿದ್ದಾರೆ ಎಂಬ ಕಾರಣಕ್ಕೆ ದೀಪಾವಳಿಯ (ನರಕ ಚತುರ್ದಶಿಯ) ದಿನದಂದು ಟಿಪ್ಪುವಿನ ಸೈನ್ಯವು ಮೇಲುಕೋಟೆಯ ಮೇಲೆ ದಾಳಿ ಮಾಡಿತು.ಈ ದಾಳಿಯಲ್ಲಿ ಅಬಾಲವೃದ್ಧರಾದಿಯಾಗಿ ಸುಮಾರು 800ಕ್ಕೂ ಹೆಚ್ಚು ಮಂಡ್ಯಂ ಅಯ್ಯಂಗಾರ್ ಕುಟುಂಬದವರನ್ನು ಹತ್ಯೆ ಮಾಡಲಾಯಿತು ಎಂದು ಇತಿಹಾಸ ಹೇಳುತ್ತದೆ. ಈ ಘಟನೆಯನ್ನು ಇಂದಿಗೂ ಆ ಸಮುದಾಯದವರು 'ಬಾಬೂರಿನ ಕಾಳಗ' ಅಥವಾ 'ದೀಪಾವಳಿಯ ಕಗ್ಗೊಲೆ' ಎಂದು ನೆನಪಿಸಿಕೊಳ್ಳುತ್ತಾರೆ.

ಆ ದಿನ ನೂರಾರು ಕುಟುಂಬಗಳು ಊರು ಬಿಟ್ಟು ಪಲಾಯನ ಮಾಡಿದವು. ಅನೇಕರು ಕಾವೇರಿ ನದಿಯಲ್ಲಿ ಬಿದ್ದು ಪ್ರಾಣತ್ಯಾಗ ಮಾಡಿದರು. ಈ ಘಟನೆಯ ನೆನಪಾಗಿ, ಆ ಕುಟುಂಬಗಳ ವಂಶಸ್ಥರು ಅಂದಿನಿಂದ ಇಂದಿನವರೆಗೂ ದೀಪಾವಳಿಯನ್ನು ಸಂಭ್ರಮದಿಂದ ಆಚರಿಸುವ ಬದಲು, ಮೃತಪಟ್ಟ ತಮ್ಮ ಪೂರ್ವಜರ ನೆನಪಿನಲ್ಲಿ 'ಶೋಕ' ದಿನವನ್ನಾಗಿ ಪಾಲಿಸುತ್ತಾರೆ.ನಾಡಿನಾದ್ಯಂತ ಹಣತೆಗಳು ಬೆಳಗುವಾಗ, ನನ್ನ ಕೆಲವು ಭಾಗಗಳಲ್ಲಿ ಮಾತ್ರ ಅಂದು ಇಂದಿಗೂ ನಿಶ್ಯಬ್ದ ನೆಲೆಸಿರುತ್ತದೆ. ಇಂದಿಗೂ ಆ ದಿನದ ದಾರುಣವನ್ನು ನೆನೆದಾಗ ನನ್ನ ಹೃದಯ ಹಿಂಡಿ ಹಿಪ್ಪೆಯಾಗುತ್ತದೆ. ಇದು ಇತಿಹಾಸವು ಒಂದು ಸಮುದಾಯದ ಮೇಲೆ ಬೀರಿದ ಆಳವಾದ ಪರಿಣಾಮಕ್ಕೆ ಸಾಕ್ಷಿ.

ನಾನು,ಮೇಲುಕೋಟೆ ಎಂದರೆ ಕೇವಲ ಚೆಲುವನಾರಾಯಣನ ಸೌಂದರ್ಯವಲ್ಲ,ಕ್ರೂರ ಇತಿಹಾಸದ ಗಾಯಗಳನ್ನು ಮೌನವಾಗಿ ಹೊತ್ತು ನಿಂತಿರುವ ಸಾಕ್ಷಿ ಪ್ರಜ್ಞೆ! "ಲೋಕವೆಲ್ಲಾ ಹಣತೆ ಹಚ್ಚಿ ಸಂಭ್ರಮಿಸುವಾಗ, ನನ್ನ ಮಡಿಲಿನಲ್ಲಿ ಮಾತ್ರ ಇಂದಿಗೂ ಮೌನವೇ ಪ್ರಾರ್ಥನೆಯಾಗಿದೆ. ಇದು ಕೇವಲ ಶೋಕವಲ್ಲ, ಇದು ನಮ್ಮ ಪೂರ್ವಜರಿಗೆ ಸಲ್ಲಿಸುವ ಅತ್ಯುನ್ನತ ಗೌರವ."

ಬನ್ನಿ ನನ್ನ ಪ್ರೀತಿಯ ಆಸ್ತಿಕ ಮಹನೀಯರೇ, ನನ್ನ ಗತಇತಿಹಾಸವನ್ನೊಮ್ಮೆ ಬಂದು ನೋಡಿ,ಸುಂದರವಾಗಿ ನಿಂತು ಎಲ್ಲರ ಹಾರೈಸುತ್ತಿರುವ ಚೆಲುವನಾರಾಯಣನ ಆಶೀರ್ವಾದ ಪಡೆಯಿರಿ, ಬಾಯಲ್ಲಿ ನೀರೂರಿಸುವ ರುಚಿಯಾದ ಸಕ್ಕರೆ ಪೊಂಗಲ್, ಪುಳಿಯೋಗರೆ ತಿಂದು ತನುಮನಗಳನ್ನು ತೃಪ್ತಿಪಡಿಸಿಕೊಳ್ಳುವಿರಂತೆ. ವಂದನೆಗಳು.





ದೀಪಾವಳಿ ಜಾತ್ರೆಗೆ ಕಾರ್ಯ ಶ್ರೀ ಸಿದ್ದೇಶ್ವರಸ್ವಾಮಿ ಬೆಟ್ಟ ಸಜ್ಜು

ಚೋಳರ ಕಾಲದಲ್ಲಿ ನಿರ್ಮಾಣವಾದ ಶ್ರೀ ಸಿದ್ದೇಶ್ವರ ಸ್ವಾಮಿ ದೇವಾಲಯದಲ್ಲಿ ಜಾತ್ರೆ ಕಳೆ

▪ ಸಿ.ಎಂ ಸುಗಂಧರಾಜು

ಇತಿಹಾಸ ಪ್ರಸಿದ್ಧ ಶ್ರೀ ಕ್ಷೇತ್ರ ಕಾರ್ಯ ಶ್ರೀ ಸಿದ್ದೇಶ್ವರ ಸ್ವಾಮಿಯ ಬೆಟ್ಟದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಕೂಡ ದೀಪಾವಳಿ ಜಾತ್ರಾ ಮಹೋತ್ಸವಕ್ಕೆ ಶ್ರೀ ಸಿದ್ದೇಶ್ವರ ಸ್ವಾಮಿಯ ಬೆಟ್ಟ ಸಜ್ಜಾಗಿದೆ. ಹೌದು... ನಂಜನಗೂಡು ತಾಲ್ಲೂಕಿನ ದೊಡ್ಡಕವಲಂದೆ ಹೋಬಳಿಯ ಕಾರ್ಯ ಗ್ರಾಮದ ಶ್ರೀ ಸಿದ್ದೇಶ್ವರ ಸ್ವಾಮಿ ಬೆಟ್ಟದಲ್ಲಿ ದೀಪಾವಳಿ ಹಬ್ಬದ ಮಾರನೇ ದಿನ ಅಂದರೆ ನ. 11 ರಂದು ಶ್ರೀ ಸಿದ್ದೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವ ನಡೆಯಲಿದೆ.

ದೈವ ಪುರುಷರಾದ ಶ್ರೀ ಸಿದ್ದೇಶ್ವರರು ಕಾರ್ಯ ಗ್ರಾಮದ ಬೆಟ್ಟದಲ್ಲಿ ನೆಲೆಸಿದ್ದಾರೆ ಎಂಬ ನಂಬಿಕೆ ಅಚಲವಾಗಿದ್ದು ಈ ಬೆಟ್ಟ ಸಿದ್ದೇಶ್ವರ ಸ್ವಾಮಿ ಬೆಟ್ಟವೆಂದೆ ಪ್ರಖ್ಯಾತಿ ಪಡೆದಿದ್ದು, ಈ ದೇವಾಲಯ ಮುಜರಾಯಿ ಇಲಾಖೆಗೆ ಒಳಪಟ್ಟಿದೆ.

ಕಾರ್ಯ ಗ್ರಾಮ ಎಂದು ಹೇಗೆ ಹೆಸರು ಬಂತು: ರಂಗುಪುರ, ಎಮ್ಮಯ್ಯನಪುರ, ಸಿದ್ದಾಪುರ, ಕುರಿತಿಟ್ಟು ಎಂಬ ಗ್ರಾಮಗಳಿದ್ದವು, ಈ ಗ್ರಾಮಗಳಲ್ಲಿ ಕಾಲಾರ, ಪ್ಲೇಗ್ ಮತ್ತು ಕ್ಷಯ ರೋಗದಂತಹ ಮಾರಕ ರೋಗಗಳು ಕಾಣಿಸಿಕೊಂಡು ಅಪಾರ ಸಾವು–ನೋವುಗಳು ಉಂಟಾಯಿತು.

ಈ ರೋಗಗಳಿಗೆ ಯಾವುದೇ ಔಷಧೋಪಚಾರಗಳು ಇರಲಿಲ್ಲ. ಅಂದಿನ ದಿನಗಳಲ್ಲಿ ಯಾವುದೇ ಸಂಕಷ್ಟ ಪರಿಸ್ಥಿತಿಯಲ್ಲಿ ಜನರು ದೇವರ ಮೊರೆ ಹೋಗುತ್ತಿದ್ದರು. ಮತ್ತು ಮಾರಕ ಅಂಟುರೋಗಗಳು ಕಾಣಿಸಿಕೊಂಡಾಗ ಜನರು ತಮ್ಮ ಗ್ರಾಮಗಳನ್ನೇ ತೊರದು ಹೋಗುತ್ತಿದ್ದರು. ಮಾರಕ ರೋಗಗಳಿಂದ ತತ್ತರಿಸಿ ಹೋಗಿದಂತಹ ಈ ನಾಲ್ಕು ಗ್ರಾಮಗಳ ಗ್ರಾಮಸ್ಥರು ಸೂಕ್ತ ಪರಿಹಾರಕ್ಕಾಗಿ ಅಂದಿನ ದೈವ ಪುರುಷರು ಮತ್ತು ತಮ್ಮ ಪವಾಡಗಳಿಂದ ಪ್ರಸಿದ್ಧರಾಗಿದ್ದಂತಹ ಶ್ರೀ ಸಿದ್ದೇಶ್ವರ ಸ್ವಾಮಿಗಳವರ ಮೊರೆ ಹೋದರು. ಜನರ ಪ್ರಾರ್ಥನೆ ಮೇರೆಗೆ ಪರಿಹಾರೋಪಾಯ ಸೂಚಿಸುತ್ತ ಶ್ರೀ ಸಿದ್ದೇಶ್ವರ ಸ್ವಾಮಿಗಳವರು ಗ್ರಾಮಸ್ಥರಿಗೆ ಒಂದು ನಿರ್ದಿಷ್ಟವಾದ ಭೌಗೋಳಿಕ ಪ್ರದೇಶವನ್ನು ತೋರಿಸಿ ತಮ್ಮ ತಮ್ಮ ಗ್ರಾಮಗಳನ್ನು ತೊರೆದು ಈ ಪ್ರದೇಶದಲ್ಲಿ ನೆಲೆಸಿ ತಮ್ಮ ಕೆಲಸ ಕಾರ್ಯಗಳನ್ನು ಕೈಗೊಳ್ಳುವಂತೆ ಅಪ್ಪಣೆ ಮಾಡಿದರು. ಪವಾಡ ಪುರುಷರ ಅಪ್ಪಣೆಯಂತೆ ನಾಲ್ಕು ಗ್ರಾಮದ ಗ್ರಾಮಸ್ಥರು ಬಂದು ನೆಲೆಸಿ ತಮ್ಮ ದೈನಂದಿನ ಕೆಲಸ 'ಕಾರ್ಯ'ಗಳನ್ನು ನಿರ್ಮಿಸಲು ತೊಡಗಿದ್ದರಿಂದ ಈ ಪ್ರದೇಶವೇ "ಕಾರ್ಯ" ಗ್ರಾಮ ಎಂದು ಹೆಸರು ಪಡೆಯಿತು ಎಂಬುದು ಇಲ್ಲಿನ ಇತಿಹಾಸ.

ಶ್ರೀ ಸಿದ್ದೇಶ್ವರ ಸ್ವಾಮಿ ದೇವಸ್ಥಾನವು ತನ್ನದೇ ಆದ ಐತಿಹಾಸಿಕ ಇತಿಹಾಸವನ್ನು ಹೊಂದಿದೆ. ಅನೇಕರಿಂದ ಚೋಳ ಸಾಮ್ರಾಜ್ಯದ ಶ್ರೇಷ್ಠ ರಾಜ ಎಂದು ಪರಿಗಣಿಸಲ್ಪಟ್ಟಿರುವ ರಾಜ ರಾಜ ಚೋಳನು, ದಕ್ಷಿಣ ಭಾರತದ ರಾಜ್ಯಗಳನ್ನು ವಶಪಡಿಸಿಕೊಳ್ಳುವ ಮೂಲಕ ಚೋಳ ಸಾಮ್ರಾಜ್ಯವನ್ನು ಸಾಮ್ರಾಜ್ಯವಾಗಿ ಬೆಳೆಯಲು ಅಡಿಪಾಯ ಹಾಕಿದರು. ಮತ್ತು ಚೋಳ ಸಾಮ್ರಾಜ್ಯವು ದಕ್ಷಿಣದಲ್ಲಿ ಶ್ರೀಲಂಕಾ ಮತ್ತು ಈಶಾನ್ಯದಲ್ಲಿ ಕಳಿಂಗ (ಒರಿಸ್ಸಾ) ವರೆಗೆ ವಿಸ್ತರಿಸಿತು. 10ನೇ ಶತಮಾನದಲ್ಲಿ

ಚೋಳರ ಕಾಲದ ದೊರೆಯಾಗಿದ್ದ ರಾಜರಾಜ ಚೋಳನು ಯುದ್ಧಕ್ಕೆಂದು ಹೋಗುತ್ತಿದ್ದಾಗ ರಾಜನಿಗೆ ಮತ್ತು ಆತನ ಪಡೆಗೆ ತುಂಬಾ ದಾಹವಾಗಿ ಕುಡಿಯಲು ನೀರು ಸಿಗದಿರಲು ಬೆಟ್ಟದ ಮೇಲೆ ನೆಲೆಸಿದ್ದ ಸಿದ್ದೇಶ್ವರ ಸ್ವಾಮಿಗಳನ್ನು ಕಂಡು ತಮ್ಮ ದಾಹದ ಬಗ್ಗೆ ಕೇಳಿದಾಗ ಶ್ರೀ ಸಿದ್ದೇಶ್ವರರು ತಮ್ಮ ಮಂತ್ರ ಶಕ್ತಿಯಿಂದ ತಮ್ಮ ಕಮಂಡಲದಿಂದಲೇ ರಾಜ ಸೈನಿಕರು ಮತ್ತು ಆನೆ ಕುದುರೆಗಳಿಗೆ ನೀರನ್ನು ನೀಡಿ ಅವರ ದಾಹವನ್ನು ಇಂಗಿಸಿದ ಪರಿಣಾಮವಾಗಿ



ದೀಪಾವಳಿ ಹಬ್ಬದ ಮಾರನೇ ದಿನ ಪ್ರಾರಂಭವಾಗುವ ಶ್ರೀ ಸಿದ್ದೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವ ಸುಮಾರು ಮೂರು ದಿನಗಳ ಕಾಲ ನಡೆಯುತ್ತದೆ. ನ.11 ರಂದು ಬುಧವಾರ ಬೆಳಿಗ್ಗೆ 9 ಗಂಟೆಗೆ ಶ್ರೀ ಸಿದ್ದೇಶ್ವರ ಸ್ವಾಮಿಯ ಪಲ್ಲಕ್ಕಿ ಉತ್ಸವ ಗ್ರಾಮದಿಂದ ಬೆಟ್ಟಕ್ಕೆ ತೆಗೆದುಕೊಂಡು ಹೋಗಲಾಗುತ್ತದೆ.

ನಂತರ ಸುಮಾರು 25 ಅಡಿ ಎತ್ತರದ ಖುರ್ಜು (ತೇರು) ತಯಾರು ಮಾಡಿ ವಸ್ತ್ರಲಂಕಾರ, ಹೂವಿನ ಅಲಂಕಾರಗಳಿಂದ ಆ ತೇರನ್ನು ಶೃಂಗರಿಸಿ ಕಳಸರೋಹಣ ಮಾಡಿ ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಆರು ಅಡಿ ಎತ್ತರದ ರಥದ ಸಹಾಯದಿಂದ ಕಾರ್ಯ ಗ್ರಾಮದ ಕೊನೆಯ ಭಾಗದವರೆಗೂ ಆ ರಥವನ್ನು ಎಳೆದುಕೊಂಡು ಹೋಗಿ ತದನಂತರ ಎರಡು ಟನ್ ಭಾರವುಳ್ಳ ತೇರನ್ನು ಸುಮಾರು 200ಕ್ಕೂ ಹೆಚ್ಚು ಜನರು ಹೆಗಲ ಮೇಲೆ ಹೊತ್ತು ಸುಮಾರು 600 ಅಡಿ ಎತ್ತರದ ಶ್ರೀ ಸಿದ್ದೇಶ್ವರ ಬೆಟ್ಟಕ್ಕೆ ಹೊತ್ತುಕೊಂಡು ಹೋಗುತ್ತಾರೆ.

ಅದನ್ನು ವೀಕ್ಷಿಸಲು ಭಕ್ತರು ಲಕ್ಷಾಂತರ ಸಂಖ್ಯೆಯಲ್ಲಿ ರಾಜ್ಯದ ನಾನಾ ಭಾಗಗಳಿಂದ ಆಗಮಿಸುತ್ತಾರೆ. ಶ್ರೀ ಸಿದ್ದೇಶ್ವರ ಸ್ವಾಮಿಗೆ ಉಘೇ ಉಘೇ ಎಂದು ಜೈಕಾರ ಹಾಕುತ್ತ ಹಣ್ಣು ಜವನ ಎಸೆದು ತಮ್ಮ ಹರಕೆಗಳನ್ನು ತೀರಿಸುತ್ತಾರೆ. ನ. 12 ರಂದು ಗುರುವಾರ ಪಲ್ಲಕ್ಕಿ ಉತ್ಸವ, ಪಂಚ ದೇವರುಗಳ ಉತ್ಸವ ಮೂರ್ತಿಗಳ ಮೆರವಣಿಗೆ ಗ್ರಾಮದಲ್ಲಿ ನಡೆಯುತ್ತದೆ. ನ.13 ರಂದು ಶುಕ್ರವಾರ ಗ್ರಾಮದ ದರೋಬರೋ ಕೆರೆಯಲ್ಲಿ ರಾತ್ರಿ 8 ಗಂಟೆಗೆ ಶ್ರೀ ಸ್ವಾಮಿಯ ತೆಪ್ಪೋತ್ಸವ ಜರುಗಲಿದೆ. ನ.18 ರಂದು ಬುಧವಾರ ಶ್ರೀ ಸಿದ್ದೇಶ್ವರ ಸ್ವಾಮಿಯ ಬೆಟ್ಟದಲ್ಲಿ ಚಿಕ್ಕ ಜಾತ್ರಾ ಮಹೋತ್ಸವ ನಡೆಸಲಾಗುತ್ತದೆ.

ಹರುಷಗೊಂಡ ರಾಜರಾಜ ಚೋಳನು ಶ್ರೀ ಸಿದ್ದೇಶ್ವರ ಸ್ವಾಮಿಗಳು ನೆಲೆಸಲು ಬೆಟ್ಟದ ಮೇಲೆ ದೇವಸ್ಥಾನ ನಿರ್ಮಿಸಿಕೊಟ್ಟಿದ್ದಾನೆ. ಈಗಿರುವ ದೇವಾಲಯವೇ ಶ್ರೀ ಸಿದ್ದೇಶ್ವರ ಸ್ವಾಮಿಯ ದೇವಾಸ್ಥಾನವಾಗಿದೆ.

ದೇವಸ್ಥಾನ ಪಕ್ಕದಲ್ಲಿ ಮಜ್ಜಣದ ಸಣ್ಣ ಕೊಳವಿದ್ದು ಅದರಲ್ಲಿ ನೀರು ತುಂಬಿರುತ್ತದೆ. ಈ ಕೊಳದ ನೀರಿನಲ್ಲಿಯೇ ಶ್ರೀ ಸಿದ್ದೇಶ್ವರರು ಮಜ್ಜನಕ್ಕೆ ನೀರನ್ನು ಉಪಯೋಗಿಸುತ್ತಿದ್ದರು. ಒಂದು ದಿನ ಪೂಜೆ ಮಾಡಿದ ನಿಂಬೆಹಣ್ಣು, ಎಲೆ ಅಡಿಕೆ ಹೂವನ್ನು ಹಾಕಿ ಆ ಕೊಳದಲ್ಲಿ ಬಿಟ್ಟರಂತೆ ಅವುಗಳೆಲ್ಲವೂ ಸುತ್ತೂರು ಕಾಡು ಮಠದ ಬಳಿ ಕಪಿಲಾ ನದಿಯಲ್ಲಿ ತೇಲುತ್ತಿದ್ದು ಕಂಡು ಬಂತೆಂದು ಪ್ರತೀತಿ ಇದೆ.

ಈ ಹಿನ್ನಲೆಯಲ್ಲಿ ಪ್ರತಿ ಭಾನುವಾರ ಮತ್ತು ಅಮಾವಾಸ್ಯೆ ದಿನದಂದು ದೇವಾಲಯದ ಅರ್ಚಕರು ಕಾಲ್ನಡಿಗೆಯಲ್ಲಿ ನಡೆದುಕೊಂಡು ಸುತ್ತೂರಿನ ಕಪಿಲಾ ನದಿಗೆ ಮಧ್ಯರಾತ್ರಿ ತೆರಳಿ ಪೂಜೆ ಪುನಸ್ಕಾರಗಳನ್ನು ಮಾಡಿ ತಾಮ್ರದ ಬಿಂದಿಗೆಯಲ್ಲಿ ನೀರು ತಂದು ಬೆಟ್ಟದ ಶ್ರೀ ಸಿದ್ದೇಶ್ವರ ಸ್ವಾಮಿಗೆ ನೀರಿನ ಅಭಿಷೇಕ ಮಾಡಲಾಗುತ್ತದೆ.

ಅನೇಕ ಶತಮಾನಗಳಿಂದ ಇದುವರೆಗೂ ಇದೇ ರೀತಿ ನಡೆಸಿಕೊಂಡು ಬರಲಾಗುತ್ತಿದ್ದು, ಅಂತಹ ಮಧ್ಯರಾತ್ರಿಯಲ್ಲಿ ಹೋದರೂ ಕೂಡ ಯಾವುದೇ ವಿಷಜಂತು ಮಳೆ ಗುಡುಗಿನಂತಹ ತೊಂದರೆ ಮತ್ತು ಯಾವುದೇ ಅಹಿತಕರ ಘಟನೆ ನಡೆದಿರುವುದಿಲ್ಲ ಇದು ಶ್ರೀ ಸಿದ್ದೇಶ್ವರ ಸ್ವಾಮಿಯ ಕೃಪಾಕಟಾಕ್ಷ ಎಂಬುದು ಅರ್ಚಕರ ಮಾತಾಗಿದೆ.



ಒಂದು ದಿನ ಬೆಟ್ಟದ ತಪ್ಪಲಿನಲ್ಲಿ ದನ–ಕರುಗಳನ್ನು ದನಗಾಹಿ ವ್ಯಕ್ತಿಯೊಬ್ಬ ಮೇಸುತಿದ್ದ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ದನ ಕರುಗಳು ಸತ್ತು ಬಿದ್ದವು.

ಅದನ್ನು ನೋಡಿದ ದನಗಾಹಿ ವ್ಯಕ್ತಿ ಶ್ರೀ ಸಿದ್ದೇಶ್ವರ ಸ್ವಾಮಿಯನ್ನು ಪ್ರಾರ್ಥಿಸಿದ ಪ್ರಾರ್ಥನೆಯನ್ನು ಆಲಿಸಿದ ಶ್ರೀ ಸಿದ್ದೇಶ್ವರರು ವೃದ್ಧನ ರೂಪದಲ್ಲಿ ಬಂದು ಆತನ ಮೊರೆ ಕೇಳಿ ಬೆಟ್ಟದ ಮೇಲಿರುವ ಮಜ್ಜನದ ಕೊಳದ ನೀರನ್ನು ತಂದು ದನ ಕರುಗಳಿಗೆ ಚಿಮುಕಿಸು ಎಂದು ಶ್ರೀ ಸ್ವಾಮಿಯು ಹೇಳಿದರಂತೆ. ಅವರ ಮಾತನ್ನು ಕೇಳಿದ ವ್ಯಕ್ತಿ ನೀರನ್ನು ಹಾಕಿದನಂತೆ ಸತ್ತು ಬಿದ್ದಿದ್ದ ದನ ಕರುಗಳು ಎಂದು ನಿಂತವಂತೆ ನಂತರ ಕೃತಜ್ಞತೆ ಸಲ್ಲಿಸುವ ಸಲುವಾಗಿ ಆ ವೃದ್ಧನ ಬಳಿ ಹೋದಾಗ ಸ್ವಾಮಿ ಮಾಯವಾಗಿದ್ದರಂತೆ ಎಂಬ ಕಥೆ ಈ ಭಾಗದಲ್ಲಿ ಪ್ರಸಿದ್ಧಿ ಪಡೆದಿದೆ.

ಆದ್ದರಿಂದಲೇ ಶ್ರೀ ಸಿದ್ದೇಶ್ವರ ಸ್ವಾಮಿಯ ಜಾತ್ರೆಯ ಇಂದಿನ ದಿನವೇ ದನಕರುಗಳನ್ನು ಬೆಟ್ಟದ ತಪ್ಪಲಿನಲ್ಲಿರುಸುತ್ತಾರೆ.ಮುಂಜಾನೆ ಶ್ರೀ ಸಿದ್ದೇಶ್ವರ ಸ್ವಾಮಿಗೆ ದೂರದ ಗ್ರಾಮಗಳಿಂದ ಜನರು ಕಾಲ್ನಡಿಗೆಯಿಂದ ದನ ಕರುಗಳೊಂದಿಗೆ ಬಂದು, ಜಾನುವಾರುಗಳ ಕೊಂಬಿಗೆ ಪಂಜು ಕಟ್ಟಿ ಪಂಜಿನ ಸೇವೆ ಮಾಡಿಸುತ್ತಿರುವುದು ಇಂದಿಗೂ ಕೂಡ ನಡೆದುಕೊಂಡು ಬರುತ್ತಿದೆ.

ಇದರಿಂದ ದನ ಕರುಗಳಿಗೆ ಯಾವುದೇ ರೀತಿ ರೋಗ ರುಜಿನಗಳು ಬರುವುದಿಲ್ಲ ಎಂಬ ಅಚಲವಾಗಿ ರೈತರ ನಂಬಿಕೆಯಾಗಿದೆ. ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವವನ್ನು ಕಾರ್ಯ, ಬಾಣೂರು, ಅರಳಿಕಟ್ಟೆ ಹುಂಡಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತದೆ.

ಚೋಳರ ಕಾಲದಲ್ಲಿ ಶ್ರೀ ಸಿದ್ದೇಶ್ವರ ಸ್ವಾಮಿ ಯವರ ದೇವಾಲಯ ನಿರ್ಮಾಣವಾಗಿದೆ. ಕಾರ್ಯ ಗ್ರಾಮದಲ್ಲಿ ಐಕ್ಯವಾಗಿ ನೆಲೆಸಿದ್ದಾರೆ. ಈ ಭಾಗದ ಮನೆದೇವರಾಗಿ ಶ್ರೀ ಸಿದ್ದೇಶ್ವರ ಸ್ವಾಮಿಯವರು ಎಲ್ಲರ ಮನೆ ಮತ್ತು ಮನದಲ್ಲಿದ್ದಾರೆ. ಈ ದೇವಾಲಯದಲ್ಲಿ ಚಂಡಿಕೇಶ್ವರಿ, ಮನ್ಮಥಕಾಳಿ ದೇವರ ವಿಗ್ರಹವಿದೆ. ಸಿದ್ದೇಶ್ವರ ಸ್ವಾಮಿಗೆ ಮೂರು ಕಣ್ಣಿದೆ. ಕೈಯಲ್ಲಿ ಡಮರುಘ, ಕತ್ತಿ, ತ್ರಿಶೂಲ ಆಯುಧ ಇವೆ. ನಾಗರ ಹಾವಿನ ಜನಿವಾರ, ಕೇರೆ ಹಾವಿನ ನಡುಕಟ್ಟು, ಹೆಬ್ಬಾವಿನ ಗದ್ದಿಗೆ ಮೇಲೆ ಶ್ರೀ ಸಿದ್ದೇಶ್ವರರು ಐಕ್ಯವಾಗಿದ್ದಾರೆ. ಜೇನುಕಲ್ಲು ಶ್ರೀ ಸಿದ್ದೇಶ್ವರ ಸ್ವಾಮಿಯ ಬೆಟ್ಟದಲ್ಲಿ ಅವರ ಪಾದವಿದೆ. ಆದರೆ ಸಿದ್ದೇಶ್ವರರು ಕಾರ್ಯ ಬೆಟ್ಟಕ್ಕೆ ಬಂದು ನೆಲೆಗೊಂಡು ಐಕ್ಯವಾಗಿದ್ದಾರೆ. ಪ್ರತಿ ಭಾನುವಾರ ಮತ್ತು ಅಮಾವಾಸ್ಯೆಯ ದಿನಗಳಲ್ಲಿ ವಿಶೇಷ ಪೂಜೆ ಮಾಡಲಾಗುತ್ತದೆ. ಪ್ರತಿ ವರ್ಷ ದೀಪಾವಳಿ ಹಬ್ಬದ ಮಾರನೇ ದಿನ ಸುತ್ತಮುತ್ತಲಿನ ಗ್ರಾಮಸ್ಥರು ಸಡಗರ ಸಂಭ್ರಮದಿಂದ ಜಾತ್ರೆಯನ್ನು ಆಚರಣೆ ಮಾಡಿಕೊಂಡು ಬರಲಾಗುತ್ತಿದೆ.



ದೀಪದ ಮಹತ್ವ

ದೀಪಜ್ಯೋತಿ ಪರಬ್ರಹ್ಮ
ದೀಪಂ ಮೃತ್ಯುವಿನಾಷಣಂ
ದೀಪೇನ ಸರ್ವತೇ ಸಾಧ್ಯಮ್ ಸಂಧ್ಯಾದೀಪಂ ನಮೋಸ್ತುತೇ॥



। ಗಿರಿಜಾ.ಎಸ್. ದೇಶಪಾಂಡೆ. ಸಾಹಿತ್ಯ ಶ್ರೀ. ಬೆಂಗಳೂರು.

ನಮ್ಮ ಆಚಾರ,ವಿಚಾರ,ಸಂಪ್ರದಾಯಗಳಲ್ಲಿ ಹಿಂದೂ ಧರ್ಮವನ್ನು ನಮ್ಮ ತಾಯಿ ಎನ್ನಬಹುದು.ದೇವರ ಆರಾಧನೆಗೆ ದೀಪ ಅಥವಾ ಜ್ಯೋತಿಯನ್ನು ಬೆಳಗುತ್ತೇವೆ.ದೀಪ ಬೆಳಗಿ ದೇವರನ್ನು ಪ್ರಾರ್ಥಿಸುವದರಿಂದ ನಮ್ಮ ಇಷ್ಟಾರ್ಥ ಸಿದ್ಧಿಸುವವು. ಎಂಬ ನಂಬಿಕೆ ನಮ್ಮಲ್ಲಿದೆ. ಮದುವಾಯಾದವರಿಗೆ ಮನೆಬೆಳಗಲು,ವಂಶಮುಂದುವರಡಯಲು ದೀಪ ಬೆಳಗಿದರೆ ಮದುವೆಯಾಗದವರು ಮದುವೆಯಾಗಲಿ ಎಂದು ಭಗವಂತನಿಗೆ ದೀಪ ಬೆಳಗುತ್ತಾರೆ. ಕಾರ್ಯಸಿದ್ಧಿಸಲು ದೀಪ ಬೆಳಗುವ ಪದ್ಧತಿ ನಮ್ಮಲ್ಲಿದೆ.

ದೀಪದ ಹಿನ್ನೆಲೆ– ನಂಬಿಕೆಗಳ ಪ್ರಕಾರ ರಾಜರಾಜೇಶ್ವರಿದೇವಿಯು ದೀಪದಲ್ಲಿ ನೆಲಸಿರುತ್ತಾಳೆ. ಈಕೆಯು ದುರ್ಗಾ,ಲಕ್ಷ್ಮಿ,ಸರಸ್ವತಿ ದೇವಿಯ ಅಂಶವನ್ನು ಹೊಂದಿರುವ ದೇವಿಯು.ದೀಪಲಕ್ಷ್ಮಿಯನ್ನು ಲಕ್ಷ್ಮಿಯ ಅವತಾರವೆಂದು ಕುಂಕುಮಾರ್ಚನೆ,ಪುಷ್ಪಾರ್ಚನೆ,ಅಕ್ಷತೆಯಿಂದ ಅರ್ಚನೆ ,ಸ್ತೋತ್ರದ ಮೂಲಕ ಅರ್ಚನೆ ಮಾಡಲಾಗುತ್ತದೆ.

ದೀಪಗಳನ್ನು ಬೆಳಗುವ ತತ್ವ– ದೀಪ ಬೆಳಗುವ ಹಿಂದೆ ಆಳವಾದ ತತ್ವ ಅಡಗಿದೆ. ನಮಗೆ ಇರುವ ದುಃಖ ಹೋಗಲಾಡಿಸಿ ಸಂತೋಷ ಬರಮಾಡಿಕೊಳ್ಳಲು ದೀಪ ಬೆಳಗುತ್ತೇವೆ.ಜೀವನದಲ್ಲಿಯ ಅಂಧಕಾರ ತೊರೆದು ಬೆಳಕಿನೆಡೆಗೆ ಸಾಗಲು ದೀಪ ಬೆಳಗುತ್ತೇವೆ. ಜ್ಞಾನದ ಬೆಳಕನ್ನು ನೀಡಿ ಅಜ್ಞಾನದ ಅಂಧಕಾರ ಓಡಿಸಲು ದೀಪಲಕ್ಷ್ಮಿಯನ್ನು ಪ್ರಾರ್ಥಿಸುತ್ತೇವೆ.

ಮಹತ್ವ– ದೀಪದ ತಳಭಾಗ– ಬ್ರಹ್ಮದೇವ.
ದೀಪಸ್ತಂಬ– ವೆಂಕಟೇಶ್ವರ
ಎಣ್ಣೆ ತುಪ್ಪ ಹಾಕುವ ಭಾಗ– ರುದ್ರ
ಬತ್ತಿಯನ್ನು ಇಡುವ ಭಾಗ– ಮಹೇಶ್ವರ
ಬತ್ತಿಯ ತುದಿಯ ಭಾಗ– ಸದಾಶಿವ
ದೀಪ ಬೆಳಗಿದಾಗ ದೇವಾನುದೇವತೆಯರು

ಪ್ರೀತಿ,ಬುದ್ಧಿವಂತಿಕೆ,ದೃಢನಿಶ್ಚಯ,ತಾಳ್ಮೆ,ಎಚ್ಚರಿಕೆ ನೀಡುತ್ತಾಳೆ.ದೀಪಗಳು ಅದೃಷ್ಟದ ಸಂಕೇತ.ಹಿಂದೂ ಸಂಪ್ರದಾಯದಲ್ಲಿ ದೀಪವನ್ನು ಮಹಾಲಕ್ಷ್ಮಿಯ ಸಂಕೇತವೆಂದು ಹೇಳಲಾಗಿದೆ.ದೀಪ ಪೂರ್ವಾಭಿಮುಖವಾಗಿ ಇಟ್ಟರೆ ಆಯಸ್ಸು ವೃದ್ಧಿ,ಉತ್ತರಾಭಿಮುಖವಾಗಿದ್ದರೆ ಹಣ ವೃದ್ಧಿ,ಪಶ್ಚಿಮಾಭಿಮುಖವಾಗಿದ್ದರೆ ದುಃಖ,ದಕ್ಷಿಣಾಭಿಮುಖವಾಗಿದ್ದರೆ ಹಾನಿ.ದೀಪ ನಾಲ್ಕು ದಿಕ್ಕಿನಲ್ಲಿದ್ದರೆ ಶುಭದ ಸಂಕೇತ.

ಹೃದಯದ ಕತ್ತಲೆ ಕಳೆಯೋಣ
ಮನಸಿನ ಜ್ಯೋತಿ ಹತ್ತಿಸೋಣ
ದ್ವೇಷವ ದೂರಗೊಳಿಸಿ
ಪ್ರೀತಿಯ ಜ್ಯೋತಿ ಎಲ್ಲೆಡೆ ಬೆಳಗೋಣ. ದೀಪ ಮನದಲ್ಲಿ ಮನೆಯಲ್ಲಿ ಬೆಳಗಿ ನಮ್ಮ ಜೀವನವನ್ನು ಮುಂದುವರೆಸೋಣ.ಎಲ್ಲರಿಗೂ ಶುಭವಾಗಲಿ.



ಹುಟ್ಟಿದ ಕನ್ನಡ ನಾಡಲ್ಲೇ ಕನ್ನಡ ಉಳಿಸಿ ಎಂಬುದು ಖೇದಕರ



ಡಾ. ಪ್ರಸನ್ನ ದೇವರ ಮಠ
ಅನಿಲಕುಮಾರ್, ಮಾಗಳ

ಹುಟ್ಟಿದ ಕನ್ನಡ ನಾಡಲ್ಲೇ ಕನ್ನಡ ಉಳಿಸಿ ಎಂಬುದು ಖೇದಕರ ಒಂದು ಭಾಷೆ ಕೇವಲ ಶಬ್ದಗಳ ಸಂತೆ ಅಲ್ಲ; ಅದು ಒಂದು ಇಡೀ ಜನಾಂಗದ ಉಸಿರು, ಸಂಸ್ಕೃತಿ, ಆಚಾರ–ವಿಚಾರಗಳ ಜೀವಂತ ಕನ್ನಡಿ. ಕೋಟ್ಯಂತರ ಹೃದಯಗಳು ಒಂದಾಗಿ ಮಿಡಿದು, ನೂರಾರು ತಲೆಮಾರುಗಳು ಸವೆದು, ಸಹಸ್ರಾರು ವರುಷಗಳ ಕಾಲ ತಿದ್ದಿ–ತೀಡಿದಾಗ ಮಾತ್ರ ಇಂಥದ್ದೊಂದು ಭವ್ಯ ನುಡಿ ರೂಪುಗೊಳ್ಳಲು ಸಾಧ್ಯ. ಎರಡು ಸಾವಿರಕ್ಕೂ ಮೀರಿದ ಸುದೀರ್ಘ ಇತಿಹಾಸ, ಶಿಲಾಶಾಸನಗಳ ಗಾಂಭೀರ್ಯ, ಕವಿ–ಸಾಹಿತಿಗಳ ಅಕ್ಷರ ತಪಸ್ಸು ಹಾಗೂ ಕೋಟ್ಯಂತರ ಜನಸಾಮಾನ್ಯರ ಆಡುನುಡಿಯಾಗಿ ಬೆಳೆದು ಬಂದಿರುವ ಕಸ್ತೂರಿ ಕನ್ನಡ, ಜಗತ್ತಿನ ಅತ್ಯಂತ ವೈಜ್ಞಾನಿಕ ಹಾಗೂ ಸುಂದರ ಭಾಷೆಗಳಲ್ಲಿ ಮುಂಚೂಣಿಯಲ್ಲಿದೆ. ಆದರೆ, ಇಂಥ ಸಿರಿಗನ್ನಡದ ತೊಟ್ಟಿಲಾದ ಕರುನಾಡಿನಲ್ಲೇ ನಿಂತು, "ಕನ್ನಡ ಉಳಿಸಿ, ಕನ್ನಡ ಬೆಳೆಸಿ" ಎಂದು ಗೋಗರೆಯುವ, ಚಳವಳಿ ಹೂಡುವ ಪರಿಸ್ಥಿತಿ ಒದಗಿಬಂದಿರುವುದು ಪ್ರತಿಯೊಬ್ಬ ಕನ್ನಡಿಗನ ಎದೆಯನ್ನೂ ಕಲಕುವ ಪರಮ ದುರಂತ.

ಅಕ್ಷರ ಶಿಲ್ಪಿಗಳ ತಪಸ್ಸಿಗೆ ನಾವು ಕೊಡುವ ಬೆಲೆ ಇದೆಯೇ?

ಕನ್ನಡ ಭಾಷೆ ಒಂದೆರಡು ದಿನಗಳಲ್ಲಿ ಮೂಡಿಬಂದದಲ್ಲ. ಹಲ್ಮಿಡಿಯ ಶಾಸನದ ಅಕ್ಷರ ವಿನ್ಯಾಸದಿಂದ ಹಿಡಿದು, ಪಂಪ–ರನ್ನರ ಕಾವ್ಯ ಪ್ರೌಢಿಮೆ, ಬಸವಾದಿ ಶರಣರ ಸರಳ–ನೇರ ವಚನ ಕ್ರಾಂತಿ, ದಾಸರ ಅನುಭಾವ ಗೀತೆಗಳು ಹಾಗೂ ಆಧುನಿಕ ಕವಿ–ಸಾಹಿತಿಗಳ ಚಿಂತನೆಗಳವರೆಗೂ ಕನ್ನಡದ ಬೇರುಗಳು ಆಳವಾಗಿ ಹರಡಿಕೊಂಡಿವೆ. ಭಾಷಾ ವಿಜ್ಞಾನಿಗಳು, ಸಾಹಿತ್ಯ ದಿಗ್ಗಜರು ಹಾಗೂ ಕಾಯಕಜೀವಿಗಳು ತಮ್ಮ ರಕ್ತ–ಬೆವರು ಸುರಿಸಿ ಕಟ್ಟಿಕೊಟ್ಟ ಸುಲಲಿತ ಭಾಷೆಯಿದು.


ಅಂದಿನ ಹಿರಿಯರು ಅಕ್ಷರ–ಭಾವಗಳನ್ನು ಜೋಡಿಸಿ ನಮಗೆ ಅಪಾರ ಜ್ಞಾನನಿಧಿಯನ್ನು ಧಾರೆ ಎರೆದರು. ಆದರೆ ಇಂದು ನಾವೇನು ಮಾಡುತ್ತಿದ್ದೇವೆ? ಆಡಿದರೆ ಕನ್ನಡ, ಬರೆದರೆ ಕನ್ನಡ ಎನ್ನುವ ಸ್ವಾಭಿಮಾನ ನಮ್ಮಲ್ಲಿ ಎಷ್ಟು ಉಳಿದಿದೆ? ಅನ್ನ ಕೊಡುವ ನೆಲದ ಭಾಷೆಯನ್ನು ಮನೆಯಲ್ಲಾಗಲಿ, ಮನದಲ್ಲಾಗಲಿ ಗೌರವಿಸದಿದ್ದರೆ, ಆ ಭಾಷೆಗೆ ನಾವೆಸಗುವ ದ್ರೋಹಕ್ಕಿಂತ ದೊಡ್ಡ ಅಪಚಾರ ಇನ್ನೊಂದಿರಲಾರದು.

ಕೇವಲ ನವೆಂಬರ್ ಉತ್ಸವವಲ್ಲ, ಇದು ನಿತ್ಯದ ಜೀವಧಾತು

ಕನ್ನಡವೆಂದರೆ ಕೇವಲ ನವೆಂಬರ್ ತಿಂಗಳಲ್ಲಿ ಹಾರಾಡುವ ಹಳದಿ–ಕೆಂಪು ಬಾವುಟವಲ್ಲ; ವೇದಿಕೆಗಳ ಮೇಲೆ ಮೊಳಗುವ ಆವೇಶದ ಭಾಷಣಗಳೂ ಅಲ್ಲ. ಅದು ನಮ್ಮ ದೈನಂದಿನ ಜೀವನದ ಉಸಿರಾಗಬೇಕು.

ವ್ಯವಹಾರದಲ್ಲಿ ಕನ್ನಡ: ಅಂಗಡಿಯ ನಾಮಫಲಕದಿಂದ ಆರಂಭಿಸಿ ಕಚೇರಿಯ ಕಡತಗಳವರೆಗೆ, ಬ್ಯಾಂಕಿಂಗ್ ವ್ಯವಹಾರದಿಂದ ಮಾರುಕಟ್ಟೆಯ ಚೌಕಾಶಿಯವರೆಗೆ ಕನ್ನಡ ಸಾರ್ವಭೌಮವಾಗಿ ರಾರಾಜಿಸಬೇಕು.

ಮನೆಯಂಗಳದಲ್ಲಿ ಮಾತು: ಪರಭಾಷಾ ವ್ಯಾಮೋಹಕ್ಕೆ ಮಾರುಹೋಗಿ



ಮನೆಯಲ್ಲೇ ಮಕ್ಕಳೊಂದಿಗೆ ಅನ್ಯಭಾಷೆಯಲ್ಲಿ ವ್ಯವಹರಿಸುವ ಗುಲಾಮಿ ಮನಸ್ಥಿತಿಯಿಂದ ಮೊದಲು ಮುಕ್ತಿ ಪಡೆಯಬೇಕಿದೆ. ತಾಯ್ನುಡಿಯಲ್ಲಿ ಚಿಂತಿಸುವ ಮಗು ಜಗತ್ತಿನ ಯಾವುದೇ ಜ್ಞಾನವನ್ನಾದರೂ ಸಲೀಸಾಗಿ ದಕ್ಕಿಸಿಕೊಳ್ಳಬಲ್ಲದು.

ತಂತ್ರಜ್ಞಾನ ಮತ್ತು ಶಿಕ್ಷಣ: ಡಿಜಿಟಲ್ ಜಗತ್ತು, ಅಂತರ್ಜಾಲ ಹಾಗೂ ಆಧುನಿಕ ತಂತ್ರಜ್ಞಾನಗಳಲ್ಲಿ ಕನ್ನಡದ ಹೆಜ್ಜೆಗುರುತುಗಳು ಗಟ್ಟಿಯಾಗಬೇಕು. ಶಿಕ್ಷಣವು ಕನ್ನಡದ ಅಡಿಪಾಯದ ಮೇಲೆಯೇ ನಿಲ್ಲಬೇಕು.

ನೆಲ–ಜಲ–ನುಡಿಯ ಒಡಲ ಮಿಡಿತ

ನಮ್ಮ ನಾಡು ಕೇವಲ ಭೌಗೋಳಿಕ ಗಡಿಯಲ್ಲ; ಕಾವೇರಿ, ತುಂಗಭದ್ರೆ, ಕೃಷ್ಣೆಯರು ಹರಿದು ಹಸಿರಾಗಿಸಿದ ಪುಣ್ಯಭೂಮಿ. ಈ ಮಣ್ಣಿನ ಅನ್ನ ತಿಂದು, ಈ ನದಿಗಳ ನೀರು ಕುಡಿದು, ಇಲ್ಲೇ ಉಸಿರಾಡುವ ಪ್ರತಿಯೊಬ್ಬರಿಗೂ ಈ ನೆಲದ ನುಡಿಗೆ ತಲೆಬಾಗುವ ನೈತಿಕ ಹೊಣೆಗಾರಿಕೆಯಿದೆ.

ಬೇರೆ ಭಾಷೆಯನ್ನು ಕಲಿಯುವುದು ಜ್ಞಾನದ ವಿಸ್ತಾರಕ್ಕೆ ಒಳ್ಳೆಯದೇ ಇರಬಹುದು, ಆದರೆ ಪರಭಾಷೆಯ ವ್ಯಾಮೋಹಕ್ಕೆ ಬಿದ್ದು ಹೆತ್ತ ತಾಯಿಯಂತಿರುವ ತಾಯ್ನುಡಿಯನ್ನು ಕಡೆಗಣಿಸುವುದು ಆತ್ಮವಂಚನೆ. ಅನ್ಯಭಾಷೆಯನ್ನು ಗೌರವಿಸೋಣ, ಆದರೆ ಕನ್ನಡದ ಆತ್ಮಾಭಿಮಾನವನ್ನು ಎಂದಿಗೂ ಅಡವಿಡದಿರೋಣ.

ಕನ್ನಡವನ್ನು ಯಾರೋ ಬಂದು ರಕ್ಷಿಸುತ್ತಾರೆ, ರಾಜಕಾರಣಿಗಳೋ ಅಥವಾ ಸಂಘಟನೆಗಳೋ ಬಂದು ಭಾಷೆಯನ್ನು ಬದುಕಿಸುತ್ತಾರೆ ಎಂದು ಕಾಯುವುದರಲ್ಲಿ ಅರ್ಥವಿಲ್ಲ. "ಕನ್ನಡ ಉಳಿಸಿ" ಎಂಬ ಅಸಹಾಯಕ ರೋದನ ನಿಲ್ಲಬೇಕಾದರೆ, ಪ್ರತಿಯೊಬ್ಬ ಕನ್ನಡಿಗನೂ ತನ್ನ ಮನೆಯಲ್ಲಿ, ಕೆಲಸದ ಸ್ಥಳದಲ್ಲಿ, ಸಾಮಾಜಿಕ ಬದುಕಿನಲ್ಲಿ ಕನ್ನಡವನ್ನೇ ಆಡಬೇಕು, ಓದಬೇಕು, ಬರೆಯಬೇಕು. ಕನ್ನಡ ನಮ್ಮ ಆಯ್ಕೆಯಲ್ಲ, ಅದು ನಮ್ಮ ಅಸ್ತಿತ್ವ. ಕನ್ನಡವನ್ನು ಉಳಿಸುವ ಮಾತು ಬಿಟ್ಟು, ಕನ್ನಡದಲ್ಲೇ ಬದುಕುವ ಸಂಕಲ್ಪ ನಮ್ಮದಾಗಲಿ.

"ಮಾತಾಡುವ ನಾಲಿಗೆ ಕನ್ನಡವಾಗಲಿ, ಬರೆಯುವ ಬೆರಳುಗಳು ಕನ್ನಡವಾಗಲಿ; ಎದೆಯ ಬಡಿತದ ಪ್ರತಿಯೊಂದು ಮಿಡಿತವೂ 'ಸಿರಿಗನ್ನಡಂ ಗೆಲ್ಗೆ' ಎಂದೇ ಮೊಳಗಲಿ."

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆ

ಎಂಟು ಜ್ಞಾನಪೀಠಗಳ ಪ್ರಶಸ್ತಿ ಪಡೆದ ಕನ್ನಡ: ಮುಂದಿನ ಪೀಳಿಗೆಗೆ ನಮ್ಮ ಕೊಡುಗೆ ಏನು?



। ಸ್ವಾಮಿನಾಥನ್

ಕನ್ನಡ ಸಾಹಿತ್ಯಕ್ಕೆ ದೊರೆತ ಎಂಟು ಜ್ಞಾನಪೀಠ ಪ್ರಶಸ್ತಿಗಳು ಕನ್ನಡ ಸಾಹಿತ್ಯ ಸಂಪತ್ತಿಗೆ ಸಂದ ಅತ್ಯಮೂಲ್ಯ ಗೌರವ. ಅವು ಕನ್ನಡ ಭಾಷೆಯ ಸೃಜನಶೀಲತೆ, ಚಿಂತನೆಯ ಆಳ, ಸಾಂಸ್ಕೃತಿಕ ವೈವಿಧ್ಯ ಮತ್ತು ಅಭಿವ್ಯಕ್ತಿ ಸಾಮರ್ಥ್ಯಕ್ಕೆ ದೊರೆತ ರಾಷ್ಟ್ರೀಯ ಮನ್ನಣೆ. ರಾಷ್ಟ್ರದ ಅತ್ಯುನ್ನತ ಸಾಹಿತ್ಯ ಗೌರವವನ್ನು ಕನ್ನಡ ಎಂಟು ಬಾರಿ ಪಡೆದಿರುವುದು ನಮ್ಮೆಲ್ಲರ ಹೆಮ್ಮೆಯ ಸಂಗತಿ. ಆದರೆ ಈ ಹೆಮ್ಮೆಯನ್ನು ಸಂಭ್ರಮಿಸುವುದರ ಜೊತೆಗೆ, ಈ ಸಾಹಿತ್ಯ ಸಂಪತ್ತನ್ನು ಮುಂದಿನ ಪೀಳಿಗೆಗೆ ನಾವು ಹೇಗೆ ತಲುಪಿಸುತ್ತಿದ್ದೇವೆ ಎಂಬುದರ ಬಗ್ಗೆ ಚಿಂತಿಸಬೇಕಿದೆ .

ಎಂಟು ಪ್ರಶಸ್ತಿಗಳ ಹಿಂದಿರುವ ಸಾಹಿತ್ಯ ಪರಂಪರೆ

ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ದೊರೆತದ್ದು 1965ರಲ್ಲಿ. ರಾಷ್ಟ್ರಕವಿ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಕೃತಿಗೆ ಈ ಗೌರವ ಲಭಿಸಿತು. ನಂತರ ದ.ರಾ. ಬೇಂದ್ರೆ, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿ.ಕೆ. ಗೋಕಾಕ್, ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್ ಮತ್ತು ಚಂದ್ರಶೇಖರ ಕಂಬಾರ ಅವರು ಈ ಗೌರವಕ್ಕೆ ಪಾತ್ರರಾದರು.

ಈ ಸಾಹಿತಿಗಳ ಸಾಹಿತ್ಯ ಪ್ರಪಂಚ ಒಂದೇ ರೀತಿಯದ್ದಲ್ಲ. ಕುವೆಂಪು ಅವರ ವಿಶ್ವಮಾನವ ಸಂದೇಶ, ಬೇಂದ್ರೆಯವರ ಕಾವ್ಯಾನುಭವ, ಕಾರಂತರ ಜೀವನಮುಖಿ ದೃಷ್ಟಿ, ಮಾಸ್ತಿಯವರ ಕಥನಶೈಲಿ, ಗೋಕಾಕ್ ಅವರ ಭಾಷಾ ಚಿಂತನೆ, ಅನಂತಮೂರ್ತಿಯವರ ಸಾಮಾಜಿಕ ಆತ್ಮವಿಮರ್ಶೆ, ಕಾರ್ನಾಡರ ನಾಟಕೀಯ ಪ್ರತಿಭೆ ಮತ್ತು ಕಂಬಾರರ ಜನಪದ ಪ್ರಜ್ಞೆ ಕನ್ನಡ ಸಾಹಿತ್ಯಕ್ಕೆ ವಿಭಿನ್ನ ಆಯಾಮಗಳನ್ನು ನೀಡಿವೆ. ಇವರ ಕೃತಿಗಳು ಕನ್ನಡದ ಸಾಹಿತ್ಯಿಕ ಸಾಮರ್ಥ್ಯವನ್ನು ಮಾತ್ರವಲ್ಲ, ಕನ್ನಡ ಸಮಾಜದ ಚಿಂತನೆ ಮತ್ತು ಆತ್ಮಾವಲೋಕನದ ಶಕ್ತಿಯನ್ನೂ ಪ್ರತಿಬಿಂಬಿಸುತ್ತವೆ. ಈ ಸಾಧನೆಗಳನ್ನು ನೆನಪಿಸಿಕೊಳ್ಳುವುದು ಮುಖ್ಯ. ಆದರೆ ಅವುಗಳನ್ನು ಓದುವುದು, ಅರ್ಥಮಾಡಿಕೊಳ್ಳುವುದು ಮತ್ತು ಬದುಕಿನೊಂದಿಗೆ ಬೆಸೆಯುವುದು ಇನ್ನೂ ಮುಖ್ಯ.

ಓದಿನ ಸಂಸ್ಕೃತಿ: ನಮ್ಮ ಮೊದಲ ಜವಾಬ್ದಾರಿ

ಇಂದು ಕನ್ನಡದ ಪುಸ್ತಕಗಳು ಪ್ರಕಟವಾಗುತ್ತಿವೆ. ಸಾಹಿತ್ಯ ಸಮ್ಮೇಳನಗಳು ನಡೆಯುತ್ತಿವೆ. ಪುಸ್ತಕ ಮೇಳಗಳು ಜನರನ್ನು ಆಕರ್ಷಿಸುತ್ತಿವೆ. ಆದರೂ ಕನ್ನಡದ ಶ್ರೇಷ್ಠ ಕೃತಿಗಳು ಹೊಸ ಪೀಳಿಗೆಯ ಓದಿನ ಭಾಗವಾಗಿವೆಯೇ ಎಂಬ ಪ್ರಶ್ನೆ ಉಳಿಯುತ್ತದೆ. ನಮ್ಮ ಮಕ್ಕಳಿಗೆ ಕುವೆಂಪು ಅವರ ಹೆಸರನ್ನು ತಿಳಿದಿರುವುದಷ್ಟೇ ಸಾಕಾಗುವುದಿಲ್ಲ. ಅವರ ಸಾಹಿತ್ಯದ ಮಾನವೀಯ ಸಂದೇಶ ಪರಿಚಯವಾಗಬೇಕು. ಬೇಂದ್ರೆಯವರ ಕಾವ್ಯದ ಸೊಗಸು ಅನುಭವಕ್ಕೆ ಬರಬೇಕು. ಕಾರಂತರ ಕೃತಿಗಳ ಮೂಲಕ ಪ್ರಕೃತಿ, ಸಮಾಜ ಮತ್ತು ಮನುಷ್ಯನ ಸಂಬಂಧ ಅರಿವಾಗಬೇಕು. ಮಾಸ್ತಿಯವರ ಕಥೆಗಳಲ್ಲಿ ಕಾಣುವ ಜೀವನದ ಸೂಕ್ಷ್ಮತೆ ಅರ್ಥವಾಗಬೇಕು. ಅನಂತಮೂರ್ತಿ, ಕಾರ್ನಾಡ್ ಮತ್ತು ಕಂಬಾರರ ಕೃತಿಗಳು ಹೊಸ ಪ್ರಶ್ನೆಗಳನ್ನು ಕೇಳುವ ಮನೋಭಾವ ಬೆಳೆಸಬೇಕು. ಸಾಹಿತ್ಯವನ್ನು ಪರೀಕ್ಷೆಯ ಪಠ್ಯವಾಗಿ ಮಾತ್ರ ಪರಿಚಯಿಸಿದರೆ ಅದರ ಸೃಜನಶೀಲ ಶಕ್ತಿ ಕುಂದುತ್ತದೆ. ಓದನ್ನು ಆನಂದವಾಗಿ, ಚಿಂತನೆಯ ಅವಕಾಶವಾಗಿ ರೂಪಿಸಬೇಕಿದೆ.



ಮುಂದಿನ ಪೀಳಿಗೆಗೆ ನಮ್ಮ ಕೊಡುಗೆ ಏನು?

ಮೊದಲನೆಯದಾಗಿ, ಶಾಲೆ ಮತ್ತು ಕಾಲೇಜುಗಳಲ್ಲಿ ಕನ್ನಡದ ಶ್ರೇಷ್ಠ ಕೃತಿಗಳ ಸರಳ ಪರಿಚಯ ಇರಬೇಕು. ಕೃತಿಗಳ ಸಾರಾಂಶಕ್ಕಿಂತ ಅವುಗಳಲ್ಲಿರುವ ವಿಚಾರ, ಮೌಲ್ಯ ಮತ್ತು ಸೌಂದರ್ಯವನ್ನು ಚರ್ಚಿಸುವ ಅವಕಾಶ ಕಲ್ಪಿಸಬೇಕು.

ಎರಡನೆಯದಾಗಿ, ಮನೆಗಳಲ್ಲಿ ಓದಿನ ವಾತಾವರಣ ಬೆಳೆಸಬೇಕು. ಮಕ್ಕಳಿಗೆ ಪುಸ್ತಕಗಳನ್ನು ಉಡುಗೊರೆಯಾಗಿ ನೀಡುವ ಸಂಸ್ಕೃತಿ ರೂಪುಗೊಳ್ಳಬೇಕು. ಪೋಷಕರು ಓದಿದಾಗ ಮಕ್ಕಳಲ್ಲಿಯೂ ಓದುವ ಆಸಕ್ತಿ ಸಹಜವಾಗಿ ಬೆಳೆಯುತ್ತದೆ.

ಮೂರನೆಯದಾಗಿ, ಜ್ಞಾನಪೀಠ ಸಾಹಿತಿಗಳ ಕೃತಿಗಳು ಡಿಜಿಟಲ್ ಮಾಧ್ಯಮಗಳಲ್ಲಿಯೂ ಸುಲಭವಾಗಿ ಲಭ್ಯವಾಗಬೇಕು. ಆಡಿಯೊ ಪುಸ್ತಕಗಳು, ಇ–ಪುಸ್ತಕಗಳು, ಕೃತಿಗಳ ಪರಿಚಯದ ವಿಡಿಯೊಗಳು ಮತ್ತು ಯುವಜನರಿಗೆ ಸೂಕ್ತವಾದ ಸಾಹಿತ್ಯ ಸಂವಾದಗಳು ಹೊಸ ಓದುಗರನ್ನು ಆಕರ್ಷಿಸಬಹುದು.

ನಾಲ್ಕನೆಯದಾಗಿ, ಅನುವಾದಕ್ಕೂ ಆದ್ಯತೆ ನೀಡಬೇಕು. ಕನ್ನಡದ ಶ್ರೇಷ್ಠ ಸಾಹಿತ್ಯ ಇತರ ಭಾರತೀಯ ಭಾಷೆಗಳಿಗೆ ಮತ್ತು ಜಾಗತಿಕ ಭಾಷೆಗಳಿಗೆ ತಲುಪಬೇಕು. ಅದೇ ರೀತಿ ಇತರ ಭಾಷೆಗಳ ಉತ್ತಮ ಸಾಹಿತ್ಯ ಕನ್ನಡಕ್ಕೆ ಬರಬೇಕು. ಸಾಹಿತ್ಯದ ವಿನಿಮಯ ಭಾಷೆಯ ಬೆಳವಣಿಗೆಯನ್ನು ಮತ್ತಷ್ಟು ಸಮೃದ್ಧಗೊಳಿಸುತ್ತದೆ.

ಹೆಮ್ಮೆಯಿಂದ ಮುಂದಕ್ಕೆ ಸಾಗೋಣ

ಎಂಟು ಜ್ಞಾನಪೀಠ ಪ್ರಶಸ್ತಿಗಳು ನಮ್ಮ ಸಾಹಿತ್ಯದ ಸಾಧನೆಯ ಮೈಲುಗಲ್ಲುಗಳು. ಆದರೆ ಅವು ಕೇವಲ ಹಿಂದಿನ ಕಾಲದ ಹೆಮ್ಮೆಯ ಸಂಕೇತಗಳಾಗಿ ಉಳಿಯಬಾರದು. ಹೊಸ ಓದುಗರನ್ನು, ಹೊಸ ಲೇಖಕರನ್ನು ಮತ್ತು ಹೊಸ ಚಿಂತನೆಗಳನ್ನು ಹುಟ್ಟಿಸುವ ಜೀವಂತ ಪರಂಪರೆಯಾಗಬೇಕು. ಕನ್ನಡದ ಭವಿಷ್ಯವನ್ನು ಕೇವಲ ಪ್ರಶಸ್ತಿಗಳ ಸಂಖ್ಯೆಯಿಂದ ಅಳೆಯಲಾಗುವುದಿಲ್ಲ. ಕನ್ನಡದಲ್ಲಿ ಎಷ್ಟು ಮಕ್ಕಳು ಓದುತ್ತಿದ್ದಾರೆ, ಎಷ್ಟು ಯುವಕರು ಬರೆಯುತ್ತಿದ್ದಾರೆ, ಎಷ್ಟು ಕುಟುಂಬಗಳಲ್ಲಿ ಪುಸ್ತಕಗಳಿಗೆ ಸ್ಥಾನವಿದೆ, ಎಷ್ಟು ಹೊಸ ವಿಚಾರಗಳು ಕನ್ನಡದಲ್ಲಿ ಚರ್ಚೆಯಾಗುತ್ತಿವೆ ಎಂಬುದೂ ಮುಖ್ಯ.

ನಮ್ಮ ಹಿರಿಯ ಸಾಹಿತಿಗಳು ನಮಗೆ ಅಮೂಲ್ಯವಾದ ಸಾಹಿತ್ಯ ಸಂಪತ್ತನ್ನು ನೀಡಿದ್ದಾರೆ. ಅದನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ನಮ್ಮದು.

ಜ್ಞಾನಪೀಠಗಳ ಕನ್ನಡವನ್ನು ಓದುವುದರ ಮೂಲಕ, ಬದುಕುವುದರ ಮೂಲಕ ಮತ್ತು ಹೊಸದಾಗಿ ಸೃಷ್ಟಿಸುವುದರ ಮೂಲಕ ಮುಂದುವರಿಸುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,